DBS Live more, Bank less

# Visa Virtual Debit Card ಮತ್ತು Visa International Debit Card ನಿಯಮ ಮತ್ತು ಷರತ್ತುಗಳು

## 5.1 Debit Card ನಿಯಮ ಮತ್ತು ಷರತ್ತುಗಳು

ಈ ನಿಯಮ ಮತ್ತು ಷರತ್ತುಗಳು ನಿಮ್ಮ Debit Cardಗೆ ಅನ್ವಯವಾಗುತ್ತವೆ. Debit Card ಮೇಲೆ ಸಹಿ ಮಾಡುವ ಅಥವಾ ಬಳಸುವ ಮೊದಲು ಅವುಗಳನ್ನು ಎಚ್ಚರಿಕೆಯಿಂದ ಓದಿ. ನೀವು ಈ ನಿಯಮ ಮತ್ತು ಷರತ್ತುಗಳನ್ನು ಓದುವಾಗ "ನೀವು", "ನಿಮ್ಮ" ಮತ್ತು "ಕಾರ್ಡ್ ಸದಸ್ಯ" ಎಂದರೆ digibank e-wallet Account ಅಥವಾ digiSavings ಹೊಂದಿರುವ ವ್ಯಕ್ತಿಯಾಗಿರುತ್ತಾನೆ ಎಂದು ಭಾವಿಸತಕ್ಕದ್ದು. ಇಲ್ಲಿ ಬಳಕೆಯಾಗಿರುವ "ನಾವು", "ನಮ್ಮ" ಮತ್ತು "ಬ್ಯಾಂಕ್" ಎಂಬ ಪದಗಳು DBS Bank India Limited ಮತ್ತು ಅವರ ಉತ್ತರಾಧಿಕಾರಿಗಳು ಹಾಗೂ ಅವರಿಂದ ನೇಮಿಸಲ್ಪಟ್ಟ ವ್ಯಕ್ತಿಗಳನ್ನು ಪ್ರತಿನಿಧಿಸುತ್ತವೆ.

## 5.2 ಅನ್ವಯವಾಗುವ ನಿಯಮಗಳು

ಇಲ್ಲಿ ಕೊಡಲಾಗಿರುವ ನಿಯಮ ಮತ್ತು ಷರತ್ತುಗಳು ನಿಮ್ಮ ಮತ್ತು DBS Bank India Limited ನಡುವಿನ ಒಪ್ಪಂದವಾಗಿರುತ್ತವೆ. ಖಾತೆ ಅಥವಾ digiSavings ತೆರೆಯುವ ಮೂಲಕ ನೀವು ಈ ನಿಯಮ ಮತ್ತು ಷರತ್ತುಗಳನ್ನು ಭೇಷರತ್ ಆಗಿ ಒಪ್ಪಿಕೊಂಡಿದ್ದು, ಇದಕ್ಕೆ ಸಂಬಂಧಿಸಿದ RBI Regulations, Exchange Control regulations of Reserve Bank of India ("RBI"), Foreign Exchange Management Act 1999 ಇಂತಹ ನಿಯಮಗಳನ್ನು ಕಾಲ ಕಾಲಕ್ಕೆ ತಿದ್ದುಪಡಿ ಅಥವಾ ಬದಲಾವಣೆ ಮಾಡಬಹುದಾದ ಹಾಗೂ ಇದರ ಅಡಿಯಲ್ಲಿ ಬರುವ ಎಲ್ಲಾ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸುವ ಹೊಣೆಗಾರಿಕೆ ನಿಮ್ಮದಾಗಿರುತ್ತದೆ.

ಈ ನಿಯಮ ಮತ್ತು ಷರತ್ತುಗಳು digibank e- wallet ಅಥವಾ digiSavings ಗೆ ಸಂಬಂಧಿಸಿದ ನಿಯಮ ಮತ್ತು ಷರತ್ತುಗಳಿಗೆ ಪೂರಕವಾಗಿದ್ದು, ಯಾವುದೇ ರೀತಿಯಲ್ಲೂ ಇವುಗಳಿಗೆ ವ್ಯತಿರಿಕ್ತವಾಗಿರುವುದಿಲ್ಲ. ನೀವು, Debit Card ಗೆ ಸಂಬಂಧಿಸಿದ ಸೇವೆ/ಸವಲತ್ತುಗಳನ್ನು ಉಪಯೋಗಿಸುವಾಗ, DBS Bank India Limited ಅಂತಹ ಸೇವೆ ಮತ್ತು ಸವಲತ್ತುಗಳ ಮೇಲೆ ಕಾಲ ಕಾಲಕ್ಕೆ ಜಾರಿ ಮಾಡುವ ನಿಯಮ ಮತ್ತು ಷರತ್ತುಗಳಿಗೆ ಎಲ್ಲಾ ಸಮಯದಲ್ಲೂ ಬದ್ಧರಾಗಿರುತ್ತೀರಿ.

## 5.3 ವ್ಯಾಖ್ಯಾನಗಳು

ಬೇರೆ ರೀತಿ ವ್ಯಾಖ್ಯಾನಿಸದ ಹೊರತು, ಕೆಳಗಿನ ನಿಯಮಗಳನ್ನು ಕೆಳಗೆ ಹೇಳಿರುವಂತೆ ಅರ್ಥೈಸಿಕೊಳ್ಳಬೇಕು. ಏಕವಚನದಲ್ಲಿರುವ ಪದಗಳು ಏಕವಚನ ಹಾಗೂ ಬಹುವಚನ ಎರಡನ್ನೂ ಒಳಗೊಂಡಿರುತ್ತದೆ. ಪುರುಷ ಸೂಚಕವಾದ ಪದಗಳು ಪುರುಷ, ಸ್ತ್ರೀ ಹಾಗೂ ತೃತೀಯ ಲಿಂಗಿಗಳನ್ನೂ ಒಳಗೊಂಡಿರುತ್ತವೆ. ಒಬ್ಬ ವ್ಯಕ್ತಿಯನ್ನು ಉದ್ದೇಶಿಸಿ ಹೇಳಿರುವ ಹೇಳಿಕೆಗಳು ಸಂದರ್ಭಾನುಸಾರವಾಗಿ ಒಬ್ಬ ವ್ಯಕ್ತಿ, ಕಂಪನಿ ಅಥವಾ ಒಂದು ಟ್ರಸ್ಟ್ ಅನ್ನು ಸೂಚಿಸುತ್ತವೆ ಎಂದು ಪರಿಗಣಿಸಬೇಕು. ಕಲಂ ಅಥವಾ ಇನ್ನಿತರ ತಲೆಬರಹಗಳನ್ನು ವಿಷಯವನ್ನು ಸುಲಭವಾಗಿ ತಿಳಿಸಲು ಬಳಸಲಾಗಿದ್ದು, ಅದು ಕೆಳಗಿನ ಷರತ್ತುಗಳ ವ್ಯಾಖ್ಯಾನದ ಮೇಲೆ ಯಾವುದೇ ರೀತಿಯಲ್ಲೂ ಪರಿಣಾಮ ಬೀರುವುದಿಲ್ಲ. ಈ ಒಪ್ಪಂದದಲ್ಲಿ, ಬೇರೆ ರೀತಿ ವ್ಯಾಖ್ಯಾನಿಸದ ಹೊರತು:

a. “ಖಾತೆ” ಎಂದರೆ, digibank e-wallet ಮತ್ತು digiSavings ಎರಡನ್ನು ಅಥವಾ ಅವುಗಳಲ್ಲಿ ಯಾವುದಾದರೂ ಒಂದನ್ನು ಪರಿಗಣಿಸಬೇಕು.
b. "ATM" ಎಂದರೆ, ನಮಗೆ ಸೇರಿದ ಅಥವಾ ಹಂಚಿಕೆಯಾಗಿರುವ ಜಾಲದಲ್ಲಿನ ಯಾವುದೇ ಬ್ಯಾಂಕ್‌ಗೆ ಸೇರಿರುವ ಆಟೋಮೇಟೆಡ್ ಟೆಲ್ಲರ್ ಮಷೀನ್ ಅಥವಾ ಕಾರ್ಡ್ ಉಪಯೋಗಿಸುವ ಮಷೀನ್ ಅಥವಾ ಉಪಕರಣವಾಗಿರುತ್ತದೆ. ನೀವು ನಮ್ಮಲ್ಲಿ ಹೊಂದಿರುವ ಖಾತೆಯ ನಿಧಿಯನ್ನು Visa International Debit Card ಬಳಸಿ ಉಪಯೋಗಿಸಿಕೊಳ್ಳಬಹುದು.
c. "ATM ಮಿತಿ" ಎಂದರೆ, ಹಣ ವಾಪಸ್ ಪಡೆಯಲು ಬ್ಯಾಂಕ್ ನಿಗದಿಪಡಿಸಿರುವ ಗರಿಷ್ಠ ಮಿತಿ ಮತ್ತು/ಅಥವಾ ದಿನವೊಂದಕ್ಕೆ ಅಥವಾ ಒಂದು ಸಲಕ್ಕೆ ನೀವು ATM ಮೂಲಕ ಮಾಡಬಹುದಾದ ಯಾವುದೇ ವಹಿವಾಟಿನ ಮಿತಿಯಾಗಿರುತ್ತದೆ.
d. "ಕಾರ್ಡ್ ವಹಿವಾಟು" ಎಂದರೆ, ಯಾವುದೇ ಸರಕು ಮತ್ತು ಸೇವೆಗಳನ್ನು ಪಡೆಯಲು ಮಾಡಿರುವ ಪಾವತಿ ಅಥವಾ ವಿಧಿಸಿರುವ ಶುಲ್ಕ ಮತ್ತು/ಅಥವಾ ಸಹಿ ಮಾಡಿ ಅಥವಾ PIN ಬಳಸಿ ಅಥವಾ ಇನ್ಯಾವುದೇ ವಿಧದಲ್ಲಿ Debit Card ಇಂದ ಅಥವಾ Debit Card ಮೂಲಕ ಪಡೆದಿರುವ ಸೌಲಭ್ಯವಾಗಿರುತ್ತದೆ. ಈ ಸೌಲಭ್ಯವು ನಿಮ್ಮ ಸಹಿ ಇರುವ ಅರ್ಜಿ ಅಥವಾ ಮಾರಾಟ ಹುಂಡಿ ಅಥವಾ ಯಾವುದೇ ರಶೀದಿ ಅಥವಾ ನಾವು ಕೇಳಿರುವ ಯಾವುದೇ ಕಡತವಾಗಿರಬಹುದು.
e. "ಕಾರ್ಡ್-ಇಲ್ಲದ ವಹಿವಾಟು" ಎಂದರೆ, ವಹಿವಾಟು ನಡೆಯುವ ಸ್ಥಳದಲ್ಲಿ ಕಾರ್ಡ್ ಹೊಂದಿರುವ ಸದಸ್ಯ ಮತ್ತು ಕಾರ್ಡ್ ಇಲ್ಲದಾಗ ನಡೆದಿರುವ ವಹಿವಾಟು ಆಗಿರುತ್ತದೆ. ಸಾಮಾನ್ಯ Card-Not-Present ವ್ಯವಹಾರಗಳು, ಇಂಟರ್‌ನೆಟ್ ಬಳಸಿ ಮಾಡಿದ ವ್ಯವಹಾರಗಳು, ಮೇಲ್, ದೂರವಾಣಿ, ನಕಲು ಆರ್ಡರ್‌ಗಳು ಅಥವಾ ಕಾಯ್ದಿರಿಸುವಿಕೆ ಅಥವಾ ನಿಯಮಿತ ಪಾವತಿಗಳನ್ನು ಒಳಗೊಂಡಿರುತ್ತವೆ ಹಾಗೂ ಈ ವಹಿವಾಟುಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. Visa Virtual Debit Card ಬಳಸಿ ಮಾಡಿರುವ ಎಲ್ಲಾ ವಹಿವಾಟುಗಳೂ Card-not-present Transactions ಆಗಿರುತ್ತವೆ.
f. "digiSavings" ನಮ್ಮಿಂದ ಕೊಡಮಾಡಿರುವ ಉಳಿತಾಯ ಖಾತೆಯಾಗಿದ್ದು, Debit Card ಅಥವಾ ವಿದ್ಯುನ್ಮಾನ ಸೇವೆಗಳ ಮೂಲಕ ಉಪಯೋಗಿಸಲು ಅರ್ಹತೆ ಹೊಂದಿರುವ ಖಾತೆಯಾಗಿರುತ್ತದೆ.
g. "digibank ಆ್ಯಪ್" ಎಂದರೆ, ಮೊಬೈಲ್‌ಗಳಲ್ಲಿ ಬಳಸಬಹುದಾದ ಅಪ್ಲಿಕೇಶನ್ ಆಗಿದ್ದು, ಇದನ್ನು ನೀವು ನಿಗದಿಪಡಿಸಿದ ಜಾಗದಿಂದ ಅಥವಾ ಅಪ್ಲಿಕೇಶನ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
h. "digibank ಇ-ವ್ಯಾಲೆಟ್ ಅಥವಾ digibank ಇ-ವ್ಯಾಲೆಟ್ ಖಾತೆ" ಎಂದರೆ, digibank app ಮೂಲಕ digibank ಕೊಡಮಾಡುವ ಉತ್ಪನ್ನವಾಗಿದೆ. ಇದು ಸೆಮಿ ಕ್ಲೋಸ್ಡ್ ಬಡ್ಡಿ ಇಲ್ಲದ ಪ್ರೀಪೇಯ್ಡ್ ಪಾವತಿ ಸೇವೆಯಾಗಿದ್ದು, ಇದನ್ನು ನೀವು ಮೊಬೈಲ್ ಫೋನ್ ಅಥವಾ ಬೇರಾವುದೇ ಅನುಮತಿಸಿದ ಉಪಕರಣದಲ್ಲಿ ವಾಲೆಟ್(ಹುಂಡಿ) ಆಗಿ ಬಳಸಬಹುದು.
i. "ಎಲೆಕ್ಟ್ರಾನಿಕ್ ಸೇವೆಗಳು" ಎಂದರೆ, ನಮ್ಮಿಂದ ಮತ್ತು/ಅಥವಾ ಬೇರಾವುದೇ ಪಾಲುದಾರರಿಂದ ವಿದ್ಯುನ್ಮಾನ ಮಾಧ್ಯಮದ ಮೂಲಕ ನಿಮಗೆ ಕೊಡಮಾಡುವ ಯಾವುದೇ ಬ್ಯಾಂಕಿಂಗ್ ಮತ್ತು ಇತರ ಸೇವೆ ಅಥವಾ ಸೌಲಭ್ಯಗಳಾಗಿರುತ್ತವೆ. ಇದರಲ್ಲಿ ಯಾವುದೇ ಕಾರ್ಡ್, ವಿದ್ಯುನ್ಮಾನ, ಗಣಕೀಕೃತ ಅಥವಾ ಟೆಲಿಕಮ್ಯೂನಿಕೇಶನ್ ಉಪಕರಣಗಳು ಅಥವಾ ಭಾರತದ ಒಳಗೆ/ಹೊರಗೆ ಖಾತೆಯನ್ನು ಉಪಯೋಗಿಸುವ ವಿಧಾನಗಳು ಹಾಗೂ ಸಂದರ್ಭಕ್ಕೆ ಅನುಸಾರವಾಗಿ ವಿದ್ಯುನ್ಮಾನ ಸೇವೆಗಳನ್ನು ಬಳಸಲು ಉಪಯೋಗಿಸುವ PIN ಮತ್ತು/ಅಥವಾ ಕಾರ್ಡ್ ಸೇರಿರುತ್ತವೆ.

j. “GST” ಎಂದರೆ, ಸರಕು ಮತ್ತು ಸೇವಾ ತೆರಿಗೆಯಾಗಿದ್ದು, ಇದರಲ್ಲಿ ಬೇರೆ ಹೆಸರಿನಿಂದ ಕರೆಯಲ್ಪಡುವ, ಇದರ ಲಕ್ಷಣಗಳನ್ನೇ ಹೊಂದಿರುವ, ಮುಂದೆ ಇದರ ಬದಲಾಗಿ ಬರುವ ತೆರಿಗೆ ಅಥವಾ ಇದರ ಜೊತೆಗೆ ಹೆಚ್ಚುವರಿಯಾಗಿ ಹಾಕುವ ತೆರಿಗೆ ಆಗಿರುತ್ತದೆ.

k. "ಸೂಚನೆಗಳು" ಎಂದರೆ, ಹಣಕ್ಕೆ ಸಂಬಂಧಿಸಿದ ಮಾಹಿತಿ ಅಥವಾ ನಿಮ್ಮ ಅಥವಾ ಯಾವುದೇ ಬಳಕೆದಾರರ ಅಥವಾ ಖಾತೆ ಅಥವಾ ಯಾವುದೇ ವಹಿವಾಟಿನ ನಿರ್ದಿಷ್ಟ ವಿಷಯಗಳಾಗಿರುತ್ತವೆ.

l. ಅಂತರಾಷ್ಟ್ರೀಯ ವಹಿವಾಟುಗಳು" ಎಂದರೆ ನೀವು ಭಾರತ, ನೇಪಾಳ ಮತ್ತು ಭೂತಾನ್ ದೇಶಗಳ ಹೊರಗೆ Debit Card ಮೂಲಕ ಮಾಡಿರುವ ವಹಿವಾಟುಗಳನ್ನು ಸೂಚಿಸುತ್ತವೆ.

m. "ವ್ಯಾಪಾರಿ" ಎಂದರೆ ಬ್ಯಾಂಕ್, ಅಥವಾ ಮಾಸ್ಟರ್ ಕಾರ್ಡ್ ಇಂಟರ್ನ್ಯಾಷನಲ್, ವೀಸಾ ಇಂಟರ್ನ್ಯಾಷನಲ್, ಅಥವಾ ಯಾವುದೇ ಇತರ ಎಲೆಕ್ಟ್ರಾನಿಕ್ ಸೇವಾ ಪೂರೈಕೆದಾರರ ಯಾವುದೇ ಸದಸ್ಯ ಅಥವಾ ಪರವಾನಗಿದಾರರೊಂದಿಗೆ ಒಪ್ಪಂದಕ್ಕೆ ಪ್ರವೇಶಿಸುವ ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ನಿಗಮವಾಗಿದ್ದು. ಅವರು/ಅದು ಸರಕು, ಸೇವೆ ಅಥವಾ ಶುಲ್ಕಗಳನ್ನು ನೀಡಿದಾಗ ಅಥವಾ ಉಂಟುಮಾಡಿದಾಗ ಕಾರ್ಡ್ ಮೂಲಕ ಪಾವತಿಗಯನ್ನು ಅನುಮೋದಿಸುವ ಮತ್ತು/ಅಥವಾ ಸ್ವೀಕರಿಸುವ ಸಂಬಂಧಿಪಟ್ಟ ವ್ಯಕ್ತಿ/ಸಂಸ್ಥೆ.

n. "ಭಾಗಿಗಳು" ಎಂದರೆ, ಭಾರತದಲ್ಲಿ ಕಾಲ ಕಾಲಕ್ಕೆ ವಿದ್ಯುನ್ಮಾನ ಸೇವೆಗಳು ಅಥವಾ ಕಾರ್ಡ್‌ಗೆ ಸಂಬಂಧಿಸಿದ ಯಾವುದೇ ಸರಕು ಮತ್ತು ಸೇವೆಗಳನ್ನು ಕೊಡುವ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸಿರುವ ಅಥವಾ ತೊಡಗಿಕೊಂಡಿರುವ ಯಾವುದೇ ವ್ಯಕ್ತಿ, ಫರ್ಮ್, ಕಂಪನಿ ಅಥವಾ ಸಂಸ್ಥೆಯಾಗಿರುತ್ತದೆ,

o. "PIN" ಎಂದರೆ, ಕಾರ್ಡ್ ಮತ್ತು/ಅಥವಾ ವಿದ್ಯುನ್ಮಾನ ಸೇವೆಗಳನ್ನು ಬಳಸುವುದಕ್ಕಾಗಿ ಬಳಕೆದಾರರು digibank app ಮೂಲಕ ಜನರೇಟ್ ಮಾಡಿದ PIN ಆಗಿರುತ್ತದೆ.

p. "ಪಾಯಿಂಟ್ ಆಫ್ ಸೇಲ್/POS" ವಹಿವಾಟುಗಳು ಎಂದರೆ, ಮರ್ಚೆಂಟ್‌ಗಳ ಮಾರಾಟದ ಸ್ಥಳದಲ್ಲಿ ಮಾಡಿದ ವಹಿವಾಟುಗಳಾಗಿವೆ.

q. "ವಹಿವಾಟು ಮಿತಿ" ಎಂದರೆ, ಒಂದು ದಿನದಲ್ಲಿ ನೀವು ಮಾಡಬಹುದಾದ ಒಟ್ಟು ಕಾರ್ಡ್ ವಹಿವಾಟುಗಳ ಮೇಲೆ ನಾವು ವಿಧಿಸಿರುವ ಗರಿಷ್ಠ ಮಿತಿಯಾಗಿದೆ.

r. "ನಿಯಮ ಮತ್ತು ಷರತ್ತುಗಳು" ಎಂದರೆ, ನಮ್ಮಿಂದ ತಿದ್ದುಪಡಿಯಾದ ಅಥವಾ ಸೇರ್ಪಡೆಯಾದ ಈ ನಿಯಮ ಮತ್ತು ಷರತ್ತುಗಳಾಗಿವೆ.

s. "ವಹಿವಾಟು" ಎಂದರೆ, ಕಾರ್ಡ್ ಅಥವಾ ವಿದ್ಯುನ್ಮಾನ ಸೇವೆಗಳ ಮೂಲಕ ನೀವು ಮಾಡಿರುವ ವಹಿವಾಟು ಅಥವಾ ನೀವು ಜಾರಿ ಮಾಡಿರುವ ಅಥವಾ ನಿಮ್ಮಿಂದ ಜಾರಿಯಾದ ಸೂಚನೆಗಳು ಅಥವಾ ನೀವು ಜಾರಿ ಮಾಡಲು ಉದ್ದೇಶಿಸಿರುವ ಸೂಚನೆಗಳಾಗಿವೆ.

t. "ಬಳಕೆದಾರ" ಎಂದರೆ ನೀವು.

5.4 ಇಂಟರ್‌ನೆಟ್‌ನಲ್ಲಿ Visa Virtual Debit Card ಉಪಯೋಗಿಸಲು ನಿಯಮ ಮತ್ತು ಷರತ್ತುಗಳು.

a. ನಿಮ್ಮ ಕೋರಿಕೆಯ ಮೇರೆಗೆ digibank e-wallet ಅಥವಾ digiSavings ಖಾತೆಯ ಆನ್‌ಲೈನ್ ವಹಿವಾಟುಗಳನ್ನು ನೀವು ನೀಡಿರುವ Visa Virtual Debit Card ಸೂಚನೆಗಳ ಮೂಲಕ ನಡೆಸಲು ನಾವು ನೀಡುತ್ತಿರುವ ಸೇವೆಗಳನ್ನು ನೀವು ಒಪ್ಪಿ ಅಂಗೀಕರಿಸಿರುತ್ತೀರಿ. ಈ ಮೂಲಕ ನಿಮ್ಮ Debit Card ಕಾನೂನು ಬಾಹಿರವಾಗಿ ಹಾಗೂ ಅನಧಿಕೃತವಾಗಿ ಬಳಕೆಯಾಗದಂತೆ ಎಚ್ಚರ ವಹಿಸುತ್ತೇವೆಂದು ಮತ್ತು ನಿಮ್ಮ digibank e-wallet ಅಥವಾ

digiSavings ಖಾತೆಯನ್ನು ಅನಧಿಕೃತ ವ್ಯಕ್ತಿಗಳು ನಿರ್ವಹಿಸದಂತೆ ಎಚ್ಚರ ವಹಿಸುತ್ತೇನೆಂದು ಒಪ್ಪಿಕೊಂಡಿರುತ್ತೀರಿ.

b. ನೀವು digibank Services ಉಪಯೋಗಿಸಿಕೊಂಡು ವ್ಯಾಪಾರಿಗಳಿಗೆ ಮಾಡುವ ಪಾವತಿಯ ವಿವರಗಳನ್ನು ಅವರು ನಮ್ಮೊಂದಿಗೆ ಹಂಚಿಕೊಳ್ಳುವುದಕ್ಕೆ ನಿಮ್ಮ ಕಡೆಯಿಂದ ಯಾವ ಬಗೆಯ ತಕರಾರು ಇರುವುದಿಲ್ಲ.

c. ನೀವು Visa Virtual Debit Card ಅನ್ನು (DBS Bank ನಿರ್ದಿಷ್ಟವಾಗಿ ಹೇಳದ ಹೊರತು) Bank/Visa/MasterCard ಲೋಗೋ ಅಂದರೆ ಸಂಸ್ಥೆಯ ಚಿಹ್ನೆ ತೋರಿಸುವ ಮತ್ತು/ಅಥವಾ ಯಾವುದೇ ಹಂಚಿಕೆಯಾಗಿರುವ ನೆಟ್‌ವರ್ಕ್ ಮತ್ತು/ಅಥವಾ ಕಾಲ ಕಾಲಕ್ಕೆ DBS ಬ್ಯಾಂಕ್ ನಿಂದ ಅಂಗೀಕೃತವಾಗಿರುವ, ಭಾರತದಲ್ಲಿ ಇಂಟರ್‌ನೆಟ್‌ನಲ್ಲಿರುವ ವೆಬ್‌ಸೈಟ್‌ಗಳ ಮೂಲಕ ಸರಕು ಹಾಗೂ ಸೇವೆಗಳನ್ನು ಕೊಳ್ಳುವ ವ್ಯವಸ್ಥೆ ಹೊಂದಿರುವ ಭಾರತದ ಯಾವುದೇ ವೆಬ್‌ಸೈಟ್‌ಗಳಲ್ಲಿ ಉಪಯೋಗಿಸಬಹುದು.

d. ಮಾನ್ಯತೆ ಇರುವ Visa Virtual Debit Card ಎಂದರೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ, ಬ್ಲಾಕ್ ಅಥವಾ ಹಾಟ್‌ಲಿಸ್ಟ್ ಆಗಿಲ್ಲದ Debit Card ಎಂದು ಒಪ್ಪಿಕೊಳ್ಳುತ್ತೇವೆ. ಒಂದು ವೇಳೆ Debit Card ಹಾಟ್‌ಲಿಸ್ಟ್ ಅಥವಾ ಬ್ಲಾಕ್ ಆಗಿದ್ದರೆ ತಕ್ಷಣದಿಂದಲೇ ಜಾರಿಯಾಗುವಂತೆ ನೀವು ಯಾವುದೇ ವಹಿವಾಟುಗಳನ್ನು ಮಾಡಲಾಗುವುದಿಲ್ಲ.

e. ಖಾತೆಯಲ್ಲಿನ ಬಾಕಿ, ಖಾತೆಯಲ್ಲಿನ ಮೊತ್ತ ಹಾಗೂ ಪಾವತಿ ವಿವರಗಳು ಸರಿಯಾಗಿವೆ ಎಂದು ನೋಡಿಕೊಳ್ಳುವ ಹೊಣೆಗಾರಿಕೆ ನಿಮ್ಮ ಮೇಲೆ ಇರುತ್ತದೆ.

f. ವ್ಯಾಪಾರಿಗೆ ಅಗತ್ಯವಿರುವ ಪಾವತಿಗಳನ್ನು ಮಾಡುತ್ತೇನೆಂದು ನೀವು ಒಪ್ಪಿಕೊಂಡಿರುತ್ತೀರಿ. ವ್ಯಾಪಾರಿಯು ನಿಮ್ಮ ಪಾವತಿ ಅಪೂರ್ಣವಾಗಿದೆ ಅಥವಾ ಸರಿಯಾಗಿಲ್ಲ ಎಂದು ಅಥವಾ ಇನ್ಯಾವುದೇ ಕಾರಣ ನೀಡಿ ನಿಮ್ಮ ಪಾವತಿಯನ್ನು ತಿರಸ್ಕರಿಸಿದರೆ ನೀವು ನಮ್ಮನ್ನು ಜವಾಬ್ದಾರರನ್ನಾಗಿ ಮಾಡುವುದಿಲ್ಲ. ನೀವು ನಮಗೆ ಕೊಟ್ಟಿರುವ ಸೂಚನೆಗಳು ಹಾಗೂ ನಮ್ಮೊಂದಿಗೆ ನಡೆಸಿದ ವ್ಯವಹಾರಗಳು ನಿರ್ಣಾಯಕ ಪುರಾವೆಗಳಾಗಿದ್ದು ಎಲ್ಲಾ ಉದ್ದೇಶಗಳಿಗೂ ಬದ್ಧವಾಗಿದ್ದು ಯಾವುದೇ ವಿಚಾರಣೆಯ ಸಮಯದಲ್ಲಿ ನಿರ್ಣಾಯಕ ಪುರಾವೆಗಳಾಗಿ ಬಳಸಬಹುದಾಗಿರುತ್ತದೆ.

g. mVisa/Bharat QR ಮೂಲಕ ಪಾವತಿ ಸ್ವೀಕರಿಸುವ ಅಥವಾ 3D secure ಅಥವಾ 2nd factor authentication ಹೊಂದಿರುವ, ವೆಬ್‌ಸೈಟ್/ವ್ಯಾಪಾರಿಗಳು ಮಾತ್ರ Visa Virtual Debit Card ಮೂಲಕ ವಹಿವಾಟು ಮಾಡಲು ಅವಕಾಶ ಮಾಡಿಕೊಡುತ್ತವೆ ಎಂದು ನೀವು ಅರ್ಥ ಮಾಡಿಕೊಂಡಿರುತ್ತೀರಿ. ಹಂಚಿದ ನೆಟ್‌ವರ್ಕ್ ಬಗೆಬಗೆಯ ಪ್ರಯೋಜನ ಹಾಗೂ ಸೇವೆಗಳನ್ನು ಕೊಡಮಾಡಬಹುದಾಗಿದ್ದು, ಈ ಆನ್‌ಲೈನ್ ವ್ಯವಹಾರ ಪೂರ್ಣಗೊಳಿಸಲು ನೀವು ಇನ್ನೂ ಹೆಚ್ಚುವರಿ ವಿವರಗಳನ್ನು ಕೊಡಬೇಕಾಗಬಹುದು. ಇದನ್ನು ನೀವು ಅರ್ಥ ಮಾಡಿಕೊಂಡಿದ್ದು ಒಪ್ಪಿಕೊಂಡಿರುತ್ತೀರಿ.

h. ಮೇಲೆ ಹೇಳಿದ ಹಂಚಿದ ನೆಟ್‌ವರ್ಕ್ ಕೊಡಮಾಡುವ ಕಾರ್ಯಸೂಚಿ ಹಾಗೂ ಸೇವೆಗಳನ್ನು ವ್ಯಾಪಾರಿಯ ಇಂಟರ್‌ನೆಟ್ ವೆಬ್‌ಸೈಟ್‌ನಲ್ಲಿ ಹೆಚ್ಚುವರಿಯಾಗಿ ಲೋಗೋ/ಟ್ರೇಡ್ಮಾರ್ಕ್/ಸಿಂಬಲ್ ತೋರಿಸುವ ಮೂಲಕ ಜಾಹೀರುಗೊಳಿಸುವುದಕ್ಕೆ ನೀವು ಒಪ್ಪಿರುತ್ತೀರಿ.

i. ಇಂಟರ್ನೆಟ್‌ನಲ್ಲಿ Visa Virtual Debit Card ಉಪಯೋಗಿಸುವ ಸಲುವಾಗಿ ನಿಮ್ಮ ಕಾರ್ಡ್ ನಂಬರ್, Card Verification Value (CVV) security ಅಂಕಿಗಳು, Debit Card expiry date, ನಮ್ಮಲ್ಲಿ ನೀವು ನೋಂದಾಯಿಸಿಕೊಂಡಿರುವ ಮೊಬೈಲ್‌ಗೆ ಕಳುಹಿಸಿರುವ One Time Pin (OTP) ಎಲ್ಲವನ್ನೂ ಹಂಚಿಕೊಳ್ಳಲು ಒಪ್ಪಿಕೊಂಡಿರುತ್ತೀರಿ. Visa Virtual Debit Card ಉಪಯೋಗಿಸಿಕೊಂಡು mVisa/Bharat QR ಮೂಲಕ ವ್ಯಾಪಾರಿಗೆ ಪಾವತಿ ಮಾಡಲು,

Live more, Bank less

ನೀವು digibank appಗೆ ಲಾಗಿನ್ ಆಗಿ, ಸಂಬಂಧಿಸಿದ Quick Response (QR) code ಸ್ಕ್ಯಾನ್ ಮಾಡಿ, ನಿಮ್ಮ Soft Token ID ಬಳಸಿ ದೃಢೀಕರಿಸಲು ಒಪ್ಪಿಕೊಂಡಿರುತ್ತೀರಿ.

j. (i)ಇಂಟರ್‌ನೆಟ್ ವೆಬ್‌ಸೈಟ್‌ನ ದೃಢೀಕರಣ ಫೀಲ್ಡ್‌ನಲ್ಲಿ ಪೂರ್ಣವಾದ ಹಾಗೂ ಸರಿಯಾದ ಮಾಹಿತಿ ಒದಗಿಸದ ಹೊರತು (ii) ವ್ಯಾಪಾರಿಯ QR code ಸರಿಯಾಗಿ ಸ್ಕ್ಯಾನ್ ಮಾಡದ ಹೊರತು, ನೀವು Visa Virtual Debit Card ಬಳಸಿ ಪಾವತಿ ಮಾಡಲು ಸಾಧ್ಯವಾಗುವುದಿಲ್ಲ. ಇದಕ್ಕೆ ನೀವು ಒಪ್ಪಿಗೆ ಸೂಚಿಸಿರುತ್ತೀರಿ.

k. ಒಂದು ವೇಳೆ ನೀವು ಪೂರ್ಣಗೊಂಡಿರುವ ವ್ಯವಹಾರವನ್ನು ರದ್ದು ಮಾಡಲು ಬಯಸಿದರೆ, ಅಥವಾ ಕೊಂಡ ವಸ್ತುವನ್ನು ವಾಪಸ್ ಮಾಡುತ್ತಿದ್ದರೆ, ಈ ಮೊದಲು ವ್ಯಾಪಾರಿಯೊಂದಿಗೆ ಮಾಡಿರುವ ವ್ಯವಹಾರವನ್ನು ರದ್ದುಗೊಳಿಸಬೇಕಾಗುತ್ತದೆ. ದೃಢೀಕರಿಸಲಾದ ರದ್ದುಗೊಂಡಿರುವ ರಶೀದಿಯನ್ನು ನಿಮ್ಮ ಬಳಿ ಇಟ್ಟುಕೊಂಡಿರಬೇಕು.

l. ಅಂತಹ ವ್ಯವಹಾರಗಳಿಂದ ವಾಪಸ್ಸಾದ/ರೀಫಂಡ್ ಆದ ಡೆಬಿಟ್‌ಗಳನ್ನು ನಮ್ಮ ಕೈಯಾರೆ ನಿರ್ವಹಿಸಲಾಗುತ್ತದೆ. ನೀವು ದೃಢೀಕರಿಸಲಾದ ರದ್ದುಗೊಂಡಿರುವ ರಶೀದಿಯನ್ನು ಅಗತ್ಯಬಿದ್ದಲ್ಲಿ ಹಾಜರು ಪಡಿಸಬೇಕಾಗುತ್ತದೆ.

m. ಸರಕು ಅಥವಾ ಸೇವೆಗಳುಗಳು ಪೂರೈಕೆ/ಡೆಲಿವರಿ ಆಗದ ಕಾರಣ/ಸರಕು ಮತ್ತು ಸೇವೆಗಳನ್ನು ತಿರಸ್ಕರಿಸಿದ ಕಾರಣ ಉಂಟಾದ ವಾಪಸ್ಸಾತಿ/ರೀಫಂಡ್‌ಗಳನ್ನು ಸಂಬಂಧಿಸಿದ ವ್ಯಾಪಾರಿಯ ಕೋರಿಕೆ ಮೇರೆಗೆ ಮಾತ್ರ ಮಾಡಲಾಗುತ್ತದೆ. ಪಾವತಿಯನ್ನು ವಾಪಸ್/ರೀಫಂಡ್ ಮಾಡುವಾಗ ನಿಮ್ಮ ವಹಿವಾಟಿನ ಪ್ರೊಸೆಸಿಂಗ್ ಶುಲ್ಕವನ್ನು ನಾವು ವಾಪಸ್/ರೀಫಂಡ್ ಮಾಡುವುದಿಲ್ಲ.

n. ನೀವು ಈ ಎಲ್ಲಾ ನಿಯಮ ಮತ್ತು ಷರತ್ತುಗಳನ್ನು ಯಾವುದೇ ಪೂರ್ವಾಗ್ರಹವಿಲ್ಲದೇ ಒಪ್ಪಿರುತ್ತೀರಿ. ಈ ಕೆಳಗಿನ ಕಾರಣಗಳಿಂದ ನಿಮಗೆ ಉಂಟಾಗುವ ನಷ್ಟ ಅಥವಾ ಹಾನಿಗೆ ನಾವು ಯಾವುದೇ ಸಮಯದಲ್ಲೂ ಹೊಣೆಗಾರರಾಗಿರುವುದಿಲ್ಲ. (i)ನಿಮಗೆ ಪೂರೈಕೆಯಾದ ಸರಕು ಅಥವಾ ಸೇವೆಯಲ್ಲಿ ಯಾವುದೇ ನ್ಯೂನ್ಯತೆ ಇದ್ದಾಗ (ii)ವ್ಯಾಪಾರಿಯು ಯಾವುದೇ ಕಾರಣ ಕೊಟ್ಟು Visa Virtual Debit Card ಮೂಲಕ ಮಾಡಲಾದ ಪಾವತಿಯನ್ನು ನಿರಾಕರಿಸಿದಾಗ (iii)ಕಂಪ್ಯೂಟರ್ ಟರ್ಮಿನಲ್‌ನಲ್ಲಿ ಯಾವುದೇ ತೊಂದರೆ ಅಥವಾ ತಾಂತ್ರಿಕ ಅಡಚಣೆ/ತಡೆ ಉಂಟಾದಾಗ (iv)ಯಾವುದೇ ಅನಧಿಕೃತ ವ್ಯಕ್ತಿಯೊಂದಿಗೆ ನಿಮ್ಮ ಖಾತೆಗೆ ಸಂಬಂಧಿಸಿದ ಮಾಹಿತಿಯನ್ನು ಹಂಚಿಕೊಂಡಾಗ (v)ನಿಮ್ಮಿಂದ ನಮಗೆ ದೊರೆತಿರುವ ಮಾಹಿತಿಯ ವಿವರಗಳಲ್ಲಿ ಯಾವುದೇ ತಪ್ಪಾಗಿದ್ದಾಗ, ತಪ್ಪಾಗಿ ವ್ಯಾಖ್ಯಾನಿಸಿದಾಗ, ದೋಷವಿದ್ದಾಗ ಅಥವಾ ಅಪೂರ್ಣವಾಗಿದ್ದಾಗ (vi) ಸಂಬಂಧಪಟ್ಟ ವ್ಯಾಪಾರಿ(ಗಳು) ನಿಮಗೆ ಪಾವತಿ ಮಾಡಬೇಕಾದ ಮೊತ್ತ ಮತ್ತು ನೀವು ನೀಡಿರುವ ಸೂಚನೆಗಳಲ್ಲಿ ಹೊಂದಾಣಿಕೆ ಇಲ್ಲದಿದ್ದಾಗ (vii) ನಿಮ್ಮ ಮೊಬೈಲ್ QR code ಸ್ಕ್ಯಾನ್ ಮಾಡಲು ಅಸಮರ್ಥವಾಗಿದ್ದಾಗ (viii) ವ್ಯಾಪಾರಿಯು ರದ್ದತಿ/ರೀಫಂಡ್ ಕೋರಿಕೆ ಮಾಡಲು ವಿಫಲನಾದಾಗ

o. ಸರಕು ಮತ್ತು ಸೇವೆಗಳನ್ನು ಪೂರೈಸುವುದು ಸೇರಿದಂತೆ ಆದರೆ ಅಷ್ಟಕ್ಕೆ ಮಾತ್ರ ಸೀಮಿತವಾಗಿಲ್ಲದೆ ಇಂಟರ್ನೆಟ್ ವೆಬ್‌ಸೈಟ್‌ಗಳಲ್ಲಿ ನೀವು ಮಾಡುವ ವ್ಯವಹಾರಗಳಿಗೆ ನಾವು ಜವಾಬ್ದಾರರಾಗಿರುವುದಿಲ್ಲ ಎಂದು ನೀವು ಒಪ್ಪಿರುತ್ತೀರಿ. ಈ Debit Card ಸೌಲಭ್ಯವು ನಿಮಗೆ ಕೇವಲ ಸರಕುಗಳನ್ನು ಕೊಳ್ಳಲು ಮತ್ತು/ಹಾಗೂ ಸೇವೆಗಳನ್ನು ಬಳಸಿಕೊಳ್ಳಲು ನೀಡಲಾಗಿದ್ದು ನಾವು ಈ ಸರಕಿನ ಗುಣಮಟ್ಟ, ಪೂರೈಕೆ ಅಥವಾ ಇನ್ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಗ್ಯಾರೆಂಟಿ ಕೊಡುವುದಿಲ್ಲ.

p. ಇಂಟರ್‌ನೆಟ್ ವೆಬ್‌ಸೈಟ್, ವಹಿವಾಟು ಪೂರ್ಣಗೊಳಿಸಲು ನಮಗೆ ಅಥವಾ ನಮ್ಮ ಹಂಚಿಕೆದಾರ ನೆಟ್‌ವರ್ಕ್‌ಗೆ ಅಗತ್ಯವಿರುವ ವಿವರಗಳನ್ನು ತೆಗೆದುಕೊಳ್ಳಲು

ಅಸಮರ್ಥವಾಗಿದ್ದ ಪಕ್ಷದಲ್ಲಿ, ಆ ವಹಿವಾಟನ್ನು ಪೂರ್ಣಗೊಂಡ ವಹಿವಾಟು ಎಂದು ಪರಿಗಣಿಸಲಾಗುವುದಿಲ್ಲ. ಈ ಸಂದರ್ಭದಲ್ಲಿ ಅಪೂರ್ಣವಾದ/ಪರಿಷ್ಕರಿಸಲಾಗದ/ತಿರಸ್ಕೃತವಾದ ವಹಿವಾಟುಗಳಿಗೆ ನಾವು ಹೊಣೆಗಾರರಾಗಿರುವುದಿಲ್ಲ. ಇದಕ್ಕೆ ನೀವು ಸಂಪೂರ್ಣವಾಗಿ ಒಪ್ಪಿರುತ್ತೀರಿ.

q. ಆನ್‌ಲೈನ್ ಖರೀದಿ ವ್ಯವಹಾರ ಪೂರ್ಣಗೊಂಡ ನಂತರ, ನೀವು ಖರೀದಿಸಿರುವ ಮೊತ್ತದಷ್ಟು ಹಣವನ್ನು ನಿಮ್ಮ Debit Card ಗೆ ಜೋಡಣೆಯಾಗಿರುವ digibank e-walet ಅಥವಾ digiSavings ಖಾತೆಯಿಂದ ತಕ್ಷಣವೇ ಕಡಿತಗೊಡಿಸಲು ನೀವು ಒಪ್ಪಿಕೊಂಡಿರುತ್ತೀರಿ.

r. ನೀವು ಖರೀದಿಸಿರುವ ವಸ್ತುವನ್ನು ನಿಮಗೆ ತಲುಪಿಸುವ ಅಥವಾ ವಸ್ತು ನಿಮಗೆ ತಲುಪಿದಾಗ ಅದು ಇರುವ ಸ್ಥಿತಿಗೆ ನಾವು ಜವಾಬ್ದಾರರಾಗಿರುವುದಿಲ್ಲ. ನಮ್ಮ ಪಾತ್ರವು ವಸ್ತುವಿನ ಮಾಹಿತಿ ಹಾಗೂ ಪಾವತಿ ಸೇವೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ವಸ್ತುವಿನ ಪೂರೈಕೆ ಮತ್ತು ಅದರ ಸ್ಥಿತಿಯ ಬಗ್ಗೆ ಯಾವುದೇ ತಕರಾರುಗಳಿದ್ದಲ್ಲಿ ಅದಕ್ಕೆ ಸಂಬಂಧಪಟ್ಟ ವ್ಯಾಪಾರಿಯ ಬಳಿ ಬಗೆಹರಿಸಿಕೊಳ್ಳಬೇಕು. ನೀವು ಕೊಂಡ ಸರಕಿನ ಪೂರೈಕೆಯಲ್ಲಿನ ಅಡಚಣೆ, ಸರಕು ಪೂರೈಕೆಯಾಗದಿರುವುದು ಅಥವಾ ಹಾನಿಯಾಗಿರುವ ಸರಕು ಪೂರೈಕೆಯಾಗುವುದೂ ಸೇರಿದಂತೆ, ವ್ಯಾಪಾರಿಗಳಿಂದ ನೀವು ಕೊಳ್ಳುವ ಸರಕು, ಸರಕಿನ ಗ್ಯಾರೆಂಟಿ ಅಥವಾ ಖರೀದಿಸಿರುವ ಸೇವೆಗಳಿಗೆ ನಾವು ಯಾವುದೇ ಸಮಯದಲ್ಲೂ ಹೊಣೆಗಾರರಾಗಿರುವುದಿಲ್ಲ ಎಂದು ನೀವು ಒಪ್ಪಿರುತ್ತೀರಿ.

s. ನೀವು ಇಂಟರ್‌ನೆಟ್ ವೆಬ್‌ಸೈಟ್‌ನಲ್ಲಿ ಮಾಡಿದ ವಹಿವಾಟಿನ ಬಗ್ಗೆ ಏನಾದರೂ ದೂರುಗಳಿದ್ದಲ್ಲಿ, ಆ ವಿಷಯವನ್ನು ಸಂಬಂಧಿತ ವ್ಯಾಪಾರಿಯೊಂದಿಗೆ ಬಗೆಹರಿಸಿಕೊಳ್ಳಬೇಕು, ಹಾಗೆ ಬಗೆಹರಿಸಿಕೊಳ್ಳದಿದ್ದಲ್ಲಿ ನಮ್ಮ ಬಗ್ಗೆ ನಿಮಗಿರುವ ಉತ್ತರದಾಯಿತ್ವದಿಂದ ನೀವು ವಿಮುಕ್ತರಾಗುವುದಿಲ್ಲ. ಇಂಟರ್‌ನೆಟ್ ವೆಬ್‌ಸೈಟ್ ವಹಿವಾಟಿನ ಮೊತ್ತದೊಂದಿಗೆ ವಿಧಿಸುವ ಯಾವುದೇ ಹೆಚ್ಚುವರಿ ಶುಲ್ಕ ನಿಮ್ಮ ಖಾತೆಯಿಂದ ಕಡಿತಗೊಂಡರೆ ಅದಕ್ಕೆ ನಾವು ಯಾವುದೇ ರೀತಿಯಲ್ಲೂ ಜವಾಬ್ದಾರರಾಗುವುದಿಲ್ಲ. ನಿಮ್ಮ Debit Card ಸುರಕ್ಷತೆ, ATM PIN ಮತ್ತು ಅದಕ್ಕೆ ಸಂಬಂಧಿಸಿದ ವಿವರಗಳನ್ನು ಸುರಕ್ಷಿತವಾಗಿಡಲು ನೀವು ಎಲ್ಲಾ ಸಮಯದಲ್ಲೂ ಅಗತ್ಯವಿರುವ ಎಲ್ಲಾ ಎಚ್ಚರಿಕೆಯನ್ನೂ ತೆಗೆದುಕೊಳ್ಳತಕ್ಕದ್ದು.

t. ಸರಕಿಗೆ ಸಂಬಂಧಿಸಿದ ಯಾವುದೇ ವ್ಯಾಜ್ಯ ಅಥವಾ ಕ್ಲೈಮ್ ಅನ್ನು ವ್ಯಾಪಾರಿಯೊಂದಿಗೆ ಬಗೆಹರಿಸಿಕೊಳ್ಳುವುದಕ್ಕೆ ನೀವು ಒಪ್ಪಿರುತ್ತೀರಿ. ಯಾವುದೇ ವ್ಯಾಜ್ಯ ಅಥವಾ ಕ್ಲೈಮ್ ಇರುವ ಕಾರಣಕ್ಕಾಗಿ ಎಲ್ಲಾ ಶುಲ್ಕ ಪಾವತಿಸುವ ಉತ್ತರದಾಯಿತ್ವದಿಂದ ನೀವು ಮುಕ್ತರಾಗುವುದಿಲ್ಲ. ಯಾವುದೇ ವ್ಯಾಜ್ಯ ಅಥವಾ ಕ್ಲೈಮ್ ಇದ್ದರೂ ಸಹ, ಅಂತಹ ಯಾವುದೇ ಶುಲ್ಕವನ್ನು ಪ್ರಾಮಾಣಿಕವಾಗಿ ಪಾವತಿಸಲು ನೀವು ಒಪ್ಪಿರುತ್ತೀರಿ.

u. ಯಾವುದೇ ವ್ಯಾಜ್ಯವಿದ್ದ ಪಕ್ಷದಲ್ಲಿ ಯಾವುದೇ ವ್ಯಾಪಾರಿ/ಮಾಸ್ಟರ್ ವ್ಯಾಪಾರಿಯನ್ನು (master merchant) ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಅಮಾನತ್ತಿನಲ್ಲಿಡುವ ಹಕ್ಕನ್ನು ನಾವು ಕಾಯ್ದಿರಿಸಿಕೊಂಡಿರುತ್ತೇವೆ. ಈ ಸಮಯದಲ್ಲಿ ಅಮಾನತುಗೊಂಡಿರುವ ವ್ಯಾಪಾರಿಯ ಜೊತೆ ನಡೆಸುವ ವಹಿವಾಟಿನಲ್ಲಿ Debit Card ಸೌಲಭ್ಯ ಕೆಲಸ ಮಾಡುವುದಿಲ್ಲ.

v. ನಾವು ಈ ನಿಯಮ ಮತ್ತು ಷರತ್ತುಗಳು, ಪ್ರಸ್ತುತ ಬಾಕಿ, ಬಡ್ಡಿ ದರ ಅಥವಾ ಬಡ್ಡಿ ಲೆಕ್ಕಾಚಾರದ ವಿಧಾನಗಳೂ ಸೇರಿದಂತೆ ಆದರೆ ಇಷ್ಟಕ್ಕೆ ಮಾತ್ರ ಸೀಮಿತವಾಗಿರದೆ, ನಿಮಗೆ ಕೊಡಮಾಡಿರುವ ವೈಶಿಷ್ಟ್ಯ ಮತ್ತು ಪ್ರಯೋಜನಗಳನ್ನು ಯಾವುದೇ ಸಮಯದಲ್ಲಿ ಬದಲಾಯಿಸುವ ಹಕ್ಕುನ್ನು ಕಾಯ್ದಿರಿಸಿಕೊಂಡಿರುತ್ತೇವೆ. Debit Card ಸೌಲಭ್ಯ ಮತ್ತು

DBS Live more, Bank less

ಅದಕ್ಕೆ ಸಂಬಂಧಿಸಿದ ಸೇವೆಗಳಿಗೆ ಯಾವುದಾದರೂ ಶುಲ್ಕಗಳಿದ್ದಲ್ಲಿ ಅದನ್ನು ವಿಧಿಸುವ ಮತ್ತು ಕಾಲಕಾಲಕ್ಕೆ ಬದಲಾಯಿಸುವ ಸ್ವಾತಂತ್ರ್ಯವು ನಮ್ಮ ವಿವೇಚನೆಗೆ ಒಳಪಟ್ಟಿರುತ್ತದೆ. ನಿಯಮ ಮತ್ತು ಷರತ್ತುಗಳಲ್ಲಿ ಆದ ತಿದ್ದುಪಡಿಗಳನ್ನು ನಮ್ಮ ವೆಬ್‌ಸೈಟ್ www.dbs.com/digibank/in/terms-and-conditions.html ನಲ್ಲಿ ಪ್ರಕಟಿಸುವ ಮೂಲಕ, ಅಥವಾ ಬ್ಯಾಂಕ್ ನಿರ್ಧರಿಸುವ ಇನ್ನಾವುದೇ ಮಾರ್ಗದಲ್ಲಿ ನಿಮಗೆ ತಿಳಿಸಲಾಗುತ್ತದೆ. ತಿದ್ದುಪಡಿಯಾದ ಷರತ್ತುಗಳ ಪ್ರಕಾರ ವಿಧಿಸುವ ಶುಲ್ಕ ಮತ್ತು ಇತರ ಜವಾಬ್ದಾರಿಗೆ ನೀವು ಬಾಧ್ಯರಾಗಿರುತ್ತೀರಿ. ನೀವು direct debit card ಸೌಲಭ್ಯ ಉಪಯೋಗಿಸುವುದನ್ನು ಮುಂದುವರೆಸುವ ಮೂಲಕ, ನಮ್ಮ ನಿಯಮ ಮತ್ತು ಷರತ್ತುಗಳನ್ನು ಮತ್ತು ಅದರ ತಿದ್ದುಪಡಿಗಳನ್ನು ಪರಿಶೀಲಿಸಿದ್ದು, ತಿದ್ದುಪಡಿಯಾದ ನಿಯಮ ಮತ್ತು ಷರತ್ತುಗಳನ್ನು ನೀವು ಒಪ್ಪಿಕೊಂಡಿದ್ದೀರಿ ಎಂದು ಭಾವಿಸಲಾಗುತ್ತದೆ.

w. ನಾವು ನೀಡುವ ಉತ್ಪನ್ನ/ಸೇವೆಗಳಿಗೆ ಸಂಬಂಧಿಸಿದಂತೆ ನಮಗೆ ಬೇಕಾದ ಅಥವಾ ಅಗತ್ಯವಿರುವ ನಿಯಮಗಳ ಅನುಸಾರ ಹೊರಗಿನ ಸೇವಾದಾರರ ಅಥವಾ ಏಜೆಂಟ್‌ಗಳ ಸೇವೆಯನ್ನು ನಮ್ಮ ವಿವೇಚನೆಗೆ ಅನುಗುಣವಾಗಿ ಉಪಯೋಗಿಸಿಕೊಳ್ಳಬಹುದು.

x. ಯಾವುದೇ ಖಾತೆಗಳಿಗೆ ಸಂಬಂಧಿಸಿದಂತೆ ಯಾವುದೇ ಕಾರಣ ಕೊಡದೇ, ಯಾವುದೇ ಸೂಚನೆ ನೀಡದೆ ಯಾವುದೇ ಸಮಯದಲ್ಲಾದರೂ Debit Card ಸೌಲಭ್ಯವನ್ನು ಹಿಂಪಡೆಯು ವಿವೇಚನಾಧಿಕಾರ ನಮ್ಮದಾಗಿರುತ್ತದೆ ಎಂದು ನೀವು ಒಪ್ಪಿರುತ್ತೀರಿ.

y. ನೀವು Visa Virtual Debit Card ಸೌಲಭ್ಯವನ್ನು ಮೇಲ್/ದೂರವಾಣಿ ಮೂಲಕ ಖರೀದಿ ಮಾಡಲು ಉಪಯೋಗಿಸುವುದಿಲ್ಲವೆಂದು, ಒಂದು ವೇಳೆ ಉಪಯೋಗಿಸಿದರೆ ಅದು ಅನಧಿಕೃತವಾದುದೆಂದು, ಅದರ ಸಂಪೂರ್ಣ ಜವಾಬ್ದಾರಿ ನಿಮ್ಮದಾಗಿರುತ್ತದೆಂದು ನೀವು ಒಪ್ಪಿಕೊಂಡಿರುತ್ತೀರಿ.

## 5.5 ವಿದ್ಯುನ್ಮಾನ ಸೇವೆಗಳು

Visa Virtual Debit Card ಮೂಲಕ ಕೇವಲ ಭಾರತದಲ್ಲಿನ ವೆಬ್‌ಸೈಟ್‌ಗಳಲ್ಲಿ ಮಾತ್ರ ವಿದ್ಯುನ್ಮಾನ ವಹಿವಾಟುಗಳನ್ನು ನಡೆಸಬಹುದು.

## 5.6 Visa Virtual Debit Cardನ ಬಳಕೆ

ಈ Visa Virtual Debit Card ಅನ್ನು ಕೇವಲ ದೇಶದೊಳಗಿನ (ಸ್ಥಳೀಯ) ವಹಿವಾಟು ನಡೆಸಲು ಮಾತ್ರ ಉಪಯೋಗಿಸಬಹುದು. mVisa/Bharat QR ಬಳಸಿ ವ್ಯಾಪಾರಿಗಳಿಗೆ ಪಾವತಿ, ಸ್ಥಳೀಯ (ಡೊಮೆಸ್ಟಿಕ್) ಪಾವತಿಯಂತಹ ಕಾರ್ಡ್ ರಹಿತ ವಹಿವಾಟುಗಳನ್ನು ಮಾತ್ರ ಮಾಡಬಹುದು ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

## 5.7 ಖರ್ಚಿನ ಮಿತಿ

### 5.7.1 ದೇಶದೊಳಗೆ ಖರ್ಚಿನ ಮಿತಿ

digibank e-wallet ಖಾತೆ

ನಿಮ್ಮ digibank e-wallet ಖಾತೆಯಲ್ಲಿ ಸಾಕಷ್ಟು ಬಾಕಿ ಇದ್ದಾಗ, Visa Virtual Debit Card ಮೂಲಕ ದಿನವೊಂದಕ್ಕೆ 10000/- ರೂಗಳ ಮಿತಿಯಲ್ಲಿ, ಒಂದು ತಿಂಗಳಲ್ಲಿ 10000/- ರೂಗಳ ಮಿತಿಯಲ್ಲಿ ಅಥವಾ ಬ್ಯಾಂಕ್ ಕಾಲ ಕಾಲಕ್ಕೆ ನಿಮ್ಮ Debit Cardನ ದೇಶೀಯ ವಹಿವಾಟಿಗೆ ನಿಗದಿ ಪಡಿಸುವ ಮೊತ್ತದ ಮಿತಿಯಲ್ಲಿ ಖರ್ಚು ಮಾಡಬಹುದು. Visa Virtual Debit Card ಮೂಲಕ ನಿಮ್ಮ digibank e-wallet ಖಾತೆಯಿಂದ ಖರ್ಚು ಮಾಡಲು ಒಂದು ವಹಿವಾಟಿಗೆ 10000/- ರೂಗಳ ಮಿತಿ ಇರುತ್ತದೆ.

ಈ ಖರ್ಚಿನ ಮಿತಿಯು ಎಲ್ಲಾ ಕಾರ್ಡ್ ರಹಿತ ವಹಿವಾಟುಗಳಿಗೆ (ಇಂಟರ್‌ನೆಟ್ ಖರೀದಿಯೂ ಸೇರಿದಂತೆ) ಮತ್ತು/ಅಥವಾ ಮುಂದೆ ಪರಿಚಯಿಸುವ ವಿದ್ಯುನ್ಮಾನ ಸೇವೆಗಳಿಗೆ ಅನ್ವಯವಾಗುತ್ತದೆ.

ನೀವು OTP ಆಧಾರಿತ eKYC ಪ್ರಕ್ರಿಯೆ ಅಥವಾ ಬಯೋಮೆಟ್ರಿಕ್ ದೃಢೀಕರಣದ ಮೂಲಕ ತೆರೆದಿರುವ ಖಾತೆಯಲ್ಲಿ ಸಾಕಷ್ಟು ಬಾಕಿ ಇದ್ದಾಗ, ಒಂದು ದಿನಕ್ಕೆ 1,00,000 ರೂಗಳು ಅಥವಾ ಕಾಲ ಕಾಲಕ್ಕೆ ಬ್ಯಾಂಕ್ ನಿಗದಿಪಡಿಸುವ ಮೊತ್ತವನ್ನು Debit Card ಮೂಲಕ ಖರ್ಚು ಮಾಡಬಹುದು.ಈ ಖರ್ಚಿನ ಮಿತಿಯು ಎಲ್ಲಾ Point of Sale ಮತ್ತು/ಅಥವಾ ಕಾರ್ಡ್ ರಹಿತ ವಹಿವಾಟುಗಳು (ಇಂಟರ್‌ನೆಟ್ ಖರೀದಿಯೂ ಸೇರಿದಂತೆ) ಮತ್ತು/ಅಥವಾ ಮುಂದೆ ಪರಿಚಯಿಸುವ ವಿದ್ಯುನ್ಮಾನ ಸೇವೆಗಳಲ್ಲಿನ ಬಳಕೆಗಳಿಗೆ ಅನ್ವಯಿಸುತ್ತದೆ. ನಾವು ಬೇರೆ ಬೇರೆ ಗ್ರಾಹಕರಿಗೆ ಬೇರೆ ಬೇರೆ ಖರ್ಚಿನ ಮಿತಿ ಸೆಟ್ ಮಾಡಲು ಅನುವು ಮಾಡಿಕೊಡಬಹುದು.

ನೀವು digiSavings ಖಾತೆಗೆ ಜೋಡಣೆಯಾಗಿರುವ Visa Virtual Debit Card ಹೊಂದಿದ್ದರೆ, ನೀವು ಆ ಕಾರ್ಡ್ ಅನ್ನು ಕೇವಲ ದೇಶೀಯ ಕಾರ್ಡ್ ರಹಿತ ವಹಿವಾಟುಗಳಿಗೆ (ಇಂಟರ್‌ನೆಟ್ ಖರೀದಿಯೂ ಸೇರಿದಂತೆ) ಮಾತ್ರ ಉಪಯೋಗಿಸಬಹುದು. OTP ಆಧಾರಿತ eKYC ಪ್ರಕ್ರಿಯೆ ಮೂಲಕ ತೆರೆದಿರುವ ಖಾತೆಗೆ ಜೋಡಣೆಯಾಗಿರುವ Visa Virtual Debit Card ಮಿತಿ ಒಂದು ದಿನಕ್ಕೆ 1,00,000 ರೂ ಆಗಿರುತ್ತದೆ.

ನಿಮ್ಮ digiSavings ಖಾತೆಗೆ ಜೋಡಣೆಯಾದ ಭೌತಿಕ Visa International Debit Card ಹೊಂದಿದ್ದರೆ, ನಿಮ್ಮ ಖಾತೆಯಲ್ಲಿ ಸಾಕಷ್ಟು ಬಾಕಿ ಇದ್ದಾಗ, ATM ಮಿತಿಯವರೆಗೆ ಹಣ ಹಿಂಪಡೆದುಕೊಳ್ಳಬಹುದು. ATM ಮಿತಿ ಅಥವಾ ಖಾತೆಯ ಬಾಕಿ ಮೀರುವಂತೆ ಹಣ ಹಿಂಪಡೆಯುವುದು ಆಥವಾ ಬೇರೆ ಯಾವುದೇ ವಾಹಿವಾಟನ್ನು ನೀವು ಯಾವುದೇ ಕಾರಣಕ್ಕೂ ಮಾಡಬಾರದು ಅಥವಾ ಅಂತಹ ವಹಿವಾಟು ಮಾಡಲು ಪ್ರಯತ್ನಿಸಬಾರದು. ನಿಮ್ಮ digiSavings ಖಾತೆಯಲ್ಲಿ ಸಾಕಷ್ಟು ಬಾಕಿ ಇರುವಂತೆ ನೋಡಿಕೊಳ್ಳುವ ಹೊಣೆ ಸಂಪೂರ್ಣವಾಗಿ ನಿಮ್ಮದೇ ಆಗಿರುತ್ತದೆ. ನಿಮ್ಮ Visa International Debit Card ಬಳಸಿ ATM ಇಂದ ಒಂದು ದಿನದಲ್ಲಿ 25,000/- ರೂ ಹಿಂಪಡೆಯಬಹುದು ಹಾಗೂ POS ವಹಿವಾಟಿನ ಮಿತಿ ದಿನಕ್ಕೆ 1,00,000/- ರೂ ಆಗಿರುತ್ತದೆ.

5.7.2 ಅಂತರಾಷ್ಟ್ರೀಯ ಖರ್ಚಿನ ಮಿತಿ

ಭಾರತದ ಹೊರಗೆ (ನೇಪಾಳ ಮತ್ತು ಭೂತಾನ್ ಹೊರತುಪಡಿಸಿ) ನಿಮ್ಮ ಭೌತಿಕ Visa International Debit Card ಬಳಸಿ ಒಂದು ದಿನಕ್ಕೆ ATM ಮೂಲಕ 25,000/- ರೂ ಹಿಂಪಡೆಯಬಹುದು ಮತ್ತು POS ವಹಿವಾಟಿನ ಮಿತಿ ಒಂದು ದಿನಕ್ಕೆ 25,000/- INR ಆಗಿರುತ್ತದೆ.

5.7.3 ಖರ್ಚಿನ ಮಿತಿಯನ್ನು ಮೀರಿ ಖರ್ಚು ಮಾಡಬಾರದು

ನಿಮ್ಮ digibank e-wallet ಅಥವಾ digiSavings ಖಾತೆಯಲ್ಲಿ ಸಾಕಷ್ಟು ಹಣ ಇದ್ದಾಗ ಮತ್ತು ಒಟ್ಟು ಮೊತ್ತವು ಖರ್ಚಿನ ಮಿತಿ ಮೀರದಿದ್ದಾಗ ಮಾತ್ರ, ನೀವು Visa Virtual Debit Card ಬಳಸಿ ವಹಿವಾಟು ಮಾಡಬಹುದು. ನೀವು ಖರ್ಚಿನ ಮಿತಿ ಮೀರುವ Visa Virtual Debit Card ವಹಿವಾಟು ಮಾಡಬಾರದು ಅಥವಾ ಮಾಡಲು ಪ್ರಯತ್ನಿಸಬಾರದು. ನೀವು ಮಾಡುವ ವಹಿವಾಟು ನಿಮ್ಮ ಖರ್ಚಿನ ಮಿತಿ ಮೀರದಿದ್ದರೂ ಸಹ, ಆ ವಹಿವಾಟನ್ನು ಅಧಿಕೃತಗೊಳಿಸಲು ನಾವು ನಿರಾಕರಿಸಬಹುದು.

5.8 ನಮ್ಮ ಗಮನಕ್ಕೆ ತರುವ ಕರ್ತವ್ಯ

ಕೆಳಗಿನ ಸಂದರ್ಭಗಳು ಎದುರಾದಾಗ ನೀವು ಅದನ್ನು ನಮ್ಮ ಗಮನಕ್ಕೆ ತರಬೇಕು. (a) Debit Card ಅನ್ನು ಬೇರೊಬ್ಬ ವ್ಯಕ್ತಿ ಬಳಸಿದಾಗ (b) ಈ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ ನಿಮ್ಮ Debit Card ಅಥವಾ ವಿದ್ಯುನ್ಮಾನ ಸೇವೆಗಳನ್ನು ಅಮಾನತು ಮಾಡಲು ಅವಕಾಶ ನೀಡುವ ಯಾವುದೇ ಘಟನೆ ಸಂಭವಿಸಿದಾಗ

ನಿಮ್ಮ ಮೊಬೈಲ್ ಕಳೆದುಹೋದ/ಕಳ್ಳತನವಾದ ಅಥವಾ ಅನಧಿಕೃತವಾಗಿ ಬಳಕೆಯಾದ ವಿಷಯವನ್ನು, digibank app ಮೂಲಕ ನಿಮ್ಮ Debit Card ಅನ್ನು ಹಾಟ್‌ಲಿಸ್ಟ್ ಮಾಡುವ ಮೂಲಕ ಅಥವಾ 24 ಗಂಟೆ ಲಭ್ಯವಿರುವ ಗ್ರಾಹಕ ಸೇವಾ ಹಾಟ್‌ಲೈನ್ ಸಂಖ್ಯೆ 18602103456 ಗೆ ಕರೆ ಮಾಡುವ ಮೂಲಕ ಅಥವಾ ಹತ್ತಿರದ DBS Bank ಶಾಖೆಗೆ ಅವುಗಳು ಕಾರ್ಯ ನಿರ್ವಹಿಸುವ ದಿನಗಳಲ್ಲಿ, ಕಾರ್ಯ ನಿರ್ವಹಿಸುವ ಸಮಯದಲ್ಲಿ ಭೇಟಿ ಕೊಟ್ಟು ಬರೆದು ಕೊಡುವ ಮೂಲಕ ಅಥವಾ ಇನ್ನಾವುದೇ ಬ್ಯಾಂಕ್ ಅಂಗೀಕರಿಸುವ ಮಾರ್ಗದ ಮೂಲಕ ನಮ್ಮ ಗಮನಕ್ಕೆ ತರಬಹುದು.

## 5.9 digiSavings ಗಾಗಿ Visa International Debit Card ಬಳಸಲು ನಿಯಮ ಮತ್ತು ಷರತ್ತುಗಳು. ("ನಿಯಮ ಮತ್ತು ಷರತ್ತುಗಳು")

### 5.9.1 ನಿಮ್ಮ Debit Card ಬಗ್ಗೆ ತಿಳಿಯಿರಿ

ನಿಮ್ಮ Visa International Debit Card ಒಂದು ಭೌತಿಕ debit card ಆಗಿದೆ. Digibank app ಮೂಲಕ ನೀವು Debit Card ಕೋರಿಕೆ ಮಾಡಿದ ನಂತರ, ನಿಮ್ಮ Debit Card ಅನ್ನು ನಿಮಗೆ ತಲುಪಿಸಲು, ನಿಮಗೆ ನಮ್ಮಲ್ಲಿ ಪ್ರಸ್ತುತ ದಾಖಲಾಗಿರುವ ವಿಳಾಸ ಆಯ್ಕೆ ಮಾಡಲು ಅಥವಾ ಬೇರೊಂದು ವಿಳಾಸ ನೀಡಲು ಅವಕಾಶವಿರುತ್ತದೆ. ನೀವು Debit Card ಡೆಲಿವರಿಗಾಗಿ ಆಯ್ಕೆ ಮಾಡುವ ವಿಳಾಸವು DBS ಶಾಖೆಗಳಿರುವ ಯಾವುದಾದರೂ ನಗರದ ವ್ಯಾಪ್ತಿಯಲ್ಲಿ ಇರಬಹುದು. ನಿಮ್ಮ Debit Card ನಿಮಗೆ ಮುಚ್ಚಿದ ಲಕೋಟೆಯಲ್ಲಿಯೇ ತಲುಪಿದೆ ಎಂದು ನೀವು ಖಚಿತಪಡಿಸಿಕೊಳ್ಳಬೇಕು. Debit Card ನಿಮಗೆ ತಲುಪದಿದ್ದರೆ, ನಿಮಗೆ ಆಗುವ ನಷ್ಟ ಅಥವಾ ಹಾನಿಗೆ ನಾವು ಹೊಣೆಗಾರರಾಗಿರುವುದಿಲ್ಲ.

### 5.9.2 ಸಕ್ರಿಯಗೊಳಿಸುವಿಕೆ

Visa International Debit Card ಸಕ್ರಿಯಗೊಳಿಸಲು ನೀವು digibank appನಲ್ಲಿ Personal Identification Number (PIN) ಜನರೇಟ್ ಮಾಡಬೇಕಾಗುತ್ತದೆ. ಈ PIN ನಿಮಗೆ ATM ಮತ್ತು POS ಗಳಲ್ಲಿ DBS Bank International Debit Card ಬಳಸಲು ಅನುವು ಮಾಡಿಕೊಡುತ್ತದೆ. ಸುರಕ್ಷತೆಯ ಕಾರಣದಿಂದಾಗಿ ವಿವಿಧ ರೀತಿಯಲ್ಲಿ ಬಳಸಬಹುದಾದ ಈ Debit Card ಅನ್ನು "inactive" ಸ್ಥಿತಿಯಲ್ಲಿ ನಿಮಗೆ ಕಳುಹಿಸಿ ಕೊಡಲಾಗುತ್ತದೆ. ನೀವು ಕೊಟ್ಟಿರುವ Debit Card delivery ವಿಳಾಸವನ್ನು ಖಚಿತಪಡಿಸಲು, ನಿಮ್ಮ Visa International Debit Card ಆಕ್ಟಿವೇಟ್ ಆಗುವುದು ಅಗತ್ಯ ಎಂದು ನೀವು ಅರ್ಥ ಮಾಡಿಕೊಂಡಿರುತ್ತೀರಿ. ನೀವು Visa International Debit Card ಕೋರಿಕೆ ಸಲ್ಲಿಸಿದ 90 ದಿನಗಳ ಒಳಗಾಗಿ ನಿಮ್ಮ Visa International Debit Card ಅನ್ನು ಆಕ್ಟಿವೇಟ್ ಮಾಡಿಕೊಳ್ಳಬೇಕು. ಒಂದು ವೇಳೆ ನೀವು ಹೀಗೆ ಮಾಡಲು ವಿಫಲರಾದರೆ, ಬ್ಯಾಂಕ್ ನಿಮ್ಮ digibank ಖಾತೆಯನ್ನು ನಿರ್ಬಂಧಿಸಿ ನೀವು debit ಅಥವಾ credit ವಹಿವಾಟುಗಳನ್ನು ತಡೆಹಿಡಿಯಬಹುದು. ನೀವು Visa International Debit Card ಆಕ್ಟಿವೇಟ್ ಮಾಡಿಕೊಳ್ಳುವವರೆಗೂ ನಿಮ್ಮ digiSavings ಖಾತೆಯಲ್ಲಿ ಯಾವುದೇ ವಹಿವಾಟು ನಡೆಸಲು ಸಾಧ್ಯವಿಲ್ಲವೆಂದು ತಿಳಿದುಕೊಂಡು ಅದಕ್ಕೆ ಒಪ್ಪಿಕೊಂಡಿರುತ್ತೀರಿ.

ನಿಮ್ಮ Visa International Debit Card ಸಕ್ರಿಯಗೊಂಡ ನಂತರ Visa Virtual Debit Card ಅಸ್ತಿತ್ವದಲ್ಲಿ ಇರುವುದಿಲ್ಲ.

5.9.3 ಬಳಕೆಯ ಮಾರ್ಗಸೂಚಿಗಳು

ಬಹುವಿಧದಲ್ಲಿ ಪ್ರಯೋಜನಕಾರಿಯಾಗಿರುವ ನಿಮ್ಮ Debit Card ಅನ್ನು ತುಂಬಾ ಸುಲಭವಾಗಿ ಬಳಸಬಹುದಾಗಿದೆ. ವ್ಯಾಪಾರದ ಅಂಗಡಿಗಳಲ್ಲಿ ನೀವು ಖರೀದಿ ವಹಿವಾಟು ನಡೆಸುವಾಗ ಇದು credit card ರೀತಿ ಕೆಲಸ ಮಾಡುತ್ತದೆ. ಇದರಲ್ಲಿನ ಬಹು ಮುಖ್ಯ ವ್ಯತ್ಯಾಸವೆಂದರೆ, ವಹಿವಾಟಿನ ಮೊತ್ತವು ನೇರವಾಗಿ ನಿಮ್ಮ DBS Bank ಖಾತೆಯಿಂದ ಕಡಿತಗೊಳ್ಳುತ್ತದೆ. ಈ Debit Card, ATM Card ಕೆಲಸವನ್ನೂ ಮಾಡುವ ಕಾರಣ, ನೀವು ಪ್ರತ್ಯೇಕವಾಗಿ ATM Card ಕೊಂಡೊಯ್ಯಬೇಕಾದ ಅವಶ್ಯಕತೆ ಇರುವುದಿಲ್ಲ. ನೀವು ಈ ಕಾರ್ಡ್ ಅನ್ನು ಭಾರತದ ಹೊರಗೆ ATM ಮತ್ತು POS ವಹಿವಾಟು ಮಾಡಲು ಬಳಸಬಹುದು.

5.9.4 Visa ಅಂತರಾಷ್ಟ್ರೀಯ Debit Card

ನೀವು ಆಯ್ಕೆ ಮಾಡಿಕೊಂಡಿರುವ PIN ನಿಮ್ಮ digiSavings ಖಾತೆಗೆ ಪ್ರವೇಶಾಧಿಕಾರ ಕೊಡುತ್ತದೆ ಎಂದು ನೀವು ಒಪ್ಪಿಕೊಂಡು, ಪ್ರಮಾಣೀಕರಿಸಿರುತ್ತೀರಿ. ಜೊತೆಗೆ, ನಿಮ್ಮ PIN ಬಳಕೆ, ಗೌಪ್ಯತೆ, ಸುರಕ್ಷತೆಯ ಜೊತೆಗೆ digiSavingsಗೆ PIN ಉಪಯೋಗಿಸಿಕೊಂಡು ನಮೂದಿಸುವ ಎಲ್ಲಾ ಬಗೆಯ ಮಾಹಿತಿ, ಆದೇಶ ಹಾಗೂ ಶುಲ್ಕಗಳಿಗೆ ಸಂಪೂರ್ಣವಾಗಿ ನೀವೇ ಜವಾಬ್ದಾರರಾಗಿರುತ್ತೀನೆಂದು ಒಪ್ಪಿಕೊಂಡಿರುತ್ತೀರಿ.

DBS Bank, ಕಾರ್ಡ್ ಕಳೆದುಹೋದ ಅಥವಾ ಕಳುವಾದ ಸಂದರ್ಭದಲ್ಲಿ ಅಥವಾ ಬೇರಾವುದೇ ಸನ್ನಿವೇಶದಲ್ಲಿ, ಪ್ರಸ್ತುತ ಚಾಲ್ತಿಯಲ್ಲಿರುವ Debit Card ಗೆ ಹೊಸ PIN ಕೊಟ್ಟು, ಈ ಬದಲಾವಣೆಗೆ ಶುಲ್ಕ ವಿಧಿಸಬಹುದು. RBI guidelines ಮತ್ತು ಬ್ಯಾಂಕ್‌ನ ಆಂತರಿಕ ನಿಯಮಾವಳಿಗಳ ಪ್ರಕಾರ ಅನಧಿಕೃತ ವಿದ್ಯುನ್ಮಾನ ವಹಿವಾಟಿಗೆ ಸಂಬಂಧಿಸಿದಂತೆ, Debit Card ಮತ್ತು/ಅಥವಾ PIN ಅನುಚಿತ/ಮೋಸದ/ಅನಧಿಕೃತ/ ನಕಲಿ/ತಪ್ಪಾಗಿ ಬಳಕೆಯಾದ ಪಕ್ಷದಲ್ಲಿ ನೀವು DBS Bank ಅನ್ನು ಹೊಣೆಗಾರರನ್ನಾಗಿ ಮಾಡುವುದಿಲ್ಲ. ಯಾವುದೇ ಮೂರನೇ ವ್ಯಕ್ತಿಗೆ ಕಾರ್ಡ್ ಅಥವಾ PIN ಮಾಹಿತಿ ದೊರೆತು ಅವರು ಅದನ್ನು ಬಳಕೆ/ದುರ್ಬಳಕೆ ಮಾಡಿದ ಪಕ್ಷದಲ್ಲಿ ಅದರಿಂದ ಉಂಟಾಗುವ ಪರಿಣಾಮಗಳಿಗೆ DBS Bank ಹೊಣೆಗಾರರಾಗಿರುವುದಿಲ್ಲ. ನಿಮ್ಮ ನಿರ್ಲಕ್ಷ್ಯದಿಂದ ಯಾವುದೇ ಮೂರನೇ ವ್ಯಕ್ತಿ digiSavings ಸೇರಿದಂತೆ, ಇತರ ಸೇವೆಗಳಿಗೆ ಪ್ರವೇಶ ಪಡೆದ ಪಕ್ಷದಲ್ಲಿ ಅದಕ್ಕೆ ನೀವೇ ಜವಾಬ್ದಾರರಾಗಿರುತ್ತೀರಿ. ಮೂರನೇ ವ್ಯಕ್ತಿಯ ಬಳಕೆ/ದುರ್ಬಳಕೆಯ ಆಧಾರದ ಮೇಲೆ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಅಥವಾ ಇನ್ನಾವುದೇ ಕಾರಣದಿಂದ ಉಂಟಾಗುವ ಖರ್ಚು ಅಥವಾ ನಷ್ಟಕ್ಕೆ DBS Bank ಇಂದ ನೀವು ಯಾವುದೇ ಬಗೆಯ ನಷ್ಟಪರಿಹಾರ ಬಯಸುವಂತಿಲ್ಲ.

5.9.5 ATM ಬಳಕೆ

ನಿಮ್ಮ Debit Card ಅನ್ನು DBS Bank ನಲ್ಲಿ ಅಥವಾ ಭಾರತ ಅಥವಾ ವಿದೇಶದಲ್ಲಿ Visa logo ಪ್ರದರ್ಶಿಸಿರುವ Visa ATMನಲ್ಲಿ, ಮಾಮೂಲಿ ATM Card ರೀತಿ ಹಣ ಹಿಂಪಡೆಯಲು ಮತ್ತು ಇತರೆ ವಹಿವಾಟು ಮಾಡಲು ಬಳಸಬಹುದು. Visa ಭಾರತದಲ್ಲಿ 43,000 ಕ್ಕೂ ಹೆಚ್ಚು ಮತ್ತು ವಿಶ್ವದಾದ್ಯಂತ 1,000,000 ಕ್ಕೂ ಹೆಚ್ಚಿನ ATM ಹೊಂದಿರುವ ವಿಶಾಲ ಜಾಲವಾಗಿದ್ದು, ನಿಮ್ಮ DBS Bank International Debit Card ಗೆ ಜೋಡಣೆಯಾಗಿರುವ ಖಾತೆಗಳಿಗೆ ದಿನದ 24 ಗಂಟೆಗಳೂ ಪ್ರವೇಶ

ಪಡೆಯುವ ಸೌಕರ್ಯ ಕಲ್ಪಿಸುತ್ತದೆ. ಭಾರತ ಅಥವಾ ವಿಶ್ವದಾದ್ಯಂತ ಇರುವ ಎಲ್ಲಾ Visa ATMs ಸಂಪೂರ್ಣ ಪಟ್ಟಿಗಾಗಿ ದಯವಿಟ್ಟು Visa website ಇರುವ www.visa.com ಗೆ ಭೇಟಿ ನೀಡಿ.

ನಿಮ್ಮ ಖಾತೆಯಲ್ಲಿ ಸಾಕಷ್ಟು ಬಾಕಿ ಇದ್ದಾಗ, ನೀವು ಒಂದು ದಿನಕ್ಕೆ ATM ಮೂಲಕ ಹಿಂಪಡೆಯಬಹುದಾದ ಹಣದ ಮೊತ್ತವನ್ನು ಕಾಲ ಕಾಲಕ್ಕೆ ಬ್ಯಾಂಕ್ ನಿಗದಿಪಡಿಸುತ್ತದೆ ಇದು ನಿಮಗೆ digibank app ನಲ್ಲಿ ಲಭ್ಯವಿರುತ್ತದೆ.

ಒಂದು ವೇಳೆ ನೀವು ಯಾವುದೇ Visa ATM ಇಂದ ಹಣ ಹಿಂಪಡೆಯಲು ಆಗದಿದ್ದರೆ, ಕಡಿಮೆ ಹಣ ನಮೂದಿಸುವ ಮೂಲಕ ಮತ್ತೊಮ್ಮೆ ಪ್ರಯತ್ನಿಸಿ (ಕೆಲವು ATM ಗಳಲ್ಲಿ ಹಣ ಬಟವಾಡೆಯ ಮಿತಿ ಇರುತ್ತದೆ) ಅಥವಾ ಸ್ವಲ್ಪ ಸಮಯದ ನಂತರ ಪ್ರಯತ್ನಿಸಿ (ಕೆಲವೊಮ್ಮೆ network server ಕೆಲಸ ಮಾಡದಿರಬಹುದು)

5.9.6 DBS Bank ATM ಗಳಲ್ಲಿ

ಭಾರತದಲ್ಲಿರುವ ಯಾವುದೇ DBS Bank ATM ನಲ್ಲಿ ನೀವು (ನಿಮ್ಮ Debit Card ಗೆ digiSavings ಜೋಡಣೆಯಾಗಿದೆ ಎಂದು ಭಾವಿಸಿಕೊಂಡು)

a. ನಿಮ್ಮ digiSavingsನಿಂದ ಹಣ ಹಿಂಪಡೆಯಬಹುದು.
b. ನಿಮ್ಮ digiSavings ಖಾತೆಯ ಬಾಕಿ ಮೊತ್ತವನ್ನು ಪರಿಶೀಲಿಸಬಹುದು.
c. ಮಿನಿ ಸ್ಟೇಟ್‌ಮೆಂಟ್ ಪಡೆಯಬಹುದು
d. ನಿಮ್ಮ digiSavings ಗೆ ನಗದು/ಚೆಕ್ ಠೇವಣಿ ಮಾಡಬಹುದು.
e. ನಮ್ಮ ಬ್ಯಾಂಕ್‌ನ Debit Card ಗೆ ಜೋಡಣೆಯಾಗಿರುವ ಖಾತೆಗಳ ಮಧ್ಯೆ ನಿಧಿ ವರ್ಗಾವಣೆ ಮಾಡಬಹುದು.
f. DBS Bank India network ಒಳಗಿರುವ ಮೂರನೇ ವ್ಯಕ್ತಿಯ ಖಾತೆಗೆ ಹಣ ವರ್ಗಾವಣೆ ಮಾಡಬಹುದು.
g. PIN ಬದಲಾಯಿಸಬಹುದು.
h. ಈಗ, ಭಾರತದ DBS Bank ATM ಗಳಲ್ಲಿ ಮಾಡುವ ಎಲ್ಲಾ ವಹಿವಾಟುಗಳು ಉಚಿತವಾಗಿವೆ.

ಸೂಚನೆ: ಅನಿವಾಸಿ ಖಾತೆಗೆ ಹಣ ವರ್ಗಾಯಿಸಲು ಅನುಮತಿ ಇಲ್ಲ ಎಂಬುದನ್ನು ದಯವಿಟ್ಟು ಗಮನದಲ್ಲಿರಿಸಿ.

5.9.7 DBS Bankಗೆ ಸೇರಿರದ ATM ಗಳಲ್ಲಿ

ನೀವು Visa ATM ಗಳಲ್ಲಿ ನಿಮ್ಮ digiSavings ಇಂದ ಹಣ ಹಿಂಪಡೆಯುವ ಮತ್ತು ಬಾಕಿ ಮೊತ್ತ ಪರಿಶೀಲಿಸುವ ವಹಿವಾಟುಗಳನ್ನು ಮಾತ್ರ ಮಾಡಬಹುದು. 1 ಆಗಸ್ಟ್ 2018 ಇಂದ DBS Bank ಗೆ ಸೇರಿರದ ATM ಗಳಲ್ಲಿ ಮೊದಲ ಹತ್ತು ಉಚಿತ ವಹಿವಾಟುಗಳ ನಂತರ (ಒಂದು ತಿಂಗಳಿಗೆ) ಮಾಡುವ ವಹಿವಾಟುಗಳಿಗೆ ನಿಗದಿಪಡಿಸಿರುವ ದರ ಮತ್ತು ಶುಲ್ಕಗಳ ಅನುಸಾರ ವಹಿವಾಟು ಶುಲ್ಕ ವಿಧಿಸಲಾಗುವುದು. ಭಾರತದಲ್ಲಿನ DBS Bank ಗೆ ಸೇರಿರದ ATM ಗಳಲ್ಲಿ ಹಣ ಹಿಂಪಡೆಯಲು ನಿಮ್ಮ Debit Card ಖಾತೆಯಲ್ಲಿ ಸಾಕಷ್ಟು ಹಣವಿರಬೇಕು ಮತ್ತು ಅದು ಬ್ಯಾಂಕ್ ಕಾಲ ಕಾಲಕ್ಕೆ ನಿಗದಿ ಪಡಿಸುವ ಮಿತಿಯಲ್ಲಿರಬೇಕು. ಎಲ್ಲ ATM ಗಳಲ್ಲೂ ಬಾಕಿ ಮೊತ್ತ ಪರಿಶೀಲಿಸುವ ಆಯ್ಕೆ ಇರುವುದಿಲ್ಲ ಎಂಬುದನ್ನು ದಯವಿಟ್ಟು ಗಮನದಲ್ಲಿರಿಸಿ.

5.10 Debit Card ವೈಶಿಷ್ಟ್ಯತೆಗಳು:

5.10.1 ಪಾಯಿಂಟ್ ಆಫ್ ಸೇಲ್ (POS) ವಹಿವಾಟುಗಳು

ಭಾರತದಲ್ಲಿರುವ 4,25,000 ಮತ್ತು ಜಗತ್ತಿನಾದ್ಯಂತ ಇರುವ 24 ದಶಲಕ್ಷಕ್ಕೂ ಹೆಚ್ಚಿನ Visa Electron merchant outlet ಪೈಕಿ ಎಲ್ಲಿಯಾದರೂ ನಿಮ್ಮ Visa International Debit Card ಬಳಸಿ ಇದಕ್ಕಿಂತ ಹೆಚ್ಚು ಸುಲಭವಾಗಿ ಶಾಪಿಂಗ್ ಮಾಡಲು ಸಾಧ್ಯವಿಲ್ಲ. ನಿಮ್ಮ ಶಾಪಿಂಗ್ ಅನ್ನು ಮನಸ್ಸಿಗೆ ಮುದ ನೀಡುವ ಅನುಭವವಾಗಿಸಲು ಕೆಳಗಿನ ಸರಳ, ಅನುಕೂಲಕರವಾದ ಹಂತಗಳನ್ನು ಅನುಸರಿಸಿ.

a. Point-of-Sale ವ್ಯಾಪಾರದ ಅಂಗಡಿಯಲ್ಲಿ Visa/Visa Tap to Pay ಸಂಕೇತ ಇದೆಯೇ ಎಂದು ನೋಡಿ. ವ್ಯಾಪಾರಿಯ ಬಳಿ Electron Point-of-Sale card swiping terminal/ Visa Tap to Pay enabled terminal ಇದ್ದೇ ಇರುತ್ತದೆ.
b. ನೀವು ಖರೀದಿ ಮಾಡಿದ ನಂತರ ನಿಮ್ಮ Debit Card ಕೊಡಿ.
c. ನಿಮ್ಮ ಕಾರ್ಡ್ ಅಧಿಕೃತ ಎಂದು ಪರಿಶೀಲಿಸಲು ವ್ಯಾಪಾರಿ ತನ್ನ ಬಳಿ ಇರುವ Visa Electron Data Capture Terminal ನಲ್ಲಿ ನಿಮ್ಮ Debit Card ಅನ್ನು ಸ್ವೈಪ್ ಮಾಡುತ್ತಾರೆ. Visa Tap to Pay ವಹಿವಾಟು ಮಾಡುವ ಸಂದರ್ಭದಲ್ಲಿ ಗ್ರಾಹಕನು, ವ್ಯಾಪಾರಿಗೆ ಹತ್ತಿರದಲ್ಲಿರುವ Tap to Pay enabled reader/terminal ಮುಂದೆ Debit Card ಹಿಡಿಯಬೇಕು/ಅಲುಗಾಡಿಸಬೇಕು.
d. 2,000 ದ ವರೆಗಿನ ಅಥವಾ ಮೊದಲೇ ನಿಗದಿಪಡಿಸಿರುವ ಮೊತ್ತದ VISA Tap to Pay Debit Card ವಹಿವಾಟನ್ನು Tap to Pay enabled terminalಗಳಲ್ಲಿ ಮಾಡುವಾಗ ದೃಢೀಕರಣಕ್ಕಾಗಿ ಯಾವುದೇ PIN ಅಗತ್ಯವಿರುವುದಿಲ್ಲ. ಒಂದು ವೇಳೆ ಬೇರೆ ಬಗೆಯ POS ವಹಿವಾಟು ಮಾಡಿದಾಗ ದೃಢೀಕರಣಕ್ಕಾಗಿ ನಿಮ್ಮ ATM PIN ದಾಖಲು ಮಾಡಬೇಕಾಗುತ್ತದೆ.
e. Visa Tap to Pay readers ಗಳಲ್ಲಿ ನಿಮ್ಮ Debit Card ಬಳಸಿ ಎಷ್ಟು ಬೇಕಾದರೂ ಕಾರ್ಡ್ ವಹಿವಾಟುಗಳನ್ನು ಮಾಡಬಹುದು. ಆದರೆ ಪ್ರತಿಯೊಂದು Visa Tap to Pay ವಹಿವಾಟಿನ ಮೊತ್ತವು INR 2000 ಅಥವಾ ಬ್ಯಾಂಕ್ ಕಾಲ ಕಾಲಕ್ಕೆ ನಿಗದಿಪಡಿಸಿರುವ ಮೊತ್ತವನ್ನು ಮೀರಬಾರದು. ನಿಮ್ಮ ಗಮನಕ್ಕೆ ತರದೇ ಇದನ್ನು ನಿರ್ಧರಿಸುವ ಏಕಮಾತ್ರ ಹಾಗೂ ಸಂಪೂರ್ಣವಾದ ವಿವೇಚನಾಧಿಕಾರವು ನಮಗೆ ಸೇರಿರುತ್ತದೆ.
f. ಯಶಸ್ವಿಯಾಗಿ ದೃಢೀಕರಿಸಿದ ನಂತರ, ವಹಿವಾಟು ಮಾಡಿದ ಮೊತ್ತವನ್ನು ಮೊದಲು ನಿಮ್ಮ digiSavings ನಲ್ಲಿ ಹಿಡಿದಿಡಲಾಗುತ್ತದೆ. ಬಳಿಕ ನಿಮ್ಮ digiSavings ಇಂದ ವಹಿವಾಟಿನ ಮೊತ್ತವನ್ನು ಕಡಿತಗೊಳಿಸಲಾಗುತ್ತದೆ.
g. ಮಾರಾಟದ ಚೀಟಿ ಜನರೇಟ್ ಆಗುತ್ತದೆ.
h. ವ್ಯಾಪಾರಿಗೆ ಅಗತ್ಯವಿದ್ದಲ್ಲಿ ಮಾರಾಟ ಚೀಟಿಯನ್ನು ಪರೀಕ್ಷಿಸಿ ಸಹಿ ಮಾಡಿ. ನಿಮ್ಮ ಸಹಿಯು ಕಾರ್ಡ್‌ನ ಹಿಂಬಾಗದಲ್ಲಿರುವ ಸಹಿಯೊಂದಿಗೆ ತಾಳೆಯಾಗುವಂತಿರಬೇಕು.
i. ನಿಮ್ಮ Debit Card ವಾಪಸ್ ಪಡೆದುಕೊಂಡಿದ್ದೀರಿ ಎಂದು ಖಚಿತಪಡಿಸಿಕೊಳ್ಳಿ.
j. ಮುಂದೆ ಅಗತ್ಯ ಬಿದ್ದಾಗ ಬಳಸಿಕೊಳ್ಳಲು ನಿಮ್ಮ ಮಾರಾಟ ಚೀಟಿಯ ಪ್ರತಿಯನ್ನು ಜೋಪಾನವಾಗಿರಿಸಿಕೊಳ್ಳಿ.
k. ನಿಮ್ಮ digiSavingsನಲ್ಲಿ ಸಾಕಷ್ಟು ಬಾಕಿ ಇದ್ದಾಗ, ನೀವು ವ್ಯಾಪಾರದ ಅಂಗಡಿಗಳಲ್ಲಿ ಉಪಯೋಗಿಸುವ ಸಲುವಾಗಿ ಬ್ಯಾಂಕ್ ಕಾಲ ಕಾಲಕ್ಕೆ ನಿಗದಿ ಪಡಿಸುವ ಮೊತ್ತವನ್ನು, ನಿಮ್ಮ ಕಾರ್ಡ್ ಮಿತಿಯಾಗಿ ಸೆಟ್ ಮಾಡಲಾಗುತ್ತದೆ. ನೀವು ವ್ಯಾಪಾರದ ಅಂಗಡಿಗಳಲ್ಲಿ Debit Card ಉಪಯೋಗಿಸಿದಾಗ, ಖರೀದಿಸಿದ ಹಣದ ಮೊತ್ತವನ್ನು ಯಾವಾಗಲೂ ನಿಮ್ಮ digiSavings ಇಂದ ಕಡಿತ ಮಾಡಲಾಗುತ್ತದೆ.
l. Debit Card ವಹಿವಾಟು ಮಾಡಲು ಸಹಿ/ PIN ಅಗತ್ಯವಿರುವುದರಿಂದ ಯಾವುದೇ ಖರೀದಿ ಮಾಡುವಾಗ ನಿಮ್ಮ ಕಾರ್ಡ್ ಜೊತೆ ನೀವು ಸ್ವತಃ ಸ್ಥಳದಲ್ಲಿ ಹಾಜರಿರಬೇಕಾಗುತ್ತದೆ. mail order ಮತ್ತು telephone order ವಹಿವಾಟು ಮಾಡಲು Debit Card ಬಳಸಲು ಸಾಧ್ಯವಿಲ್ಲ.

ಭಾರತ ಮತ್ತು ವಿದೇಶಗಳಲ್ಲಿ Visa logo ಪ್ರದರ್ಶಿಸುವ, ಎಲ್ಲಾ Visa ಬೆಂಬಲಿತ Point-of-Sale terminal ಗಳಿರುವ ವ್ಯಾಪಾರದ ಅಂಗಡಿಗಳಲ್ಲಿ ಮಾತ್ರ Visa International Debit Card ಅನ್ನು ಅಂಗೀಕರಿಸಲಾಗುತ್ತದೆ. ವ್ಯಾಪಾರದ ಅಂಗಡಿಗಳಲ್ಲಿ Point of Sale terminalಗಳ ಮೂಲಕ ನೀವು Debit Card ಬಳಸಿದಾಗಲೆಲ್ಲ ಮಾರಾಟ ಚೀಟಿಯ ಮೇಲೆ ಸಹಿ ಮಾಡಿ, ನಿಮ್ಮ ಮಾರಾಟ ಚೀಟಿಯ ಪ್ರತಿಯನ್ನು ನಿಮ್ಮ ಬಳಿ ಇಟ್ಟುಕೊಂಡಿರಬೇಕು. ಮಾರಾಟ ಚೀಟಿಗಳನ್ನು ನಾವು ನೀಡುವುದಿಲ್ಲ. ನಿಮ್ಮ ಸಹಿ ಇಲ್ಲದಿರುವ ಆದರೆ ನೀವು ದೃಢೀಕರಿಸಿದ್ದೀರಿ ಎಂದು ಸಾಬೀತು ಮಾಡಬಹುದಾದ ಮಾರಾಟ ಚೀಟಿಯ ಜವಾಬ್ದಾರಿಯು ನಿಮ್ಮದೇ ಆಗಿರುತ್ತದೆ.

ನೀವು ಪಡೆದುಕೊಂಡಿರುವ ಅಥವಾ ನಿಮಗೆ ನೀಡಲಾದ ಸರಕು ಮತ್ತು ಸೇವೆಗಳೂ ಸೇರಿದಂತೆ, ಆದರೆ ಅಷ್ಟಕ್ಕೇ ಸೀಮಿತವಾಗಿರದೆ, ವ್ಯಾಪಾರಿಯ ಜೊತೆ ನೀವು ಯಾವುದೇ ಒಪ್ಪಂದ ಮಾಡಿಕೊಂಡಿದ್ದರೂ ಅದಕ್ಕೆ ನಾವು ಜವಾಬ್ದಾರರಲ್ಲ. Visa ಬೆಂಬಲಿತ ವ್ಯಾಪಾರಿಯ ಬಗ್ಗೆ ನಿಮಗೆ ಏನಾದರೂ ದೂರುಗಳಿದ್ದಲ್ಲಿ, ನೀವು ಆ ವಿಷಯವನ್ನು ವ್ಯಾಪಾರಿಯ ಬಳಿಯೆ ಬಗೆಹರಿಸಿಕೊಳ್ಳಬೇಕು. ಅದು ಸಾಧ್ಯವಾಗದಿದ್ದಲ್ಲಿ ನಮ್ಮ ಬಗ್ಗೆ ನಿಮಗಿರುವ ಉತ್ತರದಾಯಿತ್ವದಿಂದ ನೀವು ಮುಕ್ತರಾಗುವುದಿಲ್ಲ. Debit Card ಸ್ವೈಪ್ ಆದ ನಂತರ ನೀವು ಖರೀದಿಯನ್ನು ರದ್ದು ಮಾಡಲು ಬಯಸಿದರೆ ಅಥವಾ ಸರಕುಗಳನ್ನು ಸ್ವೀಕರಿಸದಿದ್ದರೆ, ವ್ಯಾಪಾರಿಯು ತಕ್ಷಣವೇ ವಹಿವಾಟನ್ನು ರದ್ದು ಮಾಡಿರುವುದನ್ನು ಖಚಿತಪಡಿಸಿಕೊಂಡು, ರದ್ದು ಚೀಟಿಯನ್ನು ಪಡೆದುಕೊಳ್ಳಿ. ಇದರ ನಂತರ ಮಾಡಿದ ರದ್ದತಿಯನ್ನು acquiring bank ಮೂಲಕ ವ್ಯಾಪಾರಿಯ ಮೇಲೆ ಆಗಿರುವ 'chargeback' ಎಂದು ಪರಿಗಣಿಸಲಾಗುತ್ತದೆ ಮತ್ತು ಈ ಪ್ರಕ್ರಿಯೆ ಮುಗಿಯಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಹಣ ಪೂರ್ತಿ/ಭಾಗಶಃ ವಾಪಸ್ ಆಗುತ್ತೆ ಎನ್ನುವುದಕ್ಕೆ ಯಾವುದೇ ಗ್ಯಾರೆಂಟಿ ಇರುವುದಿಲ್ಲ.

ವಹಿವಾಟಿನ ಬೆಲೆ/ಮೊತ್ತದ ಮೇಲೆ ವ್ಯಾಪಾರಿ ಅಂಗಡಿಯು ವಿಧಿಸುವ ಯಾವುದೇ ಶುಲ್ಕ, ಮತ್ತು ಆ ಶುಲ್ಕವನ್ನು ಆ ವ್ಯಾಪಾರಿಯು ವಹಿವಾಟಿನ ಮೊತ್ತದ ಜೊತೆ ನಿಮ್ಮ ಖಾತೆಯಿಂದ ಕಡಿತಗೊಳಿಸುವುದಕ್ಕೆ ನಾವು ಹೊಣೆಗಾರರಾಗಿರುವುದಿಲ್ಲ.

ಖರೀದಿ ಮತ್ತು ಸರಕು/ಸೇವೆಗಳ ರದ್ದಿನ ನಂತರ ಆಗುವ ಕ್ರೆಡಿಟ್, ಇವು ಎರಡು ವಿಭಿನ್ನ ವಹಿವಾಟುಗಳಾಗಿರುತ್ತವೆ. ರೀಫಂಡ್ ಮೊತ್ತವನ್ನು, ವ್ಯಾಪಾರಿಯಿಂದ ಸ್ವೀಕರಿಸಿದ ಬಳಿಕವಷ್ಟೇ ನಿಮ್ಮ digiSavings ಖಾತೆಗೆ (ರದ್ದತಿ ಶುಲ್ಕ ಕಡಿತಗೊಳಿಸಿ) ಜಮೆ ಮಾಡಲಾಗುವುದು. ವಹಿವಾಟು ರದ್ದಾದ ನಂತರ 30 ದಿನಗಳ ಒಳಗಾಗಿ ಕ್ರೆಡಿಟ್ ನಿಮ್ಮ digiSavings ಖಾತೆಗೆ ಜಮೆಯಾಗದಿದ್ದಲ್ಲಿ, ವ್ಯಾಪಾರಿಯಿಂದ ಪಡೆದುಕೊಂಡಿರುವ ರದ್ದತಿ ಚೀಟಿಯ ಪ್ರತಿಯೊಂದಿಗೆ ನಮ್ಮ ಗಮನಕ್ಕೆ ತರಬೇಕು.

mail order/ದೂರವಾಣಿ ಖರೀದಿ ಮಾಡಲು Debit Card ಉಪಯೋಗಿಸಬಾರದು. ಅಂತಹ ಬಳಕೆಯನ್ನು ಅನಧಿಕೃತ ಎಂದು ಪರಿಗಣಿಸುವುದರ ಜೊತೆಗೆ ಅದರಿಂದಾಗುವ ಖರ್ಚು ಮತ್ತು ಎಲ್ಲಾ ರೀತಿಯ ಪರಿಣಾಮಗಳಿಗೂ ನೀವೇ ಜವಾಬ್ದಾರರಾಗುತ್ತೀರಿ.

5.10.2 mVisa/Bharat QR

ನೀವು mVisa/Bharat QR ಸೌಲಭ್ಯ ಉಪಯೋಗಿಸಿಕೊಂಡು, ಭಾರತದಲ್ಲಿರುವ mVisa/Bharat QR ವ್ಯಾಪಾರಿಗಳಿಗೆ ನಿಮ್ಮ Visa Virtual Debit Card ಮತ್ತು Visa International Debit Card ಬಳಸಿ ಪಾವತಿ ಮಾಡಬಹುದು. mVisa/Bharat QR ಸೌಲಭ್ಯ ಉಪಯೋಗಿಸಲು, ನೀವು ಪಾವತಿ ಮಾಡಬೇಕಿರುವ ವ್ಯಾಪಾರಿಯ QR code ಸ್ಕ್ಯಾನ್ ಮಾಡಿ, ಪಾವತಿ ಮಾಡಿದ ನಂತರ ಪಾವತಿಯ

ವಿವರಗಳನ್ನು ಪರಶೀಲಿಸಿ, ಅದನ್ನು ದೃಢೀಕರಿಸಲು ಒಪ್ಪಿಕೊಂಡಿರುತ್ತೀರಿ. mVisa/Bharat QR ವಹಿವಾಟು ಪೂರ್ಣಗೊಳಿಸಿದ ನಂತರ, ನೀವು ವ್ಯಾಪಾರಿಗಳಿಗೆ ಪಾವತಿಸಿದ ಮೊತ್ತವನ್ನು, ನಿಮ್ಮ Debit Cardಗೆ ಜೋಡಣೆಯಾಗಿರುವ digibank e-wallet ಅಥವಾ digiSavings ಖಾತೆಯಿಂದ ಕಡಿತ ಮಾಡಲು ನೀವು ಒಪ್ಪಿರುತ್ತೀರಿ. ವಹಿವಾಟಿಗೆ ಸಂಬಂಧಿಸಿದಂತೆ ಗ್ರಾಹಕರಿಗೆ ಯಾವುದೇ ವ್ಯಾಜ್ಯವಿದ್ದಲ್ಲಿ, ವ್ಯಾಜ್ಯ ಬಗೆಹರಿಸುವ ಮಾರ್ಗಸೂಚಿಗಳ ಅನ್ವಯ ಬ್ಯಾಂಕ್, merchant acquirer bank ನೊಂದಿಗೆ chargeback ಕೋರಿಕೆ ಸಲ್ಲಿಸುವ ಪ್ರಮಾಣಿತ ವಿಧಾನವನ್ನು ಅನುಸರಿಸುತ್ತೇವೆ. ವ್ಯಾಜ್ಯದಲ್ಲಿರುವ ಮೊತ್ತವು ಗ್ರಾಹಕರ ಖಾತೆಗೆ ಜಮೆ ಆಗಲು ಕನಿಷ್ಟ 45 ದಿನಗಳನ್ನು ತೆಗೆದುಕೊಳ್ಳಬಹುದು.

## 5.11 ಅಂತರಾಷ್ಟ್ರೀಯ ಬಳಕೆ

ನಿಮ್ಮ Debit Card ಅನ್ನು ಭಾರತ ಹಾಗೂ ವಿದೇಶಗಳಲ್ಲಿರುವ DBS Bank ATM ಗಳು ಮತ್ತು Visa ATM ಗಳಲ್ಲಿ ಸ್ವೀಕರಿಸಲಾಗುವುದು. ನಿಮ್ಮ Debit Card ನೇಪಾಳ ಮತ್ತು ಭೂತಾನ್‌ನಲ್ಲಿ ವಿದೇಶಿ ವಿನಿಮಯ ಪಾವತಿಸಲು ಅರ್ಹತೆ ಹೊಂದಿರುವುದಿಲ್ಲ.

ದಯವಿಟ್ಟು ಗಮನಿಸಿ: ಅಂತರಾಷ್ಟ್ರೀಯ ಹಣ ಹಿಂಪಡೆಯುವ ವಹಿವಾಟು ಮಾಡಿದಾಗ, ಅಲ್ಲಿ ಅನ್ವಯವಾಗುವ ವಿನಿಮಯ ದರ ಮತ್ತು ಶುಲ್ಕವನ್ನು ವಿಧಿಸಲಾಗುವುದು.

Debit Card ಅನ್ನು ಭಾರತೀಯ ರಿಸರ್ವ್ ಬ್ಯಾಂಕ್(RBI) ಕಾಲ ಕಾಲಕ್ಕೆ ನೀಡುವ Exchange Control Regulations ಗೆ ಅನುಗುಣವಾಗಿ ಉಪಯೋಗಿಸಬೇಕು. ನೀವು ಇದನ್ನು ಅನುಸರಿಸದಿದ್ದ ಪಕ್ಷದಲ್ಲಿ, ಕಾಲ ಕಾಲಕ್ಕೆ ತಿದ್ದುಪಡಿಯಾಗುವ ಅಥವಾ ಬದಲಾಯಿಸಬಹುದಾದ Foreign Exchange Management Act 1999 (FEMA) ಅಡಿಯಲ್ಲಿ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬಹುದು ಅಥವಾ ಬ್ಯಾಂಕ್ ಅಥವಾ RBI ಸೂಚನೆ ಮೇರೆಗೆ ನೀವು Debit Card ಹೊಂದಲು ಅನರ್ಹ ಎಂದು ಘೋಷಿಸಬಹುದು. ನೀವು Exchange Control ನಿಬಂಧನೆಗಳನ್ನು ಅನುಸರಿಸಲು ವಿಫಲವಾದ ಸಂದರ್ಭದಲ್ಲಿ ಉಂಟಾಗುವ ಎಲ್ಲಾ/ಯಾವುದೇ ಪರಿಣಾಮಗಳಿಂದ ನಮಗೆ ಯಾವುದೇ ಹಾನಿಯಾಗುವುದಿಲ್ಲ ಹಾಗೂ ನೀವು ನಮ್ಮಿಂದ ಯಾವುದೇ ನಷ್ಟಪರಿಹಾರ ಕೋರುವಂತಿಲ್ಲ. ವಿದೇಶದಲ್ಲಿದ್ದ ನೀವು Visa ATM ಮೂಲಕ ಹಣ ಹಿಂಪಡೆಯುವಾಗ, ಖಾತೆ ಆಯ್ದುಕೊಳ್ಳಲು ಪರದೆಯ ಮೇಲೆ ಮೂರು ಆಯ್ಕೆಗಳು ಮೂಡುತ್ತವೆ - 1) ಉಳಿತಾಯ 2) ಚಾಲ್ತಿ 3) ಕ್ರೆಡಿಟ್. ದಯವಿಟ್ಟು "ಚಾಲ್ತಿ" ಆಯ್ಕೆ ಮಾಡಿ. ಈ ಆಯ್ಕೆ ನಿಮ್ಮನ್ನು Visa network ಗೆ ಒಯ್ಯುತ್ತದೆ. ಕೆಲವು ದೇಶಗಳಲ್ಲಿ ನೀವು "ಕ್ರೆಡಿಟ್" ಆಯ್ಕೆ ಮಾಡಬೇಕಾಗಬಹುದು.

ವಿದೇಶದ ಕೆಲವು ವ್ಯಾಪಾರಿ ಸ್ಥಳಗಳಲ್ಲಿ (ವಿಶೇಷವಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ) ಕ್ಯಾಷಿಯರ್ ಬಳಿ ನಿಮ್ಮ Debit Card ಅನ್ನು credit card ನಂತೆ ಸ್ವೈಪ್ ಮಾಡಲು ಕೇಳಬೇಕಾಗಿ ಬರಬಹುದು. ಏಕೆಂದರೆ ಕೆಲವು ದೇಶಗಳಲ್ಲಿ "Debit" ಕೇವಲ ಸ್ಥಳೀಯ ನೆಟ್‌ವರ್ಕ್‌ಗೆ ಜೋಡಣೆಯಾಗಿರುತ್ತದೆ ಮತ್ತು ಇದು Visa network ತಲುಪದ ಕಾರಣ ನಿಮ್ಮ ವಹಿವಾಟು ತಿರಸ್ಕೃತವಾಗಬಹುದು. ನಿಮ್ಮ Debit Card, ಮುಂದೆಯೂ Debit Card ಆಗೇ ಮುಂದುವರೆಯುತ್ತದೆ.

## 5.12 ನಿಮ್ಮ Debit Card ಅನುಕೂಲತೆಗಳು

### 5.12.1 ವಿಮೆ

Visa International Debit Card ನೊಂದಿಗೆ ಕಾರ್ಡ್ ಕಳೆಯುವಿಕೆ ಮತ್ತು ವೈಯಕ್ತಿಕ air accident ವಿಮೆ ಇರುತ್ತದೆ.

5.12.1.1 ಕಾರ್ಡ್ ಕಳೆದುಹೋದರೆ INR 50,000 ವರೆಗೆ ನಷ್ಟಪರಿಹಾರ

ಒಂದು ವೇಳೆ ನಿಮ್ಮ DBS Bank International Debit Card ಕಳೆದುಹೋದರೆ ಅಥವಾ ಕಳ್ಳತನವಾದರೆ, ಮೋಸದ ಖರೀದಿ ವಹಿವಾಟಿನ ಮೇಲೆ ನಿಮಗೆ ರಕ್ಷಣೆ ಸಿಗುತ್ತದೆ. ಈ ಸುರಕ್ಷತೆ 9 ದಿನಗಳ ಕಾಲ ಇರುತ್ತದೆ ಮತ್ತು ಕಾರ್ಡ್ ಕಳೆದಿರುವ ಅಥವಾ ಕಳ್ಳತನವಾಗಿರುವ ಬಗ್ಗೆ ಭಾರತದಲ್ಲಿರುವ DBS Bank (ನಮ್ಮ DBS Bank ಗ್ರಾಹಕ ಸೇವಾ ಸಂಖ್ಯೆ 18602103456 ಗೆ ಕರೆ ಮಾಡಿ) ಅಥವಾ Visa Global Assistance Helpline ಗೆ (ವಿದೇಶದಲ್ಲಿದ್ದರೆ) ವರದಿ ಮಾಡುವ ಎರಡು (2) ದಿನಗಳ ಮುಂಚಿನಿಂದ ಸುರಕ್ಷತೆ ನೀಡುತ್ತದೆ. ಕಾರ್ಡ್ ಕಳೆದಿರುವ ಅಥವಾ ಕಳುವಾಗಿರುವ ಬಗ್ಗೆ ಅಥವಾ ಅನಧಿಕೃತವಾಗಿ ಬಳಕೆಯಾಗಿರುವ ಬಗ್ಗೆ 24 ಗಂಟೆಯೂ ಕಾರ್ಯ ನಿರ್ವಹಿಸುವ ಗ್ರಾಹಕ ಸೇವಾ ಹಾಟ್‌ಲೈನ್ ಸಂಖ್ಯೆ 18602103456 ಗೆ ಕರೆ ಮಾಡುವ ಮೂಲಕ ಅಥವಾ ನಿಮ್ಮ ಹತ್ತಿರದ ಶಾಖೆಗೆ ಕೆಲಸದ ದಿನಗಳಲ್ಲಿ, ಕೆಲಸ ಮಾಡುವ ಸಮಯದಲ್ಲಿ ಭೇಟಿ ಕೊಟ್ಟು ಬರವಣಿಗೆಯ ಮೂಲಕ ನಮ್ಮ ಗಮನಕ್ಕೆ ತರಬಹುದು. ಹೆಚ್ಚಿನ ವಿವರಗಳಿಗಾಗಿ Visa International Debit Card ಒಪ್ಪಂದವನ್ನು ಓದಿಕೊಳ್ಳಿ.

ವಿಮೆಯ ವ್ಯಾಪ್ತಿ: ನಕಲಿ ಕಾರ್ಡ್/ಪ್ರಯಾಣ ಮಾಡುವಾಗ ಕಳೆದುಕೊಳ್ಳುವುದು/ ATM ವಹಿವಾಟುಗಳು/ internet Banking ವಹಿವಾಟುಗಳು, ವ್ಯಾಪಾರಿಯ ಅಂಗಡಿಯಲ್ಲಿನ point of sale ವಹಿವಾಟುಗಳು ಹಾಗೂ ಡೆಲಿವರಿ ಪೂರ್ವ ವಹಿವಾಟುಗಳು ಸೇರಿದಂತೆ ಎಲ್ಲಾ ಬಗೆಯ ದುರ್ಬಳಕೆಯ ವಿರುದ್ಧ ಸುರಕ್ಷತೆ ನೀಡುತ್ತದೆ.

ಪಾಲಿಸಿಯ ಉದ್ದೇಶಕ್ಕಾಗಿ: ATM ವಂಚನೆ ಎಂದರೆ, ಮೋಸದಿಂದ ಹಣ ಹಿಂಪಡೆಯುವುದು, ಕಳೆದಿರುವ /ಕಳ್ಳತನವಾದ ಕಾರ್ಡ್ ಬಳಸಿ ವಹಿವಾಟು ನಡೆಸುವುದು. Internet Banking ವಂಚನೆಯನ್ನು ಕಳೆದಿರುವ/ಕಳ್ಳತನವಾದ ಕಾರ್ಡ್ ಬಳಸಿ ಇಂಟರ್‌ನೆಟ್‌ನಲ್ಲಿ ಮೋಸದ ವಹಿವಾಟು ನಡೆಸುವುದು ಎಂದು ವ್ಯಾಖ್ಯಾನಿಸಬಹುದು. ಕಾರ್ಡ್ ಸದಸ್ಯ/ಅಧಿಕೃತ ವ್ಯಕ್ತಿ ವಹಿವಾಟು ಮಾಡದಿದ್ದಾಗ, ATM ಗೆ ಸಂಬಂಧಿಸಿದ ವಹಿವಾಟುಗಳಿಗೆ ರಕ್ಷಣೆ ಸಿಗುತ್ತದೆ.

PIN ಅಥವಾ Soft Token ID ಇಂದ ದೃಢೀಕರಣಗೊಂಡಿರುವ ಅಥವಾ PIN ಪರಿಶೀಲನೆಗೆ ಒಳಪಟ್ಟಿರುವ ವಹಿವಾಟುಗಳಿಗೆ ಸುರಕ್ಷತೆ ಸಿಗುವುದಿಲ್ಲ. ಕಾರ್ಡ್ ಕಳೆದ/ಕಳುವಾದ ಮೂರು ದಿನದ ಒಳಗಾಗಿ ನೀವು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರ ಅಥವಾ ಪೊಲೀಸ್ ಅಧಿಕಾರಿಯ ಬಳಿ ಪ್ರಥಮ ಮಾಹಿತಿ ವರದಿ (FIR) ದಾಖಲಿಸಬೇಕು ಮತ್ತು ಅದರ ಪ್ರತಿಯನ್ನು ಮೂರು ದಿನದೊಳಗೆ ಬ್ಯಾಂಕ್‌ಗೆ ಸಲ್ಲಿಸಬೇಕು.

ಕಳೆದುಹೋದ ಕಾರ್ಡ್‌ನ ಹೊಣೆಗಾರಿಕೆ:

a. ವರದಿಯ ಸಮಯ: ವರದಿ ಮಾಡುವ ಮುಂಚಿನ 2 ದಿನ ಮತ್ತು ವರದಿ ಮಾಡಿದ ನಂತರದ 7 ದಿನಗಳ ಸುರಕ್ಷತೆ
b. ನಕಲಿ ಕಾರ್ಡ್/ಪ್ರಯಾಣಿಸುವಾಗ ಕಳೆದುಕೊಳ್ಳುವುದು/ ATM ವಹಿವಾಟುಗಳು/ internet Banking ವಹಿವಾಟುಗಳು, ವ್ಯಾಪಾರಿಯ ಅಂಗಡಿಯಲ್ಲಿನ ವಹಿವಾಟು ಮತ್ತು point of sale ವಹಿವಾಟುಗಳು ಸೇರಿದಂತೆ ಎಲ್ಲಾ ಬಗೆಯ ಕಳೆದುಹೋದ ಅಥವಾ ಕಳುವಾದ ಕಾರ್ಡ್‌ನ ದುರ್ಬಳಕೆಯಿಂದ ಸುರಕ್ಷತೆ ನೀಡುತ್ತದೆ.

c. ATM ವಂಚನೆಯನ್ನು, ಮೋಸದಿಂದ ಹಣ ಹಿಂಪಡೆಯುವುದು, ಕಳೆದಿರುವ /ಕಳ್ಳತನವಾದ ಕಾರ್ಡ್ ಬಳಸಿ ವಂಚಿಸುವುದು ಎಂದು ವ್ಯಾಖ್ಯಾನಿಸಲಾಗಿದೆ.
d. ಕಾರ್ಡ್ ಸದಸ್ಯ/ಅಧಿಕೃತ ವ್ಯಕ್ತಿ ವಹಿವಾಟು ಮಾಡದಿದ್ದಾಗ, ATM ಗೆ ಸಂಬಂಧಿಸಿದ ವಹಿವಾಟುಗಳಿಗೆ ರಕ್ಷಣೆ ಸಿಗುತ್ತದೆ.
e. ಅನಧಿಕೃತ ವ್ಯಕ್ತಿಯು ಒತ್ತಾಯ ಪೂರ್ವಕವಾಗಿ PIN ಪಡೆದುಕೊಂಡಿರುವಾಗ, ಯಾವುದೇ PIN ಆಧಾರಿತ ವಹಿವಾಟುಗಳಿಗೆ (ATM, ಇಂಟರ್‌ನೆಟ್ ಮತ್ತು ದೂರವಾಣಿ ಇತ್ಯಾದಿ) ಸುರಕ್ಷತೆ ಇರುತ್ತದೆ.
f. ಎಲ್ಲಾ ಕಾರ್ಡ್‌ಗಳು ಚಿಪ್ ಮತ್ತು ಪಿನ್ ಆಧಾರಿತವಾಗಿರುವಾಗ, ಎರಡನೇ ಹಂತದ ದೃಢೀಕರಣದ ಉಲ್ಲಂಘನೆಯಿಂದ ಉಂಟಾಗುವ ನಷ್ಟಗಳಿಗೆ ಸುರಕ್ಷತೆ ಇರುವುದಿಲ್ಲ.
g. Internet Banking ವಂಚನೆ ಎಂದರೆ ಕಳೆದಿರುವ/ಕಳುವಾಗಿರುವ ಕಾರ್ಡ್ ಬಳಸಿ ಇಂಟರ್‌ನೆಟ್ ಮೂಲಕ ವಂಚಿಸುವುದು.
h. ಡೆಲಿವರಿ ಮುಂಚಿನ ವಂಚನೆಗೆ ಸುರಕ್ಷತೆ ಇರುವುದಿಲ್ಲ.
i. ಕಾರ್ಡ್ ಕಳುವಾದಾಗ FIR ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

5.12.2 ನಕಲಿ ಕಾರ್ಡ್‌ಗಳು

a. ಸ್ಕಿಮ್ಮಿಂಗ್ ಅಥವಾ ಅನಧಿಕೃತ ತೋರ್ಪಡಿಕೆ: ದೂರವಾಣಿ, ಫ್ಯಾಕ್ಸ್ ಮಷೀನ್, ಅಂಚೆ ಸೇವೆಗಳು ಅಥವಾ ಕಂಪ್ಯೂಟರ್ ಆಧಾರಿತ ವ್ಯವಸ್ಥೆ ಅಥವಾ ನೆಟ್‌ವರ್ಕ್ ಉಪಯೋಗಿಸಿಕೊಂಡು ಕಾರ್ಡ್ ಸದಸ್ಯ ಎಂದು ಹೇಳಿಕೊಂಡಿರುವ ವ್ಯಕ್ತಿ ಮೋಸದಿಂದ ಬ್ಯಾಂಕ್ ಕಾರ್ಡ್ ಬಳಸಿ ವಸ್ತು, ಕೆಲಸ ಅಥವಾ ಸೇವೆಗಳನ್ನು ವ್ಯಾಪಾರಿಯೊಬ್ಬರಿಂದ ತರಿಸಿಕೊಳ್ಳುವುದು.
b. ಸದಸ್ಯನಿಗೆ ಗೊತ್ತಿಲ್ಲದಂತೆ, ಬ್ಯಾಂಕ್ ನೀಡಿರುವ ಕಾರ್ಡ್‌ನಂತೆಯೇ ಇರುವ ನಕಲಿ ಅಥವಾ ಖೋಟಾ ಕಾರ್ಡ್‌ಗಳಿಂದ ಉಂಟಾಗುವ ನಷ್ಟಗಳು.
c. ಕಾರ್ಡ್ ಅನಧಿಕೃತವಾಗಿ ಬಳಕೆಯಾಗಿದೆ ಅಥವಾ ಕಳ್ಳತನವಾಗಿದೆ ಎಂದು ವಿಮೆ ಪಡೆದಿರುವ ವ್ಯಕ್ತಿಯ ಗಮನಕ್ಕೆ ಬಂದ ಮೇಲೆ ಸಾಧ್ಯವಾದಷ್ಟು ಬೇಗ, ಆದರೆ 7 ದಿನಗಳ ಒಳಗಾಗಿ ಕಾರ್ಡ್ ರದ್ದುಗೊಳಿಸಬೇಕು.
d. ವರದಿಯ ಸಮಯ: ವರದಿ ಮಾಡುವ ಮುಂಚಿನ 2 ದಿನ ಮತ್ತು ವರದಿ ಮಾಡಿದ ನಂತರದ 7 ದಿನಗಳ ಸುರಕ್ಷತೆ
e. ವಿವಾದಿತ ನಕಲಿ ವಹಿವಾಟು ನಡೆದಿದೆ ಎಂದು ಹೇಳಿಕೆ ನೀಡಿದ 15 ದಿನಗಳ ಒಳಗಾಗಿ ನಿಮ್ಮ ಕ್ಲೈಮ್ ಅನ್ನು ವರದಿ ಮಾಡಬೇಕು.

5.12.3 ಆನ್‌ಲೈನ್ ವಂಚನೆಯಿಂದ ರಕ್ಷಣೆ

a. ಫಿಶಿಂಗ್/ ಖಾತೆ ಸ್ವಾಧೀನಪಡಿಸಿಕೊಳ್ಳುವಿಕೆ – ಬಳಕೆದಾರ ಹೆಸರು, ಪಾಸ್‌ವರ್ಡ್‌ಗಳಂತಹ ಸೂಕ್ಷ್ಮ ಮಾಹಿತಿ ಮತ್ತು ವಿಮಾದಾರ ಅಥವಾ ವಿಮಾದಾರರ ಬ್ಯಾಂಕ್ ಕಾರ್ಡ್ ಪ್ರೊಸೆಸರ್‌ನಿಂದ ಮಾಲೀಕತ್ವ ಹೊಂದಿರದ, ನಿರ್ವಹಿಸದ ಅಥವಾ ಒಪ್ಪಂದ ಮಾಡಿಕೊಳ್ಳದ ಎಲೆಕ್ಟ್ರಾನಿಕ್ ಸಂಪರ್ಕದ ನಂಬಲರ್ಹ ಘಟಕವಾಗಿ ಮರೆಮಾಚಿ ಮಾಡುವ ಯಾವುದೇ ಕಾರ್ಡ್ ವಿವರಗಳ ಅನಧಿಕೃತ ಪ್ರವೇಶದಿಂದ ಪಡೆದ ಮಾಹಿತಿಯಿಂದಾಗಿ ಉಂಟಾಗುವ ಯಾವುದೇ ವಂಚನೆಯಿಂದಾದ ನಷ್ಟ ಅಥವಾ ಹಾನಿ.
b. ಪಾಲಿಸಿಯು ಬ್ಯಾಂಕ್ ನಿಮಗೆ ನೀಡಿರುವ CVV (Card Verification Value Code) ಉಪಯೋಗಿಸಿಕೊಂಡು ಮಾಡುವ ಎಲ್ಲಾ ಆನ್‌ಲೈನ್ ವಂಚನೆಗೆ ಸುರಕ್ಷತೆ ನೀಡುತ್ತದೆ.

c. ಬ್ಯಾಂಕ್ ನೀಡಿರುವ PIN ಬಳಸಿ ಮಾಡಲಾದ ಯಾವುದೇ ನಷ್ಟ ಅಥವಾ ಹಾನಿಯ ಹೊಣೆಗಾರಿಕೆಯನ್ನು ಕವರ್ ಮಾಡುತ್ತದೆ.
d. ವರದಿ ಮಾಡುವ ಕಾಲಾವಧಿ: ವರದಿ ಮಾಡುವ 2 ದಿನ ಮುಂಚೆ ಮತ್ತು ವರದಿ ಮಾಡಿದ ನಂತರ 7 ದಿನಗಳು
e. ಸೆಕ್ಯುರಿಟಿ ಕೋಡ್/ಪಾಸ್‌ವರ್ಡ್ ಆಧಾರಿತ ವಹಿವಾಟುಗಳನ್ನು ಕವರ್ ಮಾಡುವುದಿಲ್ಲ.
f. ಕೆಳಗಿನ ಸಂದರ್ಭಗಳಲ್ಲಿ ಅಥವಾ ಅದರ ಕಾರಣದಿಂದ ಉಂಟಾಗುವ ಯಾವುದೇ ಕ್ಲೈಮ್ ಅನ್ನು ಕಂಪನಿಯು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪಾವತಿ ಮಾಡುವುದಿಲ್ಲ.
g. ವಿಮೆ ಚಾಲ್ತಿಯಲ್ಲಿರುವ ಯಾವುದೇ ಸಮಯದಲ್ಲಿ, VeriSign Security status ಅಥವಾ ಅದಕ್ಕೆ ಸಮನಾದ security status ಇಲ್ಲದ ವೆಬ್‌ಸೈಟ್‌ನಲ್ಲಿ ನೀವು debit card ಅನ್ನು ದುರುಪಯೋಗ ಮಾಡಿದಾಗ.
h. ವೆಬ್‌ಸೈಟ್/ಅಧಿಕೃತ ಬ್ಯಾಂಕ್‌ನಿಂದ ವಿಫಲ/ನಕಲಿ/ತಿರಸ್ಕೃತ ವಹಿವಾಟುಗಳು ನಡೆದಾಗ.
i. ವೆಬ್‌ಸೈಟ್/ಅಧಿಕೃತ ಬ್ಯಾಂಕ್ ಮಾಡಿದ ಯಾವುದೇ ಬಗೆಯ ತಪ್ಪುಗಳು. Internet Banking ವಂಚನೆಯನ್ನು ಕಳೆದ/ಕಳುವಾದ ಕಾರ್ಡ್ ಬಳಸಿ ವಂಚಿಸುವುದು ಎಂದು ವ್ಯಾಖ್ಯಾನಿಸಲಾಗಿದೆ.

## 5.13 Global Customer Assistance Service (GCAS)

ಇದು Visa ಒದಗಿಸುವ ಶುಲ್ಕ ವಿಧಿಸಬಹುದಾದ ಸೇವೆಯಾಗಿದೆ. ಕಾರ್ಡ್ ಸದಸ್ಯರು Visa Global Customer Assistance Service ವತಿಯಿಂದ ದಿನದ 24 ಗಂಟೆಗಳು, ವಾರದ 7 ದಿನಗಳಲ್ಲಿ ನೆರವು ಪಡೆಯಬಹುದು. ಕಳೆದುಹೋದ/ಕಳುವಾದ ಕಾರ್ಡ್ ವರದಿಗಾಗಿ, ತುರ್ತು ನಗದು ನೆರವು ಅಥವಾ ವಿದೇಶದಲ್ಲಿ ನಿಮಗೆ ಅಗತ್ಯವಿರುವ ವಿವಿಧ ಮಾಹಿತಿ ಪಡೆಯಲು GCAS ಅನ್ನು ಬಳಸಬಹುದು. GCAS ಟೋಲ್ ಫ್ರೀ ಸಂಖ್ಯೆಗಳಿಗಾಗಿ ದಯವಿಟ್ಟು ವೆಬ್‌ಸೈಟ್ www.visa-asia.com ನೋಡಿ.

ದಯವಿಟ್ಟು ಗಮನಿಸಿ, ಪ್ರಸ್ತುತ ಸೇವೆಗಳಿಗೆ ವಿವಿಧ ಗ್ರಾಹಕ ವಿಚಾರಣೆಗಳಾಗಿ ಶುಲ್ಕ ವಿಧಿಸಲಾಗುತ್ತದೆ: ಕಳೆದುಹೋದ/ಕಳುವಾದ ಪ್ರತಿ ಕಾರ್ಡ್ ವರದಿಯ ವಿಚಾರಣೆಗೆ US $ 5: ಉಚಿತ. ದಯವಿಟ್ಟು ಗಮನಿಸಿ, ಈ ಶುಲ್ಕಗಳು ಕಾಲ ಕಾಲಕ್ಕೆ ಬದಲಾಗಬಹುದು.

## 5.14 ನಿಮ್ಮ Debit Card ಕಾಳಜಿ ವಹಿಸುವುದು

ಈ ಸರಳ ಮಾರ್ಗಸೂಚಿಗಳನ್ನು ಅನುಸರಿಸುವುದರಿಂದ Debit card ಬಳಸುವುದು ಒಂದು ಸಂತೋಷಕರ ಅನುಭವವಾಗುವುದು ಖಚಿತ.

a. ನಿಮ್ಮ Debit Card ಅನ್ನು ನಗದಿನಂತೆಯೇ ಪರಿಗಣಿಸಿ. ಅದನ್ನು ನಿಮ್ಮ ಬಳಿ ಯಾವಾಗಲೂ ಇಟ್ಟುಕೊಂಡಿರಿ, ಎಲ್ಲೆಂದರಲ್ಲಿ ಬಿಡಬೇಡಿ.
b. ನಿಮ್ಮ Debit Card ಕೇವಲ ನಿಮ್ಮ ಬಳಕೆಗಾಗಿ ಮಾತ್ರ. ಅದನ್ನು DBS ಬ್ಯಾಂಕ್ ಶಾಖೆಯಲ್ಲಿ(ಭಾರತ) ಗೊತ್ತುಪಡಿಸಿದ ಬ್ಯಾಂಕ್ ಅಧಿಕಾರಿಗಳನ್ನು ಹೊರತುಪಡಿಸಿ ಎಂದಿಗೂ ಯಾರಿಗೂ ಒಪ್ಪಿಸಬೇಡಿ. ಹಾಗೂ, ಅದರ ಮ್ಯಾಗ್ನೆಟಿಕ್ ಸ್ಟ್ರಿಪ್ ಸಹಿತ ಅನೇಕ ತುಂಡುಗಳಾಗಿ ಕತ್ತರಿಸಿದ ನಂತರ ಮಾತ್ರ ಇತರರಿಗೆ ಒಪ್ಪಿಸಬಹುದು.
c. ನಿಮ್ಮ ವೈಯಕ್ತಿಕ ಗುರುತಿನ ಸಂಖ್ಯೆಯನ್ನು (PIN) ಯಾರಿಗೂ ತಿಳಿಸಬೇಡಿ ಅಥವಾ ಗೊತ್ತಾಗದಂತೆ ನೋಡಿಕೊಳ್ಳಿ. ಸರಿಯಾಗಿ ಮನನ ಮಾಡಿಕೊಂಡ ನಂತರ ದಯವಿಟ್ಟು ಎಲ್ಲಾ PIN ಪುರಾವೆಗಳನ್ನು ನಾಶಮಾಡಿ. ಸಾಧ್ಯವಾದಷ್ಟು ಬೇಗ PIN ಅನ್ನು ನಿಮ್ಮ ಆಯ್ಕೆಯ ಸಂಖ್ಯೆಯೊಂದಕ್ಕೆ ಬದಲಾಯಿಸಿಕೊಳ್ಳಿ ಹಾಗೂ ಅದನ್ನು ಆಗಾಗ

ಬದಲಿಸುತ್ತಲೇ ಇರಿ ಎಂಬುದು ನಮ್ಮ ಸಲಹೆ. ದಯವಿಟ್ಟು ಗಮನಿಸಿ, PIN ಅನ್ನು ನಿಮ್ಮ digibank ಆ್ಯಪ್ ಅಥವಾ DBS ಬ್ಯಾಂಕ್ ATM ನಲ್ಲಿ ಬದಲಿಸಿಕೊಳ್ಳಬಹುದು.

d. ಒಂದು ವೇಳೆ ನಿಮ್ಮ debit card ಕಳೆದುಹೋದರೆ/ಕಳುವಾದರೆ ಅಥವಾ ನಿಮಗೆ ಅದರ ದುರ್ಬಳಕೆಯಾಗಿದೆ ಎಂಬ ಅನುಮಾನ ಬಂದರೆ, ನೀವು ಕೈಗೊಳ್ಳಬೇಕಾದ ಮೊದಲ ಕ್ರಮವೆಂದರೆ digibank ಆ್ಯಪ್‌ನಲ್ಲಿ ಕಾರ್ಡ್ ಅನ್ನು ಬ್ಲಾಕ್ ಮಾಡುವುದು. ಒಂದು ವೇಳೆ ಆ್ಯಪ್ ಬಳಸಲು ಸಾಧ್ಯವಾಗದಿದ್ದಲ್ಲಿ, ಗ್ರಾಹಕ ಸೇವಾ ಸಂಖ್ಯೆ 18602103456 (ದೇಶೀಯ) ಮತ್ತು 044-49021180 (ಭಾರತದ ಹೊರಗೆ ಪ್ರಯಾಣಿಸುವಾಗ, ತಕ್ಷಣವೇ ನಷ್ಟವನ್ನು ವರದಿ ಮಾಡಲು ಬಳಸಿ).

e. ಒಂದು ವೇಳೆ ನಿಮ್ಮ ಭೌತಿಕ debit card ಅನ್ನು ಮತ್ತೆ ಪಡೆಯಬೇಕಿದ್ದರೆ ಅಥವಾ ಅದನ್ನು ಮುಕ್ತಾಯಗೊಳಿಸಬೇಕಿದ್ದರೆ, ದಯವಿಟ್ಟು ಬ್ಲಾಕ್ ಮಾಡಲು ಅಥವಾ ಹೊಸ ಕಾರ್ಡ್ ಪಡೆಯುವ ಕೋರಿಕೆ ಸಲ್ಲಿಸಲು digibank ಆ್ಯಪ್‌ಗೆ ಲಾಗಿನ್ ಆಗಿ.

f. ಒಂದು ವೇಳೆ ನೀವು OTP ಆಧಾರಿತ eKYC ಪ್ರಕ್ರಿಯೆ ಬಳಸಿ ತೆರೆದಿರುವ digiSavings ಖಾತೆಯನ್ನು ಹೊಂದಿದ್ದರೆ ಹಾಗೂ ಪ್ರಸ್ತುತ ನಿಮ್ಮ ಬಳಿ ಭೌತಿಕ Debit Card ಇದ್ದರೆ, ನಿಮ್ಮ ಈಗಿನ ಭೌತಿಕ ಡೆಬಿಟ್ ಕಾರ್ಡ್‌ನ ಮರುಹಂಚಿಕೆಗಾಗಿ ವಿನಂತಿಸಿದಾಗ ನಿಮಗೆ ವರ್ಚುವಲ್ Debit Card ನೀಡಲಾಗುತ್ತದೆ.

g. ನಿಮ್ಮ ಭೌತಿಕ ಕಾರ್ಡ್‌ಗೆ ಬದಲಿಯಾಗಿ ಕೊಡುವ ಕಾರ್ಡ್ ಅನ್ನು ನಿಗದಿತ ಸಮಯದಲ್ಲಿ ಅನ್ವಯವಾಗುವ ಶುಲ್ಕಗಳೊಂದಿಗೆ ವಿತರಿಸಲಾಗುತ್ತದೆ. ನಿಮ್ಮ ಭೌತಿಕ ಕಾರ್ಡ್‌ನ ವಾಯ್ದೆ ಮುಗಿದಿದ್ದರೆ ಅಥವಾ ನಿಮ್ಮ digiSavings ಖಾತೆ ಮುಚ್ಚುತ್ತಿದ್ದರೆ, ಭೌತಿಕ ಕಾರ್ಡ್ ಅನ್ನು ಮ್ಯಾಗ್ನೆಟಿಕ್ ಸ್ಟ್ರಿಪ್ ಸಹಿತ ಹಲವು ತುಂಡುಗಳಾಗಿ ಕತ್ತರಿಸಿ.

h. ವ್ಯಾಪಾರಿ ಮಳಿಗೆಗಳಲ್ಲಿ ವಹಿವಾಟು ಮಾಡುವಾಗ ಕಾರ್ಡ್ ಅನ್ನು ಯಾವಾಗಲೂ ನಿಮ್ಮ ಹಾಜರಾತಿಯಲ್ಲೇ ಬಳಸುತ್ತಿರುವುದನ್ನು ಖಚಿತಪಡಿಸಿಕೊಳ್ಳಿ. ಅಪೂರ್ಣ ಶುಲ್ಕ ಚೀಟಿಗೆ ಎಂದಿಗೂ ಸಹಿ ಹಾಕಬೇಡಿ.

i. Debit Card ಅನ್ನು ಬಳಸುವ ಮೊದಲು ನೀವು Debit Card ನಿಯಮ ಮತ್ತು ಷರತ್ತುಗಳನ್ನು ಓದುವುದು ಕಡ್ಡಾಯವಾಗಿದೆ. ಅನ್ವಯವಾಗುವ ಶುಲ್ಕಗಳು ಮತ್ತು ಅವುಗಳ ವಿವರಗಳಿಗಾಗಿ ದಯವಿಟ್ಟು ಸೇವಾ ಶುಲ್ಕಗಳ ಪಟ್ಟಿಯನ್ನು ನೋಡಿ.

j. ದಯವಿಟ್ಟು ನಿಮ್ಮ ಭೌತಿಕ ಕಾರ್ಡ್ ಅನ್ನು ಟೆಲಿವಿಷನ್ ಮೇಲೆ ಅಥವಾ ನಿರಂತರ ಬೆಳಕು ಬೀರುವ ಯಾವುದೇ ಎಲೆಕ್ಟ್ರಾನಿಕ್ ಸಾಧನದ ಮೇಲೆ ಇಡಬೇಡಿ.

k. ಭೌತಿಕ ಕಾರ್ಡ್ ಮರುವಿತರಣೆಗಾಗಿ digibank ಆ್ಯಪ್‌ಗೆ ಲಾಗಿನ್ ಮಾಡಬೇಕಾಗುತ್ತದೆ. ಮರುವಿತರಣೆಗೆ ಖುದ್ದಾಗಿ ಮನವಿ ಸಲ್ಲಿಸುವುದು ಸಾಧ್ಯವಿಲ್ಲ.

### 5.15 PIN ಬದಲಾವಣೆ

ಭೌತಿಕ ಕಾರ್ಡ್ ಕಳೆದುಹೋದ ಅಥವಾ ಕಳುವಾದ ಸಂದರ್ಭದಲ್ಲಿ, ನೀವು ಹೊಸ ಭೌತಿಕ ಕಾರ್ಡ್ ಪಡೆಯಲು ಕೋರಿಕೆ ಸಲ್ಲಿಸಬಹುದು ಹಾಗೂ digibank ಆ್ಯಪ್‌ನಲ್ಲಿ ಹೊಸ PIN ಪಡೆಯಬಹುದು. ಕಾಲಕಾಲಕ್ಕೆ ಭೌತಿಕ ಡೆಬಿಟ್ ಕಾರ್ಡ್ ಮರುವಿತರಣೆಯ ಸಂದರ್ಭದಲ್ಲಿ ಅನ್ವಯವಾಗುವಂತೆ ಈ ಬದಲಾವಣೆಯ ಶುಲ್ಕ ವಿಧಿಸುವ ಹಕ್ಕು ನಮಗಿರುತ್ತದೆ. ಅನ್ವಯವಾಗುವ ಶುಲ್ಕಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್‌ನ ದರಗಳು ಮತ್ತು ಶುಲ್ಕಗಳ ಪುಟವನ್ನು ನೋಡಿ.

### 5.16 ಭಾರತದ ಹೊರಗೆ Visa International Debit Card ಬಳಕೆ

ಬ್ಯಾಂಕ್/Visa ನಿರ್ಧರಿಸಿದ ದರಗಳ ಆಧಾರದ ಮೇಲೆ ಪರಿವರ್ತನೆಯ ದಿನಾಂಕದಂದು ವಿದೇಶಿ ಕರೆನ್ಸಿಯಲ್ಲಿನ ವಹಿವಾಟುಗಳನ್ನು ಭಾರತೀಯ ರೂಪಾಯಿಗೆ ಪರಿವರ್ತಿಸಲಾಗುತ್ತದೆ.

DBS Live more, Bank less

ಮಾರುಕಟ್ಟೆಯ ಏರಿಳಿತದ ಕಾರಣದಿಂದಾಗಿ ವಹಿವಾಟಿನ ದಿನಾಂಕದಂದು ಚಾಲ್ತಿಯಲ್ಲಿರುವ ದರಕ್ಕಿಂತ ಪರಿವರ್ತನೆಗಾಗಿ ಬಳಸಲಾಗುವ ದರವು ಭಿನ್ನವಾಗಿರಬಹುದು. ವಿದೇಶಿ ಕರೆನ್ಸಿಯಲ್ಲಿನ ಎಲ್ಲಾ ವಹಿವಾಟುಗಳು ನಮ್ಮ ಮೇಲೆ ವಿಧಿಸಲಾದ ಶುಲ್ಕವನ್ನು ಪ್ರತಿನಿಧಿಸುವ ಮರುಪಾವತಿ ಶುಲ್ಕವಾಗಿ ಅಥವಾ ನಿಮಗೆ ನೇರ ಶುಲ್ಕವಾಗಿ Visa ಅಸೋಸಿಯೇಷನ್ ವಿಧಿಸಿದ ಶುಲ್ಕಕ್ಕೆ ಒಳಪಟ್ಟಿರುತ್ತದೆ. ಒದಗಿಸಿದ ಸೇವೆಗಳಿಗಾಗಿ ಅಥವಾ ಅಂತಹ ವಿದೇಶಿ ಕರೆನ್ಸಿ ವಹಿವಾಟುಗಳಿಗೆ ಸಂಬಂಧಿಸಿದಂತೆ ನಾವು ತೆಗೆದುಕೊಂಡ ಕ್ರಮಗಳಿಗಾಗಿ ವಿದೇಶಿ ಕರೆನ್ಸಿ ವಹಿವಾಟಿನ ಮೊತ್ತವನ್ನು ವಿಧಿಸುವ ಸಮಯದಲ್ಲಿ ಅನ್ವಯವಾಗುವ ಆಡಳಿತಾತ್ಮಕ ಶುಲ್ಕವನ್ನು ನೀವು ಪಾವತಿಸಬೇಕಾಗುತ್ತದೆ ಮತ್ತು ಅದನ್ನು ನಿಮ್ಮ digiSavings ನಿಂದ ಡೆಬಿಟ್ ಮಾಡಲಾಗುತ್ತದೆ.

### 5.17 Debit Card ಖಾತೆಯನ್ನು ತಡೆ ಹಿಡಿಯುವುದು

ಯಾವುದೇ ವಹಿವಾಟಿಗೆ ಸಂಬಂಧಿಸಿದಂತೆ, ಆ ವಹಿವಾಟಿನ ಪಾವತಿಗಾಗಿ ನಮಗೆ ಕೋರಿಕೆ ಸಲ್ಲಿಸಿದ ದಿನದಂದು ಅಥವಾ ಅಂತಹ ವಹಿವಾಟಿನ ಸೂಚನೆಯನ್ನು ನಾವು ಸ್ವೀಕರಿಸುವ ದಿನದಂದು ನಾವು ನಿಮ್ಮ digiSavings ಅನ್ನು ಬದಿಗಿರಿಸಬಹುದು ಅಥವಾ ತಡೆಹಿಡಿಯಬಹುದು. ಹೀಗೆ ಬದಿಗಿರಿಸಿದ ಅಥವಾ ತಡೆಹಿಡಿದ ಮೊತ್ತವು ನೈಜ ವಹಿವಾಟಿನ ಅಂದಾಜು ಮೊತ್ತ ಮಾತ್ರವಾಗಿರುತ್ತದೆ ಹಾಗೂ ಇದು ನಿಜವಾದ ವಹಿವಾಟಿನ ಮೊತ್ತಕ್ಕೆ ಸಮವಾಗಿಲ್ಲದಿರಬಹುದು. ನಾವು ಯಾವುದೇ ಮೊತ್ತವನ್ನು ಬದಿಗಿರಿಸಿದರೆ ಅಥವಾ ಹಿಡಿದಿಟ್ಟುಕೊಳ್ಳಬೇಕಾದರೆ, ನಿಮ್ಮ digiSavings ನಲ್ಲಿ ಲಭ್ಯವಿರುವ ಬ್ಯಾಲೆನ್ಸ್ ಅನ್ನು ನಾವು ಬದಿಗಿರಿಸಿ ಮೊತ್ತದಷ್ಟು ಕಡಿಮೆಗೊಳಿಸಲಾಗುತ್ತದೆ. ಅಂತಹ ವಹಿವಾಟುಗಳ ಪಾವತಿಯನ್ನು ನೀವು ನಿಲ್ಲಿಸಬಾರದು ಹಾಗೂ ನಾವು ಬದಿಗಿರಿಸಿದ ಅಥವಾ ತಡೆಹಿಡಿದ ಮೊತ್ತವನ್ನು ನೀವು ಬಳಸಬಾರದು. ಅನ್ವಯವಾಗುವಲ್ಲಿ, ಅಂತಹ ಮೊತ್ತಗಳನ್ನು ನಾವು 10 ದಿನಗಳವರೆಗೆ ಬದಿಗಿರಿಸಬಹುದು ಅಥವಾ ತಡೆಹಿಡಿಯಬಹುದು. ಅದರ ನಂತರ ನಾವು ನಿಜವಾದ ವಹಿವಾಟಿಗಾಗಿ ನಿಮ್ಮ digiSavings ಅನ್ನು ಪೂರ್ಣ ಮೊತ್ತಕ್ಕೆ ಡೆಬಿಟ್ ಮಾಡುತ್ತೇವೆ.

### 5.18 RBI ನಿಯಮಗಳು

ನೇಪಾಳ ಮತ್ತು ಭೂತಾನ್‌ನಲ್ಲಿ ವಿದೇಶಿ ಕರೆನ್ಸಿ ವಹಿವಾಟುಗಳಿಗೆ ಡೆಬಿಟ್ ಕಾರ್ಡ್ ಮಾನ್ಯವಾಗಿರುವುದಿಲ್ಲ (ಅಂದರೆ, ಸ್ಥಳೀಯ ಕರೆನ್ಸಿ ಅಥವಾ ಭಾರತೀಯ ರೂಪಾಯಿಯಲ್ಲದ ಯಾವುದೇ ಕರೆನ್ಸಿಯಲ್ಲಿ).

ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (RBI) ಸೂಚಿಸಿದ ವಿದೇಶಿ ವಿನಿಮಯ ನಿಯಮಗಳನ್ನು ನೀವು ಮೀರಿದ ಸಂದರ್ಭದಲ್ಲಿ ಒದಗುವ ಶುಲ್ಕಗಳನ್ನು ನೀವು ನಿರಾಕರಿಸಿದಾಗ ನೇರವಾಗಿ ಅಥವಾ ಪರೋಕ್ಷವಾಗಿ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಸಂಬಂಧಿಸಿದಂತೆ, ಅಂತಹ ನಿಯಮಗಳನ್ನು ನೀವು ಮೀರಿರುವುದು ನಮ್ಮ ಅರಿವಿಗೆ ಬಂದ ಸಂದರ್ಭದಲ್ಲಿ ಅವುಗಳಿಗೆ ನಾವು ಯಾವುದೇ ರೀತಿಯಲ್ಲಿ ಹೊಣೆಗಾರರಾಗಿರುವುದಿಲ್ಲ ಅಥವಾ ಅಂತಹ ನಷ್ಟಕ್ಕೆ ನಷ್ಟಪರಿಹಾರಕ್ಕೆ ಅರ್ಹರಾಗಿರುತ್ತೇವೆ.

ವಿದೇಶೀ ಪ್ರಯಾಣ ಮಾಡುವಾಗ ಬಹುಭಾಷೀ Visa Emergency Assistance Services Programme Visa ಕಾರ್ಡ್ ಸದಸ್ಯರಿಗೆ ವಿಶ್ವದಾದ್ಯಂತ ತುರ್ತು ರೆಫರಲ್ ಸಹಾಯ ನೀಡುತ್ತದೆ. ಇವುಗಳಲ್ಲಿ ವ್ಯಾಪಕ ಶ್ರೇಣಿಯ ಕಾನೂನು, ವೈದ್ಯಕೀಯ ಮತ್ತು ಇತರ ಸೇವೆಗಳು ಸೇರಿವೆ. ತುರ್ತು ಸಹಾಯ ಕಾರ್ಯಕ್ರಮದ ಸೇವೆಗಳ ಸಂವಹನಗಳು ಮತ್ತು ವ್ಯವಸ್ಥೆಗಳನ್ನು ಥರ್ಡ್ ಪಾರ್ಟಿ ಸೇವಾ ಪೂರೈಕೆದಾರರು ಒದಗಿಸುತ್ತಾರೆ ಹಾಗೂ ಅವುಗಳನ್ನು Visa International ಮೂಲಕ

ಪಾವತಿಸಲಾಗುತ್ತದೆ ಹಾಗೂ ಬಳಸಿದ ಯಾವುದೇ/ಎಲ್ಲ ವೈದ್ಯಕೀಯ, ಕಾನೂನು ಅಥವಾ ಇತರ ಸೇವೆಗಳ ವೆಚ್ಚಕ್ಕೆ ನೀವು ಜವಾಬ್ದಾರರಾಗಿರುತ್ತೀರಿ. ಸಹಾಯ ಒದಗಿಸಲು ಅತ್ಯುತ್ತಮ ಪ್ರಯತ್ನ ಮಾಡಲಾಗುತ್ತದೆ. ಆದರೆ, ಸಮಯ, ದೂರ ಅಥವಾ ಸ್ಥಳಗಳ ಸಮಸ್ಯೆಗಳಿಂದಾಗಿ ಅದು ಲಭ್ಯವಿಲ್ಲದಿರಬಹುದು. Visa International ನಿಂದ ಸೂಚಿಸಲಾದ ಮತ್ತು/ಅಥವಾ ಗೊತ್ತುಪಡಿಸಿದ ವೈದ್ಯಕೀಯ ಮತ್ತು/ಅಥವಾ ಕಾನೂನು ವೃತ್ತಿಪರರು Visa International ನ ಉದ್ಯೋಗಿಗಳಲ್ಲ, ಹೀಗಾಗಿ ಅವರು ಯಾವುದೇ ವೈದ್ಯಕೀಯ, ಕಾನೂನು ಅಥವಾ ಸಾರಿಗೆ ಸೇವೆಗಳ ಲಭ್ಯತೆ, ಬಳಕೆ, ಕಾರ್ಯಗಳು, ಲೋಪಗಳು ಅಥವಾ ಫಲಿತಾಂಶಗಳಿಗೆ ಜವಾಬ್ದಾರರಾಗಿರುವುದಿಲ್ಲ. ಅಂತಹ ಸೇವೆಗಳ ವ್ಯವಸ್ಥೆ ಅಥವಾ ಬಳಕೆಯನ್ನು ಕುರಿತಂತೆ ಬ್ಯಾಂಕ್ ಯಾವುದೇ ಜವಾಬ್ದಾರಿ ಹೊತ್ತಿರುವುದಿಲ್ಲ.

## 5.19 ನಷ್ಟ/ಕಳ್ಳತನ/ವಂಚನೆಯನ್ನು ತಡೆಯುವ ಕರ್ತವ್ಯ

ನಿಮ್ಮ Debit card ಎಂದಿಗೂ ನಮ್ಮ ಆಸ್ತಿಯಾಗಿರುತ್ತದೆ ಹಾಗೂ ನಮ್ಮ ಮನವಿಯ ಮೇರೆಗೆ ಅಥವಾ Debit Card ಮತ್ತು/ಅಥವಾ ಖಾತೆಯ ರದ್ದತಿ ಅಥವಾ ಮುಕ್ತಾಯವಾದಾಗ Visa International Debit Card ಅನ್ನು ನೀವು ನಾಶಗೊಳಿಸಬೇಕು. ನಿಮ್ಮ Debit Card ಅನ್ನು ನೀವು ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು ಮತ್ತು ನಿಮ್ಮ ಖಾತೆ ಸಂಖ್ಯೆ ಮತ್ತು PIN ಅನ್ನು ಬೇರೆ ಯಾವುದೇ ವ್ಯಕ್ತಿಗೆ ತಿಳಿಸಬಾರದು. Debit Card ಅನ್ನು ನೀವು ಮಾತ್ರ ಬಳಸಬೇಕು ಮತ್ತು ಯಾವುದೇ ರೀತಿಯಲ್ಲಿ ಅದನ್ನು ಭದ್ರತೆಯಾಗಿ ವರ್ಗಾಯಿಸಬಾರದು ಅಥವಾ ಒತ್ತೆ ಇಡಬಾರದು.

## 5.20 ಕಳೆದುಹೋದ/ಕಳುವಾದ ಭೌತಿಕ Debit Card ಅನ್ನು ಮರುಪಡೆಯುವುದು

ಒಂದು ವೇಳೆ ಕಳೆದುಹೋದ ಅಥವಾ ಕಳುವಾದ ಭೌತಿಕ ಡೆಬಿಟ್ ಕಾರ್ಡ್ ನಿಮಗೆ ಮತ್ತೆ ಸಿಕ್ಕರೆ, ಅದನ್ನು ಬಳಸದೇ ಮ್ಯಾಗ್ನೆಟಿಕ್ ಸ್ಟ್ರಿಪ್ ಸಹಿತ ಅರ್ಧದಷ್ಟು ಕತ್ತರಿಸಿ ತಕ್ಷಣವೇ ನಮಗೆ ಹಿಂತಿರುಗಿಸಬೇಕು.

## 5.21 ಭೌತಿಕ Debit Card ಅನ್ನು ಬದಲಾಯಿಸುವುದು

ಮೇಲೆ ತಿಳಿಸಲಾದ ಯಾವುದೇ ಘಟನೆ ಸಂಭವಿಸಿದಾಗ, ನಾವು ನಮ್ಮ ವಿವೇಚನೆಯ ಮೇರೆಗೆ digibank ಅಪ್ಲಿಕೇಶನ್‌ನಲ್ಲಿ 'ಹೊಸ ಭೌತಿಕ Debit Card ವಿನಂತಿಸಿ ಆಯ್ಕೆಯನ್ನು ಲಭ್ಯಗೊಳಿಸಬಹುದು.

## 5.22 ನಿಮ್ಮ ಖಾತೆಯನ್ನು ನಿರ್ವಹಿಸುವುದು

ಎಲ್ಲಾ ಖಾತೆ/ಗಳು, Visa International Debit Card ಮತ್ತು ವರ್ಚುವಲ್ Debit Card ಗೆ ಅನ್ವಯಿಸುತ್ತದೆ.

### 5.22.1 ವಹಿವಾಟುಗಳ ಹೊಣೆಗಾರಿಕೆ

ಮಾಸಿಕ ಎಲೆಕ್ಟ್ರಾನಿಕ್ ಸ್ಟೇಟ್‌ಮೆಂಟ್ ಅನ್ನು ಪ್ರತಿ ತಿಂಗಳ ಕೊನೆಯಲ್ಲಿ ರಚಿಸಲಾಗುತ್ತದೆ ಮತ್ತು ಅದು digibank ಅಪ್ಲಿಕೇಶನ್‌ನಲ್ಲಿ ಲಭ್ಯವಿರುತ್ತದೆ. ಈ ಸ್ಟೇಟ್‌ಮೆಂಟ್ ಹಿಂದಿನ ತಿಂಗಳಲ್ಲಿ ಖಾತೆಯಲ್ಲಿ ನೀವು ನಡೆಸಿದ ಎಲ್ಲಾ ವಹಿವಾಟುಗಳ ಪಟ್ಟಿಯನ್ನು ಹೊಂದಿರುತ್ತದೆ.

### 5.22.2 ಖಾತೆಯ ಬಾಕಿಗಳನ್ನು ಮೀಸಲಿಡುವುದು

ಖಾತೆಗೆ ಸಂಬಂಧಿಸಿದಂತೆ ನಿಮ್ಮೊಂದಿಗೆ ಅಥವಾ ಯಾವುದೇ ಇತರ ವ್ಯಕ್ತಿ(ಗಳು)ಯೊಂದಿಗೆ ಇರುವ ಯಾವುದೇ ಇತರ ಒಪ್ಪಂದದಲ್ಲಿ ನಾವು ಬೇರೆ ರೀತಿಯಲ್ಲಿ ಒಪ್ಪಿಕೊಂಡಿದ್ದರೂ ಸಹ; ನಿಮ್ಮ ಖಾತೆಯನ್ನು ಮುಚ್ಚಿದ ಅಥವಾ ಕೊನೆಗೊಳಿಸಿದ (ನಿಮ್ಮಿಂದ ಅಥವಾ ನಮ್ಮಿಂದ) ದಿನಾಂಕದ ನಂತರ ಏಳು (7) ದಿನಗಳವರೆಗೆ ನಿಮ್ಮ ಎಲ್ಲಾ/ಯಾವುದೇ ಖಾತೆ/ಗಳ ಮೇಲಿನ ಬ್ಯಾಲೆನ್ಸ್ ಅನ್ನು ಉಳಿಸಿಕೊಳ್ಳಲು ನಾವು ಅರ್ಹರಾಗಿದ್ದೇವೆ. ಖಾತೆ/ಗಳ ಮುಕ್ತಾಯವಾದ ತಕ್ಷಣ ಈ ಒಪ್ಪಂದದ ಅಡಿಯಲ್ಲಿರುವ ನಮ್ಮ ಹಕ್ಕುಗಳು ಕೊನೆಯಾಗುವುದಿಲ್ಲ. ಮತ್ತು ಓವರ್‌ಡ್ರಾಫ್ಟ್ ಶುಲ್ಕಗಳು (ಯಾವುದಾದರೂ ಇದ್ದರೆ) ಮತ್ತು/ಅಥವಾ ಖಾತೆಯನ್ನು ಮುಚ್ಚುವ ಅಥವಾ ಮುಕ್ತಾಯಗೊಳಿಸುವ ಮೊದಲು ಅಥವಾ ನಂತರದ ಡೆಬಿಟ್ ಕಾರ್ಡ್ ವಹಿವಾಟುಗಳೊಂದಿಗೆ ನಿಮ್ಮ ಖಾತೆ/ಗಳನ್ನು ಡೆಬಿಟ್ ಮಾಡುವುದನ್ನು ಮುಂದುವರಿಸುವ ಹಕ್ಕನ್ನು ನಾವು ಹೊಂದಿದ್ದೇವೆ. ಈ ಒಪ್ಪಂದದ ಅಡಿಯಲ್ಲಿ ನಮಗೆ ಪಾವತಿಸಬೇಕಾದ ಯಾವುದೇ ಬಾಕಿಗಾಗಿ ನಿಮ್ಮ ಹೊಣೆಗಾರಿಕೆ (ಮತ್ತು ಯಾರ ಹೆಸರಿನಲ್ಲಿ ಖಾತೆಯನ್ನು ನಿರ್ವಹಿಸಲಾಗುತ್ತಿದೆಯೋ ಅಂತಹ ಇತರ ಎಲ್ಲ ವ್ಯಕ್ತಿಗಳ ಹೊಣೆಗಾರಿಕೆ, ಯಾವುದಾದರೂ ಇದ್ದರೆ) ಮುಂದುವರಿಯುತ್ತದೆ.

## 5.23 ಫೀ ಮತ್ತು ಶುಲ್ಕಗಳು

### 5.23.1 ನಗದು ವಿತ್‌ಡ್ರಾವಲ್/ಬ್ಯಾಲೆನ್ಸ್ ವಿಚಾರಣೆಯ ಶುಲ್ಕ

ಅನ್ವಯವಾಗುವ ಈಗಿನ ಶುಲ್ಕಗಳ ವಿವರಗಳಿಗಾಗಿ www.dbs.com/digibank/in/rates-and-fees.html ನಲ್ಲಿ ಲಭ್ಯವಿರುವಂತೆ ದಯವಿಟ್ಟು "ದರ ಮತ್ತು ಶುಲ್ಕಗಳ" ಪುಟವನ್ನು ನೋಡಿ.

ನಗದು ವಿತ್‌ಡ್ರಾವಲ್‌ಗಾಗಿ ಸಲ್ಲಿಸುವ ಸಮಯದಲ್ಲಿ ಅನ್ವಯವಾಗುವಂತಿದ್ದರೆ, ಪ್ರತಿ ನಗದು ವಿತ್‌ಡ್ರಾವಲ್ ವಹಿವಾಟು/ಬ್ಯಾಲೆನ್ಸ್ ವಿಚಾರಣೆಗೆ ತಗುಲುವ ಶುಲ್ಕವನ್ನು ನಿಮ್ಮ digisavings ನಿಂದ ನಾವು ಡೆಬಿಟ್ ಮಾಡಬಹುದು.

### 5.23.2 ವಾರ್ಷಿಕ ಶುಲ್ಕಗಳು

Debit Card ಗೆ ವಾರ್ಷಿಕ ಶುಲ್ಕಗಳು ಯಾವುದಾದರೂ ಇದ್ದರೆ, ಬ್ಯಾಂಕ್‌ನ ಚಾಲ್ತಿಯಲ್ಲಿರುವ ದರದಲ್ಲಿ ಅಪ್ಲಿಕೇಶನ್/ನವೀಕರಣಕ್ಕಾಗಿ Debit Card ಗೆ ಲಿಂಕ್ ಮಾಡಲಾದ ಖಾತೆಯಿಂದ ಡೆಬಿಟ್ ಮಾಡಲಾಗುತ್ತದೆ. ಈ ಶುಲ್ಕಗಳನ್ನು ಮರುಪಾವತಿಸಲಾಗುವುದಿಲ್ಲ.

### 5.23.3 ಮರುವಿತರಣೆಯ ಶುಲ್ಕಗಳು

ಭೌತಿಕ ಡೆಬಿಟ್ ಕಾರ್ಡ್ ವಿತರಣೆ ಅಥವಾ ಮರುವಿತರಣೆಗಾಗಿ ಯಾವುದೇ ಸಮಯದಲ್ಲಿ ನಿಮಗೆ ಶುಲ್ಕ ವಿಧಿಸಲು ಬ್ಯಾಂಕ್ ಹಕ್ಕನ್ನು ಹೊಂದಿರುತ್ತದೆ.

### 5.23.4 ಕಾನೂನು/ನಿಯಂತ್ರಕ ಶುಲ್ಕಗಳು

ಡೆಬಿಟ್ ಕಾರ್ಡ್ ಬಳಕೆಗಾಗಿ ಪಾವತಿಸಬೇಕಾದ ಯಾವುದೇ ಸರ್ಕಾರಿ ಶುಲ್ಕಗಳು, ಸುಂಕ ಅಥವಾ ಡೆಬಿಟ್‌ಗಳು ಅಥವಾ ತೆರಿಗೆಗಳು ನಿಮ್ಮ ಮತ್ತು ಬ್ಯಾಂಕ್ ಮೇಲೆ ಹೇರಿದರೆ (ನೇರವಾಗಿ ಅಥವಾ ಪರೋಕ್ಷವಾಗಿ) ಅಥವಾ ಈ ಒಪ್ಪಂದದ ಅಡಿಯಲ್ಲಿ ಪಾವತಿಸಬೇಕಾದ ಯಾವುದೇ ಮೊತ್ತಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಅಂತಹ ಶುಲ್ಕಗಳು, ಸುಂಕ ಅಥವಾ ತೆರಿಗೆಯನ್ನು ಖಾತೆಯಿಂದ ಡೆಬಿಟ್ ಮಾಡುತ್ತದೆ.

### 5.23.5 ಇತರೆ ಶುಲ್ಕಗಳು

ಮೇಲಿನವುಗಳ ಜೊತೆಗೆ, ನಾವು ನಿಮ್ಮ ಖಾತೆಯನ್ನು ಮತ್ತು/ಅಥವಾ ನೀವು ನಮ್ಮೊಂದಿಗೆ ನಿರ್ವಹಿಸುವ ಯಾವುದೇ ಖಾತೆಯನ್ನು ಈ ಕೆಳಗಿನ ಶುಲ್ಕಗಳು ಸೇರಿದಂತೆ ಆದರೆ ಇವುಗಳಿಗೆ ಸೀಮಿತವಾಗಿರದಂತೆ ಡೆಬಿಟ್ ಮಾಡಬಹುದು.

a. ಭೌತಿಕ ಡೆಬಿಟ್ ಕಾರ್ಡ್ ಅಥವಾ ನಿಮ್ಮ ಡೆಬಿಟ್ ಕಾರ್ಡ್‌ಗೆ ಸಂಬಂಧಿಸಿದ ಯಾವುದೇ ದಾಖಲೆಗಳ ಬದಲಾವಣೆಗಾಗಿ, ಅಂತಹ ದಾಖಲೆಗಳ ರಚನೆಗೆ ತಗುಲುವ ಆಡಳಿತಾತ್ಮಕ ಶುಲ್ಕಗಳು.
b. "ನೋ ಶೋ ರಿಸರ್ವೇಶನ್" ಗಾಗಿ ರದ್ದತಿ ಶುಲ್ಕಗಳು, ಇದು ನಿಮ್ಮ Visa International Debit Card ಮೂಲಕ ಪಡೆದ ಏರ್‌ಲೈನ್ ಅಥವಾ ಹೋಟೆಲ್ ಕಾಯ್ದಿರಿಸುವಿಕೆಯನ್ನು ರದ್ದುಗೊಳಿಸಲು ವಿಧಿಸಿದ ಅಥವಾ ಅದನ್ನು ಬಳಸಲು ವಿಫಲವಾದಾಗ ತಗುಲುವ ಶುಲ್ಕ.
c. ನಿಮ್ಮ digiSavings ಗೆ ಸಂಬಂಧಿಸಿದಂತೆ ನಿಮ್ಮ ಯಾವುದೇ ಸೂಚನೆಗಳು ಮತ್ತು/ಅಥವಾ ವಿನಂತಿಗಳನ್ನು ನಿರ್ವಹಿಸಲು ನಾವು ತೆಗೆದುಕೊಂಡ ಯಾವುದೇ ಕ್ರಮಕ್ಕಾಗಿ ಸೇವಾ ಶುಲ್ಕ/ಆಡಳಿತ ಶುಲ್ಕಗಳು, ಅಂತಹ ಸೇವೆ ಅಥವಾ ಕ್ರಿಯೆಯನ್ನು ಈ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಉಲ್ಲೇಖಿಸದ ಅಥವಾ ಪರಿಗಣಿಸದ ಹೊರತಾಗಿಯೂ ಅನ್ವಯವಾಗುತ್ತದೆ.
d. ಎಲೆಕ್ಟ್ರಾನಿಕ್ ಸೇವೆಗಳ ನಿಬಂಧನೆ ಮತ್ತು/ಅಥವಾ ಬಳಕೆಗೆ (ಅಧಿಕೃತ ಅಥವಾ ಅನಧಿಕೃತ) ಮತ್ತು ಎಲೆಕ್ಟ್ರಾನಿಕ್ ಸೇವೆಗಳ ನಿಬಂಧನೆ ಮತ್ತು/ಅಥವಾ ಬಳಕೆಯ ಪರಿಣಾಮವಾಗಿ ನಾವು ಅನುಭವಿಸುವ ಯಾವುದೇ ಇತರ ಹೊಣೆಗಾರಿಕೆಗಳು ಮತ್ತು ನಷ್ಟಗಳ ಫೀಗಳು, ಶುಲ್ಕಗಳು, ವಿತ್‌ಡ್ರಾಗಳು ಮತ್ತು ಪಾವತಿಗಳು
e. ಜೊತೆಗೆ, ಹಂಚಿಕೊಂಡು ಬಳಸುವ ನೆಟ್‌ವರ್ಕ್‌ಗಳ ನಿರ್ವಾಹಕರು ತಮ್ಮ ATM/POS ಟರ್ಮಿನಲ್/ಇತರ ಸಾಧನದ ಪ್ರತಿ ಬಳಕೆಗೆ ಹೆಚ್ಚುವರಿ ಶುಲ್ಕವನ್ನು ವಿಧಿಸಬಹುದು, ಅಂತಹ ಯಾವುದೇ ಶುಲ್ಕವನ್ನು ಇತರ ಅನ್ವಯವಾಗುವ ಶುಲ್ಕಗಳು/ಶುಲ್ಕಗಳನ್ನು ಖಾತೆಯಿಂದ ಕಡಿತಗೊಳಿಸಲಾಗುತ್ತದೆ. ಅಂತಹ ಸೌಲಭ್ಯಗಳಿಗೆ ಕಾಲಕಾಲಕ್ಕೆ ಬ್ಯಾಂಕ್ ಘೋಷಿಸಬಹುದಾದಂತೆ ಪ್ರತ್ಯೇಕ ಸೇವಾ ಶುಲ್ಕಗಳನ್ನು ವಿಧಿಸಬಹುದು ಮತ್ತು ಖಾತೆಯಿಂದ ಕಡಿತಗೊಳಿಸಬಹುದು.
f. ಡೆಬಿಟ್ ಕಾರ್ಡ್‌ಗೆ(ಸೂಕ್ತ ಕಾನೂನು ಶುಲ್ಕಗಳು ಸೇರಿದಂತೆ, ಆದರೆ ಅದಕ್ಕಷ್ಟೇ ಸೀಮಿತವಲ್ಲದೆ,) ಸಂಬಂಧಿಸಿದಂತೆ ನೀವು ಪಾವತಿಸಬೇಕಾದ ಹಣವನ್ನು ಸಂಗ್ರಹಿಸಲು ಉಂಟಾಗಬಹುದಾದ ಯಾವುದೇ ವೆಚ್ಚಗಳಿಗೆ ನಿಮ್ಮ ಖಾತೆಯಿಂದ ಕಡಿತಗೊಳಿಸಲು ನೀವು ಬ್ಯಾಂಕ್‌ಗೆ ಅಧಿಕಾರ ನೀಡುತ್ತೀರಿ ಮತ್ತು ಅಂತಹ ವೆಚ್ಚಗಳಿಗೆ ಬ್ಯಾಂಕ್‌ಗೆ ನಷ್ಟಪರಿಹಾರ ನೀಡಲು ಬದ್ಧರಾಗಿರುತ್ತೀರಿ. ಕನಿಷ್ಠ ಬ್ಯಾಲೆನ್ಸ್ ಷರತ್ತಿನ ಜೊತೆಗೆ digibank Debit Card ಬಳಕೆಗಾಗಿ ಸೇವೆ ಮತ್ತು ಇತರ ಶುಲ್ಕಗಳನ್ನು ವಿಧಿಸಬಹುದು, ಅದನ್ನು ಕಾಲಕಾಲಕ್ಕೆ ನಿಮಗೆ ತಿಳಿಸಲಾಗುತ್ತದೆ.
g. ನೀವು Debit Card ಬಳಸಿ ಭಾರತದ ಹೊರಗೆ ವಹಿವಾಟುಗಳನ್ನು ನಡೆಸಿದ ಸಂದರ್ಭದಲ್ಲಿ, Debit Card ಹೊಂದಿರುವವರ ಖಾತೆಯನ್ನು ಅವರು ಹೊಂದಿರುವ ಕರೆನ್ಸಿಗೆ ಸಮಾನವಾದ ಹಣವನ್ನು ಸಂಸ್ಕರಣಾ ಶುಲ್ಕಗಳು, ಪರಿವರ್ತನೆ ಶುಲ್ಕಗಳು, Visa ನಿಯಮಾವಳಿಗಳ ಪ್ರಕಾರ ವಿಧಿಸಿದ ಯಾವುದೇ ಶುಲ್ಕಗಳು, ಅಂತಹ ವಹಿವಾಟುಗಳಿಗೆ ಯಾವುದೇ ಇತರ ಸೇವಾ ಶುಲ್ಕಗಳು ಸೇರಿದಂತೆ ಭಾರತದಲ್ಲಿ DBS ಬ್ಯಾಂಕ್‌ನಲ್ಲಿ ಹೊಂದಿರುವ ಖಾತೆಗೆ ಡೆಬಿಟ್ ಮಾಡಲಾಗುತ್ತದೆ.

5.23.6 ಶುಲ್ಕಗಳನ್ನು ಬದಲಾಯಿಸುವ ಹಕ್ಕು

ನಮ್ಮ ವಿವೇಚನೆಯ ಮೇರೆಗೆ ನಿಮಗೆ ಮುಂಚಿತವಾಗಿ ತಿಳಿಸುವ ಮೂಲಕ ಈ ಒಪ್ಪಂದದ ಅಡಿಯಲ್ಲಿ ಪಾವತಿಸಬೇಕಾದ ಯಾವುದೇ ಶುಲ್ಕ, ಫೀ ಅಥವಾ ಓವರ್‌ಡ್ರಾಫ್ಟ್ ದರ ಅಥವಾ ಮೊತ್ತವನ್ನು ನಾವು ಬದಲಾಯಿಸಬಹುದು. ಒಂದು ಅವಧಿಯನ್ನು ನಿರ್ದಿಷ್ಟಪಡಿಸಲಾಗುತ್ತದೆ, ಅದರ ನಂತರ ನೀವು ಬದಲಾವಣೆಯನ್ನು ಸ್ವೀಕರಿಸಿದ್ದೀರಿ ಎಂದು ಪರಿಗಣಿಸಲಾಗುತ್ತದೆ ಮತ್ತು ಪರಿಷ್ಕೃತ ಶುಲ್ಕಗಳು/ಶುಲ್ಕಗಳು ಅನ್ವಯವಾಗುತ್ತವೆ. ಬ್ಯಾಂಕ್ ನಿಗದಿಪಡಿಸಿದಂತೆ ಅನ್ವಯವಾಗುವ ಶುಲ್ಕಗಳು ಮತ್ತು ಶುಲ್ಕಗಳ ವಿವರಗಳನ್ನು ವೆಬ್‌ಸೈಟ್ ಮತ್ತು/ಅಥವಾ ಶಾಖೆಗಳಲ್ಲಿ ಪ್ರದರ್ಶಿಸಲಾಗುತ್ತದೆ. ಅನ್ವಯವಾಗುವ ದರಗಳ ವಿವರಗಳಿಗಾಗಿ ದಯವಿಟ್ಟು ವೆಬ್ ಸೈಟ್‌ನಲ್ಲಿ ದರಗಳು ಮತ್ತು ಶುಲ್ಕಗಳ ಪುಟವನ್ನು ನೋಡಿ.

5.23.7 ಶುಲ್ಕಗಳ ಸಂಗ್ರಹಣೆ ಹಾಗೂ ವಸೂಲಾತಿ

Visa International Debit Card ಒದಗಿಸಲು ಮತ್ತು ಬಳಸಲು ಸೇವಾ ಶುಲ್ಕಗಳಿಗಾಗಿ ನಿಮಗೆ ಶುಲ್ಕ ವಿಧಿಸುವ ಮತ್ತು ನಿಮ್ಮಿಂದ ಅದನ್ನು ವಸೂಲಿ ಮಾಡುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ. ನೀವು ಈ ಮೂಲಕ ಖಾತೆ ಅಥವಾ ನೀವು ಹೊಂದಿರುವ ಯಾವುದೇ ಇತರ ಖಾತೆ/ಗಳನ್ನು ಡೆಬಿಟ್ ಮಾಡುವ ಮೂಲಕ ಸೇವಾ ಶುಲ್ಕಗಳನ್ನು ವಸೂಲಿ ಮಾಡಲು ಬ್ಯಾಂಕ್‌ಗೆ ಅಧಿಕಾರ ನೀಡುತ್ತೀರಿ. ನೀವು ಹಾಗೆ ಮಾಡಲು ವಿಫಲವಾದರೆ, ಬ್ಯಾಂಕ್ ತಮಗೆ ಸೂಕ್ತವೆನಿಸುವ ರೀತಿಯಲ್ಲಿ ಸೇವಾ ಶುಲ್ಕಗಳನ್ನು ತಾವು ಅನ್ವಯಿಸುವ ಬಡ್ಡಿಯೊಂದಿಗೆ ಮರುಪಡೆಯುವ ಮತ್ತು/ಅಥವಾ Visa International Debit Card ಅನ್ನು ತಮ್ಮ ಮೇಲೆ ಯಾವುದೇ ಹೊಣೆಯಿಲ್ಲದಂತೆ ಅಮಾನತು ಅಧಿಕಾರ ಹೊಂದಿರುತ್ತದೆ.

## 5.24 ಡೆಬಿಟ್ ಕಾರ್ಡ್ ಮತ್ತು ಖಾತೆಯ ಬಳಕೆಯನ್ನು ಮುಕ್ತಾಯಗೊಳಿಸುವಿಕೆ

5.24.1 ಮುಕ್ತಾಯಗೊಳಿಸಲು ನಮ್ಮ ಹಕ್ಕು

ನಿಮ್ಮ Debit Card ಅಥವಾ ಖಾತೆ ಅಥವಾ ನಿಮ್ಮ ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯನ್ನು ನಾವು ಯಾವುದೇ ಕಾರಣಗಳನ್ನು ಅಥವಾ ಸೂಚನೆಯನ್ನು ನೀಡದೆಯೇ/ಯಾವುದೇ ಸಮಯದಲ್ಲಿ ಅಮಾನತುಗೊಳಿಸಬಹುದು ಅಥವಾ ಕೊನೆಗೊಳಿಸಬಹುದು. ಅಮಾನತುಗೊಳಿಸಿದ ನಂತರ, ನೀವು Debit card ಅನ್ನು ಬಳಸಬಾರದು ಅಥವಾ ಬಳಸಲು ಪ್ರಯತ್ನಿಸಬಾರದು. ಅಂತಹ ಯಾವುದೇ ಬಳಕೆಯನ್ನು ವಂಚನೆ ಎಂದು ಪರಿಗಣಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ Debit Card ಬಳಕೆಯನ್ನು ನಾವು ಕೊನೆಗೊಳಿಸಿದರೆ, ನೀವು Visa International Debit Card ಅನ್ನು ನಿಷ್ಕ್ರಿಯಗೊಳಿಸಬೇಕು (Visa ವರ್ಚುವಲ್ Debit Card ಸಂದರ್ಭದಲ್ಲಿ) ಅಥವಾ ಮ್ಯಾಗ್ನೆಟಿಕ್ ಸ್ಟ್ರಿಪ್ ಸಹಿತ ಅರ್ಧದಷ್ಟು ಕತ್ತರಿಸಿ ಅದನ್ನು ನಮಗೆ ಹಿಂತಿರುಗಿಸಬೇಕು. Debit Card ಅನ್ನು ಮುಕ್ತಾಯಗೊಳಿಸಿದಾಗ ಪಾವತಿಸಿದ ಯಾವುದೇ ಶುಲ್ಕವನ್ನು ಯಾವುದೇ ಕಾರಣಕ್ಕಾಗಿ ಮರುಪಾವತಿಸಲಾಗುವುದಿಲ್ಲ.

5.24.2 ಮುಕ್ತಾಯಗೊಳಿಸಲು ನಿಮ್ಮ ಹಕ್ಕು

ನಮಗೆ ಲಿಖಿತ ಸೂಚನೆ ನೀಡುವ ಮೂಲಕ ಮತ್ತು ಮ್ಯಾಗ್ನೆಟಿಕ್ ಸ್ಟ್ರಿಪ್ ಸಹಿತ ಅರ್ಧಕ್ಕೆ ಕತ್ತರಿಸಲಾದ ಭೌತಿಕ ಡೆಬಿಟ್ ಕಾರ್ಡ್ ಅನ್ನು ನಮಗೆ ಹಿಂತಿರುಗಿಸುವ ಮೂಲಕ (ಅನ್ವಯಿಸಿದರೆ) ಅಥವಾ ವರ್ಚುವಲ್ Debit Card ಅನ್ನು ನಿಷ್ಕ್ರಿಯಗೊಳಿಸುವ ಮೂಲಕ (Visa ವರ್ಚುವಲ್ Debit Card ಸಂದರ್ಭದಲ್ಲಿ) ನೀವು ಯಾವುದೇ ಸಮಯದಲ್ಲಿ ನಿಮ್ಮ Debit Card ಅಥವಾ ನಿಮ್ಮ ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯನ್ನು ಕೊನೆಗೊಳಿಸಬಹುದು. ಸಂದರ್ಭಕ್ಕೆ ಅನುಗುಣವಾಗುವಂತೆ ನಮಗೆ ಲಿಖಿತ ಸೂಚನೆಯನ್ನು ನೀಡುವ ಮೂಲಕ ಮತ್ತು

(ಅನ್ವಯಿಸಿದರೆ) ಡೆಬಿಟ್ ಕಾರ್ಡ್ ಅನ್ನು ಸರೆಂಡರ್ ಮಾಡುವುದರ/ನಿಷ್ಕ್ರಿಯಗೊಳಿಸುವ ಮೂಲಕ ನೀವು ಈ ಒಪ್ಪಂದವನ್ನು ಕೊನೆಗೊಳಿಸಬಹುದು. ಮುಕ್ತಾಯದ ನಂತರ, ನೀವು PIN ಮತ್ತು/ಅಥವಾ Debit card ಅನ್ನು ಬಳಸುವಂತಿಲ್ಲ ಅಥವಾ ಬಳಸಲು ಪ್ರಯತ್ನಿಸುವಂತಿಲ್ಲ. ಅಂತಹ ಯಾವುದೇ ಬಳಕೆಯನ್ನು ಮೋಸ ಎಂದು ಪರಿಗಣಿಸಲಾಗುತ್ತದೆ.

5.24.3 ಮುಕ್ತಾಯದೊಂದಿಗೆ ಬರುವ ಹೊಣೆಗಾರಿಕೆಗಳು

ಯಾವುದೇ ಕಾರಣಕ್ಕಾಗಿ ನಿಮ್ಮ ಖಾತೆಯನ್ನು ಮುಕ್ತಾಯಗೊಳಿಸಿದ ನಂತರ ನಿಮ್ಮ Debit Card ಬಳಸುವುದನ್ನು ನೀವು ಮುಂದುವರಿಸುವುದಿಲ್ಲ. ಈ ಒಪ್ಪಂದದ ಅಡಿಯಲ್ಲಿ ನಿಮ್ಮ ಹೊಣೆಗಾರಿಕೆಗಳು ಮುಂದುವರಿಯುತ್ತವೆ ಮತ್ತು ನಿಮ್ಮ ಖಾತೆಯನ್ನು ಮುಕ್ತಾಯಗೊಳಿಸುವ ಮೊದಲು ಅಥವಾ ನಂತರ ಕೈಗೊಳ್ಳುವ ಯಾವುದೇ ವಹಿವಾಟುಗಳಿಗಾಗಿ ನೀವು ನಮ್ಮೊಂದಿಗೆ ನಿರ್ವಹಿಸುವ ಖಾತೆಯನ್ನು ಡೆಬಿಟ್ ಮಾಡಲು ನಾವು ಅರ್ಹರಾಗಿದ್ದೇವೆ. ಮೇಲಿನ ವಿಭಾಗ 5.25.2 ರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿಧಿಸಬಹುದಾದ ವಹಿವಾಟುಗಳು ಮತ್ತು ಯಾವುದೇ ಓವರ್ ಡ್ರಾಫ್ಟ್ ಶುಲ್ಕಗಳನ್ನು ಪೂರ್ಣವಾಗಿ ಪಾವತಿಸುವವರೆಗೆ, ನೀವು (ಮತ್ತು ಯಾರ ಹೆಸರಿನಲ್ಲಿ ಖಾತೆಯನ್ನು ನಿರ್ವಹಿಸಲಾಗಿದೆಯೋ ಅಂತಹ ಯಾವುದೇ ವ್ಯಕ್ತಿ ಇದ್ದರೆ) ನಮಗೆ ಹೊಣೆಗಾರರಾಗಿರುತ್ತೀರಿ.

5.24.4 Debit Card ಸದಸ್ಯರ ಹೊಣೆಗಾರಿಕೆ

ನಿಮ್ಮ ಖಾತೆಯಲ್ಲಿರುವ ನಮಗೆ ನೀಡಬೇಕಾದ ಬಾಕಿಗೆ ನೀವು ಜವಾಬ್ದಾರರಾಗಿರುತ್ತೀರಿ ಮತ್ತು ಈ ಒಪ್ಪಂದ ಅಥವಾ ನಿಮ್ಮ(ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳೊಂದಿಗೆ ಒಬ್ಬರೇ ಅಥವಾ ಜಂಟಿಯಾಗಿ) ಮತ್ತು ನಮ್ಮ ನಡುವಿನ ಬೇರಾವುದೇ ಒಪ್ಪಂದದ ಪ್ರಕಾರ ಎಲ್ಲಾ ಶುಲ್ಕಗಳನ್ನೂ ಒಳಗೊಂಡಂತೆ ಬೇಡಿಕೆಯ ಮೇರೆಗೆ ನಮಗೆ ಪಾವತಿಸುವ ಹೊಣೆಗರಿಕೆ ಹೊಂದಿರುತ್ತೀರಿ.

## 5.25 ಹೊರಗಿಡುವಿಕೆಗಳು ಮತ್ತು ವಿನಾಯಿತಿಗಳು

5.25.1 ಡೆಬಿಟ್ ಕಾರ್ಡ್ ಅನ್ನು ಸ್ವೀಕರಿಸದಿರುವುದು

ಈ ಕೆಳಗಿನವುಗಳಿಗೆ ನಾವು ಯಾವುದೇ ರೀತಿಯಲ್ಲಿ ಹೊಣೆಗಾರರಾಗಿರುವುದಿಲ್ಲ:

a. ನಿಮ್ಮ Debit Card(ಗಳು) ಅಥವಾ PIN(ಗಳು) ಅನ್ನು ವ್ಯಾಪಾರಿಗಳು ಅಥವಾ Debit Card ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಲು ಬಳಸಲಾಗುವ ಯಾವುದೇ ಟರ್ಮಿನಲ್ ತಿರಸ್ಕರಿಸಿದರೆ ಅಥವಾ ಯಾವುದೇ ಕಾರಣಕ್ಕಾಗಿ ನಾವು ಯಾವುದೇ Debit Card ವಹಿವಾಟನ್ನು ಅಧಿಕೃತಗೊಳಿಸಲು ನಿರಾಕರಿಸಿದರೆ;
b. Debit Card ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಲು ಬಳಸಲಾಗುವ ಯಾವುದೇ ಟರ್ಮಿನಲ್‌ನಲ್ಲಿ ಅಥವಾ ನಮ್ಮಿಂದ ಇಲ್ಲವೇ ಇತರ ವ್ಯಕ್ತಿಗಳಿಂದ ನಿರ್ವಹಿಸಲ್ಪಡುವ ಇತರ ಯಂತ್ರಗಳು ಅಥವಾ ಅಧಿಕಾರದ ವ್ಯವಸ್ಥೆಯ ಯಾವುದೇ ಅಸಮರ್ಪಕತೆ, ತಪ್ಪು ಅಥವಾ ದೋಷಕ್ಕಾಗಿ;
c. ಈ ಒಪ್ಪಂದದ ಅಡಿಯಲ್ಲಿ ಇರುವ ಅಥವಾ ಇಲ್ಲದ ಯಾವುದೇ ಹೊಣೆಗಾರಿಕೆಗಳನ್ನು ನಿರ್ವಹಿಸುವಲ್ಲಿ ನಮ್ಮ ಕಡೆಯಿಂದ ಯಾವುದೇ ವಿಳಂಬವಾದಲ್ಲಿ ಅಥವಾ ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ, ಅಂತಹ ವಿಳಂಬ ಅಥವಾ ಅಸಾಮರ್ಥ್ಯವು ಯಾವುದೇ ಯಂತ್ರ, ಡೇಟಾ ಪ್ರೊಸೆಸ್ಸಿಂಗ್ ಸಿಸ್ಟಮ್, ಟ್ರಾನ್ಸ್‌ಮಿಷನ್ ಲಿಂಕ್‌ಗೆ ಅಥವಾ ಯಾವುದೇ ಯಾವುದೇ ಎಲೆಕ್ಟ್ರಾನಿಕ್, ಯಾಂತ್ರಿಕ ವ್ಯವಸ್ಥೆ, ಡೇಟಾ ಪ್ರೊಸೆಸ್ಸಿಂಗ್ ಸಿಸ್ಟಮ್ ಅಥವಾ

ದೂರಸಂಪರ್ಕ ದೋಷ ಅಥವಾ ವೈಫಲ್ಯ, ವಿದ್ಯುತ್ ಮತ್ತು ವಿದ್ಯುತ್ ವೈಫಲ್ಯ, ನೈಸರ್ಗಿಕ ಪ್ರಕ್ರಿಯೆ, ನಾಗರಿಕ ಅಡಚಣೆ, ಯುದ್ಧ ಅಥವಾ ಯುದ್ಧೋಚಿತ ಹಗೆತನ, ನಾಗರಿಕ ಗಲಭೆಗಳು, ಗಲಭೆಗಳು, ಅಡೆತಡೆಗಳು, ನಿರ್ಬಂಧಗಳು, ವಿಧ್ವಂಸಕತೆ, ಮುಷ್ಕರಗಳು, ಲಾಕೌಟ್‌ಗಳು, ಬೆಂಕಿ, ಪ್ರವಾಹ, ವಸ್ತು ಅಥವಾ ಕಾರ್ಮಿಕರ ಕೊರತೆ, ಉಪ-ಗುತ್ತಿಗೆದಾರರಿಂದ ವಿತರಣೆಯಲ್ಲಿ ವಿಳಂಬ ಅಥವಾ ನಮ್ಮ ಅಥವಾ ನಮ್ಮ ಯಾವುದೇ ಏಜೆಂಟ್ ಅಥವಾ ಗುತ್ತಿಗೆದಾರರ ನಿಯಂತ್ರಣದ ಹೊರಗಿನ ಯಾವುದೇ ಘಟನೆ ಅಥವಾ ಯಾವುದೇ ವಂಚನೆ ಅಥವಾ ನಕಲಿನಿಂದ ಉಂಟಾಗುವ ಅನಧಿಕೃತ ಮತ್ತು/ಅಥವಾ ಕಾನೂನುಬಾಹಿರ ಪ್ರವೇಶದಿಂದ ಉದ್ಭವಿಸಿದರೆ ಅಥವಾ;

d. ನಿಮ್ಮ Debit Card ನಲ್ಲಿ ಅಥವಾ ನಿಮ್ಮ Debit Cardನಲ್ಲಿರುವ ಯಾವುದೇ ಮೈಕ್ರೋಚಿಪ್ ಅಥವಾ ಸರ್ಕ್ಯೂಟ್ ಅಥವಾ ಸಾಧನದಲ್ಲಿ ಸಂಗ್ರಹವಾಗಿರುವ ಯಾವುದೇ ಡೇಟಾ ಅಥವಾ ಮಾಹಿತಿಯನ್ನು ಹಿಂಪಡೆಯಲು ಯಾವುದೇ ಹಾನಿ ಅಥವಾ ನಷ್ಟ ಅಥವಾ ಅಸಮರ್ಥತೆಗಾಗಿ;
e. ನೀವು ನೀಡಿದ ಅಥವಾ ನೀಡಬೇಕೆಂದು ಸೂಚಿಸಲಾದ ಯಾವುದೇ ಸೂಚನೆಯ ನಮ್ಮ ಅನುಸರಣೆಗಾಗಿ, ಹಾಗೆ ಹೇಳಿರದ ಹೊರತಾಗಿಯೂ ಅಂತಹ ಸೂಚನೆಯಲ್ಲಿ ಒಳಗೊಂಡಿರುವ ಮಾಹಿತಿಯ ಸಮಗ್ರತೆಯು ಪ್ರಸರಣದ ಸಮಯದಲ್ಲಿ ರಾಜಿಯಾಗಿರುವುದಕ್ಕೆ ಅಥವಾ ದುರ್ಬಲಗೊಂಡಿರುವುದಕ್ಕೆ, ಅಂತಹ ಸೂಚನೆಯನ್ನು ಸ್ವೀಕರಿಸುವ ಸೂಕ್ತ ವ್ಯಕ್ತಿಗೆ ಅಂತಹ ರಾಜಿ ಅಥವಾ ದುರ್ಬಲತೆ ಸ್ಪಷ್ಟವಾಗಿ ಕಾಣಿಸದ ಹೊರತು;
f. ನಮ್ಮ ಮತ್ತು/ಅಥವಾ ಯಾವುದೇ ಭಾಗೀದಾರರ ಯಾವುದೇ ಕ್ರಿಯೆಯ ಪರಿಣಾಮವಾಗಿ ನೀವು ಯಾವುದೇ ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯಿಂದ ವಂಚಿತರಾಗಿದ್ದರೆ; ಅಥವಾ
g. ಸಿಸ್ಟಮ್ ನಿರ್ವಹಣೆ ಅಥವಾ ಸ್ಥಗಿತ/ಯಾವುದೇ ನೆಟ್‌ವರ್ಕ್ ಲಭ್ಯವಿಲ್ಲದ ಕಾರಣ ಯಾವುದೇ ಎಲೆಕ್ಟ್ರಾನಿಕ್ ಸೇವೆ ಲಭ್ಯವಿಲ್ಲದಿದ್ದರೆ; ಅಥವಾ
h. ಯಾವುದೇ ಸಾಧನ ಅಥವಾ ಸಾಫ್ಟ್‌ವೇರ್ ಪೂರೈಕೆದಾರರು, ಯಾವುದೇ ಸೇವಾ ಪೂರೈಕೆದಾರರು, ಯಾವುದೇ ನೆಟ್‌ವರ್ಕ್ ಪೂರೈಕೆದಾರರು (ದೂರಸಂಪರ್ಕ ಪೂರೈಕೆದಾರರು, ಇಂಟರ್ನೆಟ್ ಬ್ರೌಸರ್ ಪೂರೈಕೆದಾರರು ಮತ್ತು ಇಂಟರ್ನೆಟ್ ಪ್ರವೇಶ ಪೂರೈಕೆದಾರರು ಸೇರಿದಂತೆ ಆದರೆ ಇವರಿಗೆ ಸೀಮಿತವಾಗಿಲ್ಲದಂತೆ), ಯಾವುದೇ ಭಾಗೀದಾರರು ಅಥವಾ ಮೇಲೆ ತಿಳಿಸಿದವರ ಯಾವುದೇ ಏಜೆಂಟ್ ಅಥವಾ ಉಪಗುತ್ತಿಗೆದಾರರ ಸಲುವಾಗಿ

ಯಾವುದೇ ಸಂದರ್ಭದಲ್ಲಿ, ನಮ್ಮ ಘೋರ ನಿರ್ಲಕ್ಷ್ಯ ಅಥವಾ ಉದ್ದೇಶಪೂರ್ವಕ ವೈಫಲ್ಯವನ್ನು ಹೊರತುಪಡಿಸಿ ನಾವು ಮಾಡಿರುವ ಅಥವಾ ಮಾಡಲು ಬಿಟ್ಟಿರುವ ಯಾವುದೇ ಕಾರ್ಯಕ್ಕೆ ನಾವು ಜವಾಬ್ದಾರರಾಗಿರುವುದಿಲ್ಲ.

5.25.2 ಸರಕು ಮತ್ತು ಸೇವೆಗಳೊಂದಿಗಿನ ಸಮಸ್ಯೆಗಳು

ನಿಮ್ಮ Debit Card ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯ ಮೂಲಕ ನೀವು ಪಡೆಯುವ ಸರಕುಗಳು ಮತ್ತು ಸೇವೆಗಳೊಂದಿಗೆ ನೀವು ಯಾವುದೇ ಸಮಸ್ಯೆಗಳನ್ನು ಎದುರಿಸಿದರೆ ಅಥವಾ ನಾವು ನಿಮಗೆ ಒದಗಿಸಿದ ಯಾವುದೇ ವ್ಯಾಪಾರಿಗಳು ನೀಡುವ ಯಾವುದೇ ಪ್ರಯೋಜನಗಳು, ರಿಯಾಯಿತಿಗಳು ಅಥವಾ ಕಾರ್ಯಕ್ರಮಗಳಿಗೆ ನಾವು ಜವಾಬ್ದಾರರಾಗಿರುವುದಿಲ್ಲ. ಅಂತಹ ಯಾವುದೇ ಸರಕುಗಳು ಮತ್ತು ಸೇವೆಗಳು ವಿತರಣೆಯಾಗದಿರುವುದು ಅಥವಾ ಅವುಗಳ ಕಾರ್ಯಕ್ಷಮತೆ ಅಥವಾ ದೋಷಗಳ ಹೊರತಾಗಿಯೂ, ಆ Debit Card ವಹಿವಾಟಿಗೆ ಅನುಗುಣವಾಗಿ ನೀವು ನಮ್ಮೊಂದಿಗೆ ನಿರ್ವಹಿಸುತ್ತಿರುವ ನಿಮ್ಮ ಖಾತೆಯನ್ನು ಪೂರ್ಣ ಮೊತ್ತಕ್ಕೆ ಡೆಬಿಟ್ ಮಾಡಲು ನಾವು

ಅರ್ಹರಾಗಿದ್ದೇವೆ. ಯಾವುದೇ ವಿವಾದವಿದ್ದಲ್ಲಿ ನೀವು ಅದನ್ನು ಸರಕು ಮತ್ತು ಸೇವಾ ಪೂರೈಕೆದಾರರೊಂದಿಗೆ ನೇರವಾಗಿ ಪರಿಹರಿಸಿಕೊಳ್ಳುತ್ತೀರಿ.

5.25.3 ತತ್ಪರಿಣಾಮಕಾರೀ ನಷ್ಟಕ್ಕೆ ಯಾವುದೇ ಹೊಣೆಗಾರಿಕೆ ಇಲ್ಲ

ಎಲೆಕ್ಟ್ರಾನಿಕ್ ಸೇವೆಗಳ ನಿಬಂಧನೆ ಮತ್ತು/ಅಥವಾ ಬಳಕೆಯಿಂದ ಅಥವಾ ನಿಮ್ಮ Debit Card ಬಳಕೆಯಿಂದ ನೇರವಾಗಿ, ಪರೋಕ್ಷವಾಗಿ, ವಿಶೇಷವಾಗಿ ಅಥವಾ ತತ್ಪರಿಣಾಮವಾಗಿ, ಆರ್ಥಿಕ ಅಥವಾ ಇತರ ಹಾನಿಗಳು ಯಾವುದೇ ರೀತಿಯಲ್ಲಿ ಉಂಟಾಗುವ ಹಾನಿಗಳಿಗೆ ನಾವು ಅಥವಾ ಯಾವುದೇ ಭಾಗೀದಾರರು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

5.25.4 Debit Card- ಪ್ರಸ್ತುತವಿಲ್ಲದ ವಹಿವಾಟುಗಳಿಗೆ ಯಾವುದೇ ಹೊಣೆಗಾರಿಕೆ ಇಲ್ಲ

ಯಾವುದೇ ಕಾರಣಕ್ಕಾಗಿ ನಿಮ್ಮ Debit Card ಬಳಕೆಯ ಮೂಲಕ ಪರಿಣಾಮ ಬೀರುವ ಎಲ್ಲಾ ಕಾರ್ಡ್-ಇಲ್ಲದ ವಹಿವಾಟುಗಳಿಗೆ ನೀವು ಜವಾಬ್ದಾರರಾಗಿರುತ್ತೀರಿ, ಅಂತಹ ಕಾರ್ಡ್-ಇಲ್ಲದ ವಹಿವಾಟುಗಳನ್ನು ನಾವು ನಮ್ಮ ವಿವೇಚನೆಯಿಂದ ಮತ್ತು ಪೂರ್ವ ಸೂಚನೆ ನೀಡದೆಯೇ ಅನುಮೋದಿಸಬಹುದು ಅಥವಾ ಅಧಿಕೃತಗೊಳಿಸಬಹುದು. ಕಾರ್ಡ್-ಇಲ್ಲದ ವಹಿವಾಟುಗಳಿಗೆ ಸಂಬಂಧಿಸಿದಂತೆ ಮಾಡಿದ ಯಾವುದೇ ಅಧಿಕೃತಗೊಳಿಸುವಿಕೆಗೆ ನಾವು ನಿಮಗೆ ಯಾವುದೇ ರೀತಿಯಲ್ಲಿ ಹೊಣೆಗಾರರಾಗಿರುವುದಿಲ್ಲ.

5.25.5 ದಾಖಲೆಗಳು ಮತ್ತು ಪ್ರಮಾಣಪತ್ರಗಳ ನಿರ್ಣಾಯಕತೆ

ನಿಮ್ಮ ಸಹಿಯೊಂದಿಗೆ ಅಥವಾ ನಿಮ್ಮ PIN ಮೂಲಕ ಅಧಿಕೃತವಾದ Debit Card ವಹಿವಾಟುಗಳಿಗೆ ಸಂಬಂಧಿಸಿದ ನಮ್ಮ ಯಾವುದೇ ದಾಖಲೆಗಳು ಅವುಗಳ ನಿಖರತೆ ಮತ್ತು ದೃಢೀಕರಣದ ನಿರ್ಣಾಯಕ ಪುರಾವೆಗಳಾಗಿರುತ್ತವೆ ಮತ್ತು ಎಲ್ಲಾ ಉದ್ದೇಶಗಳಿಗಾಗಿ ನಿಮ್ಮನ್ನು ಬಾಧ್ಯರನ್ನಾಗಿಸುತ್ತವೆ. ನೀವೂ ಸಹ ಯಾವುದೇ digiSavings/ಗಳ ಸ್ಟೇಟ್‌ಮೆಂಟ್‌ನಲ್ಲಿ ಯಾವುದೇ ದೋಷಗಳು ಅಥವಾ ತಪ್ಪುಗಳು ಕಂಡುಬಂದಲ್ಲಿ ನಮಗೆ ತಿಳಿಸುತ್ತೀರಿ. ಎಲೆಕ್ಟ್ರಾನಿಕ್ ಸ್ಟೇಟ್ ಮೆಂಟ್ ಡೌನ್‌ಲೋಡ್‌ಗೆ ಲಭ್ಯವಾಗುವಂತೆ ಮಾಡಿದ 14 (ಹದಿನಾಲ್ಕು) ದಿನಗಳೊಳಗೆ ನೀವು ತಕರಾರು ಎತ್ತದ ಹೊರತು, ಅದೇ ಸರಿ ಎಂದು ಪರಿಗಣಿಸಲಾಗುತ್ತದೆ.

5.25.6 ಎಲೆಕ್ಟ್ರಾನಿಕ್ ಸೇವೆಗಳು

ATM ಮೂಲಕ Visa International Debit Card ವಹಿವಾಟು ಸೇರಿದಂತೆ ಅಧಿಕೃತ ವಹಿವಾಟುಗಳನ್ನು ನಡೆಸಲು ಮತ್ತು/ಅಥವಾ Visa ವರ್ಚುವಲ್ International Debit Card ಬಳಸಿ ಕಾರ್ಡ್ ಇಲ್ಲದ ವಹಿವಾಟುಗಳನ್ನು ನಡೆಸಲು ಮತ್ತು/ಅಥವಾ ಇತರ ಎಲೆಕ್ಟ್ರಾನಿಕ್ ಸೇವೆಗಳನ್ನು ಬಳಸಿಕೊಳ್ಳುವುದಕ್ಕಾಗಿ ನಿಮ್ಮ Debit Card ಮತ್ತು/ಅಥವಾ PIN ಬಳಸಬಹುದು. ಬೇರೆ ಯಾವುದೇ ವ್ಯಕ್ತಿಯು ಯಾವುದೇ ವಹಿವಾಟುಗಳಿಗಾಗಿ ನಿಮ್ಮ Debit card ಮತ್ತು/ಅಥವಾ PIN ಬಳಸುವಂತಿಲ್ಲ. PIN ಬಳಸಿ ನೀವು ಬಳಸಿಕೊಳ್ಳಬಹುದಾದ ಸೌಲಭ್ಯಗಳನ್ನು ನಾವು ಸ್ವಂತ ವಿವೇಚನೆಯ ಮೇರೆಗೆ ನಿರ್ಧರಿಸಬಹುದು. ನಾವು ನಿರ್ಧರಿಸಿದರೆ, ನಮ್ಮ ವಿವೇಚನೆಯಿಂದ ನಾವು ಅಂತಹ ಯಾವುದೇ ಸೌಲಭ್ಯಗಳನ್ನು ಮಾರ್ಪಡಿಸಬಹುದು.

ಮೂರನೇ ವ್ಯಕ್ತಿಗೆ PIN ತಿಳಿಯುವ ಸಾಧ್ಯತೆಯನ್ನು ತಪ್ಪಿಸಲು ನೀವು ಯಾವುದೇ ರೂಪದಲ್ಲಿ PIN ಅನ್ನು ದಾಖಲಿಸುವುದಿಲ್ಲ. PIN ಮೂಲಕ ದೃಢೀಕರಿಸಿದ ವಹಿವಾಟುಗಳು ಮತ್ತು ಸೂಚನೆಗಳನ್ನು ಕೈಗೊಳ್ಳಲು ನೀವು DBS ಬ್ಯಾಂಕ್‌ಗೆ ಸ್ಪಷ್ಟ ಅಧಿಕಾರ ನೀಡುತ್ತೀರಿ ಮತ್ತು ಅದನ್ನು ಯಾವುದೇ ಕಾರಣಕ್ಕೆ ಹಿಂತೆಗೆದುಕೊಳ್ಳುವುದಿಲ್ಲ. PIN ಪರಿಶೀಲನೆಯನ್ನು

ಹೊರತುಪಡಿಸಿ ನಿಮ್ಮಿಂದ ಕಳುಹಿಸಲಾದ ಅಥವಾ ಕಳುಹಿಸಲಾಗಿದೆ ಎಂದು ಹೇಳಲಾದ ವಹಿವಾಟು ಸೂಚನೆಯ ದೃಢೀಕರಣವನ್ನು ಪರಿಶೀಲಿಸಲು DBS ಬ್ಯಾಂಕ್ ಯಾವುದೇ ಬಾಧ್ಯತೆಯನ್ನು ಹೊಂದಿರುವುದಿಲ್ಲ.

5.25.7 Debit card ಬಳಕೆ

ಯಾವುದೇ ಕಾನೂನುಬಾಹಿರ ಖರೀದಿಗಳಿಗೆ ಅಂದರೆ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಕಾನೂನು ಮತ್ತು RBI ಅನುಮತಿಸದ ವಸ್ತುಗಳು/ಸೇವೆಗಳ ಖರೀದಿಗಳ ಪಾವತಿಗೆ Debit card ಅನ್ನು ಬಳಸುವುದಿಲ್ಲ ಎಂದು ನೀವು ವಾಗ್ದಾನ ನೀಡುತ್ತೀರಿ.

ಯಾವುದೇ ಇತರ ವ್ಯಕ್ತಿಯು ನಿಮ್ಮ PIN ಪಡೆದುಕೊಂಡಲ್ಲಿ ಅದಕ್ಕೆ ನೀವು ನಮ್ಮನ್ನು ಹೊಣೆಗಾರರನ್ನಾಗಿ ಮಾಡುವುದಿಲ್ಲ. ನೀವು ರಚಿಸಿದ ಯಾವುದೇ PIN ಅನ್ನು ನೀವು ರಕ್ಷಿಸುತ್ತೀರಿ ಮತ್ತು ನಮ್ಮ ಪ್ರತಿಯೊಂದು ಕಾರ್ಯವಿಧಾನಗಳು, ಭದ್ರತೆ ಮತ್ತು ಇತರ ಅವಶ್ಯಕತೆಗಳು ಮತ್ತು ಸೂಚನೆಗಳನ್ನು ಅನುಸರಿಸುತ್ತೀರಿ ಮತ್ತು/ಅಥವಾ ಅವುಗಳ ಬಳಕೆಯ ಬಗ್ಗೆ ಸಂಬಂಧಿತ ಭಾಗವಹಿಸುವವರು, ಅಥವಾ, ನೀವು ಯಾವುದೇ PIN ಗೆ ಸಂಬಂಧಿಸಿದಂತೆ ಈ ಷರತ್ತಿನ ನಿಬಂಧನೆಗಳನ್ನು ಅನುಸರಿಸುತ್ತೀರಿ. ಈ ಕೆಳಗಿನ ಸಂದರ್ಭಗಳನ್ನು ನೀವು ತಕ್ಷಣ ನಮಗೆ ತಿಳಿಸುವಿರಿ:

a. ಯಾವುದೇ DBS PIN ಅನ್ನು ಯಾವುದೇ ವ್ಯಕ್ತಿಗೆ ಬಹಿರಂಗಪಡಿಸಿದಾಗ.
b. ಯಾವುದೇ Debit Card ಅನ್ನು ಯಾವುದೇ ಇತರೆ ವ್ಯಕ್ತಿಯು ಬಳಸಿದಾಗ.
c. ಈ ಒಪ್ಪಂದದ ನಿಯಮಗಳ ಅಡಿಯಲ್ಲಿ, ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯನ್ನು ಅಮಾನತುಗೊಳಿಸಲು ಅಥವಾ ರದ್ದುಗೊಳಿಸಲು ನಮಗೆ ಅನುಮತಿಸುವ ಯಾವುದೇ ಇತರ ಘಟನೆಗಳು ಸಂಭವಿಸಿದಾಗ. ನಿಮ್ಮಿಂದ ಅಂತಹ ಯಾವುದೇ ಸೂಚನೆಯನ್ನು ಸ್ವೀಕರಿಸಿದ ನಂತರ, ನಾವು ಯಾವುದೇ ಸಮಯದಲ್ಲಿ ನಿಮ್ಮ ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯನ್ನು ಅಮಾನತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

ಈ ಒಪ್ಪಂದದ ನಿಯಮಗಳ ಅಡಿಯಲ್ಲಿ, ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯನ್ನು ಅಮಾನತುಗೊಳಿಸಲು ಅಥವಾ ರದ್ದುಗೊಳಿಸಲು ನಮಗೆ ಅನುಮತಿಸುವ ಯಾವುದೇ ಘಟನೆ ಸಂಭವಿಸಿದಲ್ಲಿ ನೀವು ತಕ್ಷಣ ನಮಗೆ (digibank ಅಪ್ಲಿಕೇಶನ್ ಅಥವಾ ಲಭ್ಯವಿರುವ ಯಾವುದೇ ಮಾಧ್ಯಮದ ಮೂಲಕ) ತಿಳಿಸುತ್ತೀರಿ. ನಿಮ್ಮಿಂದ ಅಂತಹ ಯಾವುದೇ ಸೂಚನೆಯನ್ನು ಸ್ವೀಕರಿಸಿದ ನಂತರ, ನಾವು ಯಾವುದೇ ಸಮಯದಲ್ಲಿ ನಿಮ್ಮ ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯನ್ನು ಅಮಾನತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

## 5.26 ತಿದ್ದುಪಡಿಗಳು

5.26.1 ನಿಯಮ ಮತ್ತು ಷರತ್ತುಗಳ ಬದಲಾವಣೆಗಳು

ಬದಲಾವಣೆಗಳ ಕುರಿತು ನಿಮಗೆ ತಿಳಿಸುವ ಮೂಲಕ ನಾವು ಈ ಒಪ್ಪಂದದ ವಿಷಯಗಳನ್ನು ಬದಲಾಯಿಸಬಹುದು ಮತ್ತು/ಅಥವಾ ಯಾವುದೇ ಸಮಯದಲ್ಲಿ ಹೊಸ ನಿಯಮಗಳು ಮತ್ತು ಷರತ್ತುಗಳನ್ನು ರಚಿಸಬಹುದು. ಬದಲಾವಣೆಗಳು ನಿಮಗೆ ಕಳಿಸಿದ ಸೂಚನೆಯಲ್ಲಿ ತಿಳಿಸಿದ ದಿನಾಂಕದಿಂದ ಅನ್ವಯವಾಗುತ್ತವೆ. ನಿರ್ದಿಷ್ಟಪಡಿಸಿದ ದಿನಾಂಕದ ನಂತರ ನೀವು ಡೆಬಿಟ್ ಕಾರ್ಡ್ ಮತ್ತು/ಅಥವಾ ಎಲೆಕ್ಟ್ರಾನಿಕ್ ಸೇವೆಗಳನ್ನು ಇಟ್ಟುಕೊಳ್ಳುವುದನ್ನು ಅಥವಾ ಬಳಸುವುದನ್ನು ಮುಂದುವರಿಸಿದರೆ, ನೀವು ಯಾವುದೇ ಹಿಂಜರಿಕೆ ಇಲ್ಲದೆ ಬದಲಾವಣೆಗಳನ್ನು ಸ್ವೀಕರಿಸಿದ್ದೀರಿ ಎಂದು ಪರಿಗಣಿಸಲಾಗುತ್ತದೆ. ನೀವು ಬದಲಾವಣೆಗಳನ್ನು ಸ್ವೀಕರಿಸದಿದ್ದರೆ, Debit

card ಮತ್ತು/ಅಥವಾ ಎಲೆಕ್ಟ್ರಾನಿಕ್ ಸೇವೆಗಳನ್ನು ಬಳಸುವುದನ್ನು ನಿಲ್ಲಿಸಬೇಕು ಮತ್ತು ಈ ಒಪ್ಪಂದವನ್ನು ಕೊನೆಗೊಳಿಸಬೇಕು.

5.26.2 ಬದಲಾವಣೆಗಳ ಪ್ರಕಟಣೆ

ನಿಯಮಗಳು ಮತ್ತು ಷರತ್ತುಗಳ ಯಾವುದೇ ಬದಲಾವಣೆಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕ ಅಥವಾ ನಮ್ಮ ಶಾಖೆಗಳಲ್ಲಿ ಪ್ರದರ್ಶಿಸುವ ಮೂಲಕ ನಿಮಗೆ ಸೂಚಿಸಬಹುದು. ಆದರೆ ನಾವು ಇತರ ಸಂವಹನ ವಿಧಾನಗಳ ಮೂಲಕವೂ ನಿಮಗೆ ತಿಳಿಸುವ ಆಯ್ಕೆ ಮಾಡಬಹುದು.

## 5.27 ಮಾಹಿತಿಯನ್ನು ಬಹಿರಂಗಪಡಿಸುವಿಕೆ

5.27.1 ಯಾವ ಪಾರ್ಟಿಗಳಿಗೆ ಬಹಿರಂಗಪಡಿಸಬೇಕು

ನಿಮ್ಮ ಖಾತೆ/ಗಳ ಯಾವುದೇ ವಿವರಗಳು ಮತ್ತು/ಅಥವಾ ನಿಮ್ಮ Debit card ಬಳಕೆಯನ್ನು ಕುರಿತ ಮಾಹಿತಿಯನ್ನು ಈ ಕೆಳಗಿನ ಪಾರ್ಟಿಗಳಿಗೆ ಬಹಿರಂಗಪಡಿಸಲು ನೀವು ನಮಗೆ ಅಧಿಕಾರ ನೀಡುತ್ತೀರಿ:

a. ಭಾರತದಲ್ಲಿ ಅಥವಾ ಭಾರತದ ಹೊರಗೆ ಬ್ಯಾಂಕಿಂಗ್ ಸೇವೆಗಳಿಗೆ ಅಥವಾ ಅವುಗಳ ಬಳಕೆಗೆ ಅಥವಾ ನಿಮಗೆ ಲಭ್ಯವಾಗಿಸಿದ ಅಥವಾ ನೀವು ಬಳಸಿಕೊಂಡ ಲಾಯಲ್ಟಿ ಪ್ರಯೋಜನಗಳು, ಎಲೆಕ್ಟ್ರಾನಿಕ್ ಅಥವಾ ಅವುಗಳಿಗಷ್ಟೇ ಸೀಮಿತವಾಗಿರದಂತೆ ಇತರ ಸೇವೆಗಳನ್ನು ಒದಗಿಸುವಲ್ಲಿ, ಈ ಸೇವೆಗಳ ಕಾರ್ಯಾಚರಣೆಯ ಉದ್ದೇಶಕ್ಕಾಗಿ ಸಂಬಂಧಿಸಿದಂತೆ ವ್ಯತ್ಯಾಸಗಳು, ತಪ್ಪುಗಳು ಅಥವಾ ಹಕ್ಕುಗಳಿಗಷ್ಟೇ ಸೀಮಿತವಾಗಿರದಂತೆ ವಿಚಾರಣೆಗೆ ಒಳಪಡಿಸುವುದರಲ್ಲಿ ಭಾಗವಹಿಸುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ;
b. ಬ್ಯಾಂಕ್‌ಗಳು, ಕ್ರೆಡಿಟ್ ಅಥವಾ ಚಾರ್ಜ್ ಕಾರ್ಡ್ ಕಂಪನಿಗಳು ಅಥವಾ ಕ್ರೆಡಿಟ್ ಅಥವಾ ಚಾರ್ಜ್ ಕಾರ್ಡ್ ವಿಚಾರಣೆಗಳಲ್ಲಿನ ವ್ಯಾಪಾರಿಗಳಿಗೆ; ನಿಮ್ಮ ಹೆಸರು ಮತ್ತು/ಅಥವಾ ಇತರ ವಿವರಗಳು ಕಾಣಿಸಿಕೊಳ್ಳುವ ಪರ್ಸನಲೈಸ್ಡ್ ಚೆಕ್‌ಗಳು, digiSavings ಸ್ಟೇಟ್‌ಮೆಂಟ್‌ಗಳು, Debit card, ಲೇಬಲ್‌ಗಳು, ಮೇಲರ್‌ಗಳು ಅಥವಾ ಇನ್ನಾವುದೇ ಡಾಕ್ಯುಮೆಂಟ್‌ಗಳು ಅಥವಾ ವಸ್ತುಗಳು ಅಥವಾ ಯಾವುದೇ ಡೇಟಾ ಅಥವಾ ಕಡತಗಳು ಅಥವಾ ಯಾವುದೇ ದಾಖಲೆಗಳನ್ನು ತಯಾರಿಸುವ, ಮುದ್ರಿಸುವ, ಇಮೇಲ್ ಕಳಿಸುವ, ಸಂಗ್ರಹಿಸುವ, ಮೈಕ್ರೋಫಿಲ್ಮಿಂಗ್ ಮಾಡುವ ಮತ್ತು/ಅಥವಾ ತುಂಬುವ ಉದ್ದೇಶಕ್ಕಾಗಿ ನಾವು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿದ ಯಾವುದೇ ಏಜೆಂಟರಿಗೆ;
c. ನಮ್ಮ ಪರವಾಗಿ ಸಮೀಕ್ಷೆ(ಗಳನ್ನು) ನಡೆಸುವ ಅಥವಾ ಸಿಸ್ಟಮ್ ಅಪ್ಲಿಕೇಶನ್‌ಗಳನ್ನು ವಿಶ್ಲೇಷಿಸುವ ಅಥವಾ ಅಭಿವೃದ್ಧಿಪಡಿಸುವ ಯಾವುದೇ ಮಾಹಿತಿ ಸಂಗ್ರಹಿಸುವ ಅಥವಾ ಸಂಸ್ಕರಣೆ ಮಾಡುವ ಸಂಸ್ಥೆ ಅಥವಾ ಇಲಾಖೆ ಅಥವಾ ಕನ್ಸಲ್ಟೆಂಟ್‌ಗಳಿಗೆ;
d. ನಮ್ಮ ಸ್ವಂತ ಅಥವಾ ನಮ್ಮೊಂದಿಗೆ ಭಾಗಿಯಾದ ಯಾವುದೇ ಉತ್ಪನ್ನಗಳು ಅಥವಾ ಸೇವೆಗಳನ್ನು ಮಾರ್ಕೆಟಿಂಗ್ ಅಥವಾ ಪ್ರಚಾರ ಮಾಡುವ ಉದ್ದೇಶಕ್ಕಾಗಿ ಅಂತಹ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ;
e. Visa International, MasterCard International ಅಥವಾ American Express International ಗೆ;
f. ಅಪಾಯ ನಿರ್ವಹಣೆ ಉದ್ದೇಶಗಳಿಗಾಗಿ, ನಿಮಗಾಗಿ DBS Group ನಾದ್ಯಂತ ಕ್ರೆಡಿಟ್ ಮಾನ್ಯತೆಗಳನ್ನು ಮೇಲ್ವಿಚಾರಣೆ ಮಾಡಲು ಹಾಗೂ ಕ್ರಾಸ್ ಸೆಲ್ಲಿಂಗ್ ಉದ್ದೇಶಗಳಿಗಾಗಿ

ನಮ್ಮ ಯಾವುದೇ ಸಂಬಂಧಿತ ನಿಗಮಗಳಿಗೆ. " DBS Group" ಎಂದರೆ ನಮ್ಮ ಯಾವುದೇ ಅಂಗಸಂಸ್ಥೆಗಳು, ನಮ್ಮ ಹೋಲ್ಡಿಂಗ್ ಕಂಪನಿ ಮತ್ತು ನಮ್ಮ ಹೋಲ್ಡಿಂಗ್ ಕಂಪನಿಯ ಯಾವುದೇ ಅಂಗಸಂಸ್ಥೆಗಳಿಗೆ;

g. ನಮ್ಮ ಯಾವುದೇ ವಿದೇಶೀ ಶಾಖೆಗಳು ನೆಲೆಗೊಂಡಿರುವ ನ್ಯಾಯವ್ಯಾಪ್ತಿಗೆ ಒಳಪಡುವ ಯಾವುದೇ ಸರ್ಕಾರಿ ಸಂಸ್ಥೆ ಅಥವಾ ಪ್ರಾಧಿಕಾರ ಅಥವಾ ನ್ಯಾಯಾಲಯಗಳಿಗೆ; ಅಥವಾ

h. ನೀವು ನಮಗೆ ಪಾವತಿಸಬೇಕಾದ ಯಾವುದೇ ಮೊತ್ತಗಳನ್ನು ನಮ್ಮ ಪರವಾಗಿ ಸಂಗ್ರಹಿಸುವ ಅಥವಾ ವಸೂಲಾತಿಯ ಉದ್ದೇಶಕ್ಕಾಗಿ ಅಥವಾ ನಿಮಗಾಗಿ ಸುರಕ್ಷಿತವಾಗಿಸುವ ಸಲುವಾಗಿ ಅಥವಾ ನಿಮ್ಮ ಪರವಾಗಿ ಪಾವತಿಸುವ ಉದ್ದೇಶಕ್ಕಾಗಿ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ;

i. ಎಲೆಕ್ಟ್ರಾನಿಕ್ ಸೇವೆಗಳ ಬಳಕೆಗೆ ಸಂಬಂಧಿಸಿದಂತೆ ನಿಮ್ಮ ಉತ್ಪನ್ನಗಳು ಅಥವಾ ಸೇವೆಗಳನ್ನು ಒದಗಿಸುವುದು ಸೇರಿದಂತೆ ಅಂತಹ ಮಾಹಿತಿಯನ್ನು ಪಡೆಯಲು ಕಾನೂನುಬದ್ಧ ವ್ಯಾಪಾರ ಉದ್ದೇಶವನ್ನು ಹೊಂದಿರುವ ಯಾವುದೇ ಭಾಗೀದಾರರು ಅಥವಾ ಮೂರನೇ ವ್ಯಕ್ತಿಗೆ; ನೀವು ಎಂದು ಹೇಳಿಕೊಳ್ಳುವ ಎಲೆಕ್ಟ್ರಾನಿಕ್ ಸೇವೆಗಳನ್ನು ಬಳಸುವ ಯಾವುದೇ ವ್ಯಕ್ತಿಗೆ; ಯಾವುದೇ ವಹಿವಾಟನ್ನು ಪೂರ್ಣಗೊಳಿಸಲು ಅಂತಹ ಬಹಿರಂಗಪಡಿಸುವಿಕೆ ಅಗತ್ಯ ಎನಿಸುವಲ್ಲಿ.

5.27.2 ಅಂಗೀಕಾರ

ಈ ಕೆಳಗಿನವುಗಳನ್ನು ನೀವು ಅಂಗೀಕರಿಸುತ್ತೀರಿ

a. ನಿಮ್ಮ ಕ್ಷೇಮವನ್ನು ಕಾಯ್ದುಕೊಳ್ಳಲು, Debit Card ಬಳಕೆ ಮಾಡುತ್ತಿರುವಾಗ ಯಾವುದೇ ವ್ಯಕ್ತಿಯ ಪ್ರವೇಶ ಮತ್ತು ಉಪಸ್ಥಿತಿಯನ್ನು ನಾವು ನಮ್ಮ ವಿವೇಚನೆಯಿಂದ ಕ್ಯಾಮರಾದಲ್ಲಿ ಅಥವಾ ವಿಡಿಯೋ ಟೇಪ್‌ನಲ್ಲಿ ರೆಕಾರ್ಡ್ ಮಾಡಬಹುದು. ನಾವು ಎಲೆಕ್ಟ್ರಾನಿಕ್ ಅಥವಾ ಡಾಕ್ಯುಮೆಂಟರಿ ರೂಪದಲ್ಲಿ ನಿರ್ವಹಿಸುತ್ತಿರುವ ನೀವು ನೀಡಿದ ಸೂಚನೆಗಳು ಹಾಗೂ ಅಂತಹ ಇತರೆ ಯಾವುದೇ ವಿವರಗಳು (ಮಾಡಲಾದ ಅಥವಾ ಸ್ವೀಕರಿಸಿದ ಪಾವತಿಗಳನ್ನು ಒಳಗೊಂಡಂತೆ ಆದರೆ ಅವುಗಳಿಗೆ ಸೀಮಿತವಾಗಿಲ್ಲದಂತೆ), ಮತ್ತು ಮೇಲೆ ತಿಳಿಸಿದಂತೆ ಮಾಡಲಾದ ಎಲ್ಲಾ ಕ್ಯಾಮೆರಾ/ವಿಡಿಯೋ ರೆಕಾರ್ಡಿಂಗ್‌ಗಳು ನಿಮಗೆ ವಿರುದ್ಧವಾಗಿ, ಅಂತಹ ಸೂಚನೆಗಳು ಮತ್ತು ಇತರ ವಿವರಗಳಿಗೆ ನಿರ್ಣಾಯಕ ಪುರಾವೆ ಎಂದು ಪರಿಗಣಿಸಲಾಗುತ್ತದೆ.

5.27.3 ನಿಯಮ ಮತ್ತು ಷರತ್ತುಗಳ ಅಡಿಯಲ್ಲಿ ಅನುಮತಿಸಲಾದ ಬಹಿರಂಗಪಡಿಸುವಿಕೆಗಳಿಗೆ ಯಾವುದೇ ಹೊಣೆಗಾರಿಕೆ ಇಲ್ಲ

ನೀವು ಅನುಭವಿಸಿದ ಅಥವಾ ನೀವು ನಮಗೆ ಸಮ್ಮತಿಸಿದ ಯಾವುದೇ ಮಾಹಿತಿಯ ಬಹಿರಂಗಪಡಿಸುವಿಕೆಯ ಮತ್ತು/ಅಥವಾ ನಮ್ಮ ಯಾವುದೇ ಅಧಿಕಾರಿಗಳು ಬಹಿರಂಗಪಡಿಸಿದ ಪರಿಣಾಮವಾಗಿ ಆದ ಯಾವುದೇ ನಷ್ಟ ಅಥವಾ ಹಾನಿಗೆ ನಾವು ಅಥವಾ ನಮ್ಮ ಯಾವುದೇ ಅಧಿಕಾರಿಗಳು ಜವಾಬ್ದಾರರಾಗಿರುವುದಿಲ್ಲ.

5.27.4 ಮಾಹಿತಿ ಒದಗಿಸುವುದು

ನಿಮ್ಮ Debit card ಅಥವಾ ಎಲೆಕ್ಟ್ರಾನಿಕ್ ಸೇವೆಗಳ ಬಳಕೆಗೆ ಸಂಬಂಧಿಸಿದಂತೆ ನಾವು ವಿನಂತಿಸಬಹುದಾದ ಯಾವುದೇ ಮಾಹಿತಿ ಅಥವಾ ದಾಖಲಾತಿಯನ್ನು ನೀವು ನಮಗೆ ಒದಗಿಸುತ್ತೀರಿ ಮತ್ತು ಯಾವುದೇ ಸಂಬಂಧಿತ ತನಿಖೆ ಅಥವಾ ದಾವೆಯಲ್ಲಿ ನಮ್ಮೊಂದಿಗೆ ಸಹಕರಿಸುತ್ತೀರಿ. ಮಾಹಿತಿಯನ್ನು ಒದಗಿಸದಿದ್ದರೆ ಅಥವಾ ಒದಗಿಸಿದ ಮಾಹಿತಿಯು ತಪ್ಪಾಗಿದ್ದರೆ,

ನಮ್ಮ ವಿವೇಚನೆಯಿಂದ Debit card ನವೀಕರಣ ಅಥವಾ ಮರುಹಂಚಿಕೆಯನ್ನು ನಾವು ನಿರಾಕರಿಸಬಹುದು ಅಥವಾ Debit card ಅನ್ನು ತಕ್ಷಣವೇ ರದ್ದುಗೊಳಿಸಬಹುದು.

5.27.5 ಒಪ್ಪಿಗೆಯ ಷರತ್ತು

ಯಾವುದೇ ಸಮಯದಲ್ಲಿ ಮತ್ತು ಯಾವುದೇ ಉದ್ದೇಶಕ್ಕಾಗಿ ನನ್ನ/ನಮ್ಮ ವಿವರಗಳು, ಖಾತೆ, ಠೇವಣಿ, ವಹಿವಾಟುಗಳು ಅಥವಾ ಬ್ಯಾಂಕ್‌ನೊಂದಿಗಿನ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಯಾವುದೇ ಸಮರ್ಥ ನ್ಯಾಯವ್ಯಾಪ್ತಿಯ ನ್ಯಾಯಾಲಯ, ಅರೆ ನ್ಯಾಯಾಂಗ ಪ್ರಾಧಿಕಾರ, ಕಾನೂನು ಜಾರಿ ಸಂಸ್ಥೆ, ರಾಜ್ಯ ಸರ್ಕಾರದ ಸಂಬಂಧಿತ ವಿಭಾಗ, RBI, ಆದಾಯ ತೆರಿಗೆ ಅಧಿಕಾರಿಗಳು, ಶಾಸನಬದ್ಧ ಅಧಿಕಾರಿಗಳು, ಹಣಕಾಸು ಸಂಸ್ಥೆಗಳು, ಕ್ರೆಡಿಟ್ ಬ್ಯೂರೋಗಳು/ಏಜೆಂಟ್‌ಗಳು/ಮಾರಾಟಗಾರರು ಅಥವಾ ಬ್ಯಾಂಕ್‌ನ ಅಂಗಸಂಸ್ಥೆ ಅಥವಾ ಸಹವರ್ತಿ ಅಥವಾ ಅಂಗಸಂಸ್ಥೆ ಅಥವಾ ಗುಂಪು ಕಂಪನಿಯಾಗಿರುವ ಯಾವುದೇ ಕಂಪನಿಗೆ ಬಹಿರಂಗಪಡಿಸಲು ನೀವು ಈ ಮೂಲಕ ಬ್ಯಾಂಕ್‌ಗೆ ಸ್ಪಷ್ಟವಾಗಿ ಅಧಿಕಾರ ನೀಡುತ್ತೀರಿ.

## 5.28 ದಾಖಲೆಗಳ ಸಂಪರ್ಕ ಮತ್ತು ಸೇವೆ

5.28.1 ಸಂಪರ್ಕ

ನಾವು Debit card ಸಂಬಂಧಿತ ಸೂಚನೆಗಳು, ಅಕೌಂಟ್ ಸ್ಟೇಟ್‌ಮೆಂಟ್‌ಗಳು ಅಥವಾ ಯಾವುದೇ ಇತರ ಸಂವಹನವನ್ನು ಇನ್ ಆ್ಯಪ್ ಸಂದೇಶಗಳು, ಫ್ಯಾಕ್ಸಿಮೈಲ್ ಸಂವಹನ, ಶಾರ್ಟ್ ಮೆಸೇಜ್ ಸಿಸ್ಟಮ್(SMS), ಎಲೆಕ್ಟ್ರಾನಿಕ್ ಮೆಲ್, ನಮ್ಮ ದಾಖಲೆಗಳಲ್ಲಿ ನಿಮ್ಮ ನೋಂದಾಯಿತ ಪ್ರಸ್ತುತ ವಿಳಾಸಕ್ಕೆ ಸಾಮಾನ್ಯ ಪ್ರಿಪೇಯ್ಡ್ ಪೋಸ್ಟ್ ಅಥವಾ ವೈಯಕ್ತಿಕವಾಗಿ ತಲುಪುವ ಪೋಸ್ಟ್ ಮೂಲಕ ನಿಮಗೆ ಕಳುಹಿಸಬಹುದು. ಆ್ಯಪ್‌ನಲ್ಲಿನ ಸಂದೇಶಗಳು/ಫ್ಯಾಕ್ಸಿಮೈಲ್/SMS/ಇಮೇಲ್ ಮೂಲಕ ಕಳುಹಿಸಲಾದ ಸಂವಹನ ಮತ್ತು ಸೂಚನೆಗಳನ್ನು ಕಳುಹಿಸುವ ವಾಹಕವು ತಡಮಾಡಿದ ಹೊರತಾಗಿಯೂ ಅದೇ ದಿನ ನೀವು ಕಳುಹಿಸಲಾಗಿದೆ ಮತ್ತು ನೀವು ಅದನ್ನು ಸ್ವೀಕರಿಸಿರುವಿರಿ ಎಂದು ಪರಿಗಣಿಸಲಾಗುತ್ತದೆ. ಭಾರತದಲ್ಲಿ ಪ್ರಿ-ಪೇಯ್ಡ್ ಮೇಲ್ ಮೂಲಕ ಕಳುಹಿಸಲಾದ ಸಂವಹನ ಮತ್ತು ಸೂಚನೆಗಳನ್ನು ಪೋಸ್ಟ್ ಮೂಲಕ ಕಳುಹಿಸಿದರೆ ಪೋಸ್ಟ್ ಮಾಡಿದ ದಿನಾಂಕದ ನಂತರದ ದಿನದಂದು ತಲುಪಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ, ಮತ್ತು ಭಾರತದ ಹೊರಗೆ ಕಳುಹಿಸಿದರೆ ಪೋಸ್ಟ್ ಮಾಡಿದ ದಿನಾಂಕದಿಂದ ಐದು (5) ದಿನಗಳ ನಂತರ ವಿತರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಸದ್ಯಕ್ಕೆ, Debit card ಲಿಂಕ್ ಆಗಿರುವ digibank ಅಪ್ಲಿಕೇಶನ್‌ನಲ್ಲಿ ಸಂಪರ್ಕ ಲಭ್ಯವಿರುತ್ತದೆ.

5.28.2 ದಾಖಲೆಗಳ ಸೇವೆ

ನಾವು ನಿಮಗೆ ಸಮನ್ಸ್, ಸ್ಟೇಟ್‌ಮೆಂಟ್ ಆಫ್ ಕ್ಲೇಮ್ ಅಥವಾ ಯಾವುದೇ ಇತರ ಕಾನೂನು ಪ್ರಕ್ರಿಯೆ ಅಥವಾ ವೈಯಕ್ತಿಕ ಸೇವೆಯ ಅಗತ್ಯವಿರುವ ದಾಖಲೆಯನ್ನು ವೈಯಕ್ತಿಕವಾಗಿ ತಲುಪಿಸುವ ಮೂಲಕ, ಸಾಮಾನ್ಯ ಪೋಸ್ಟ್ ಮೂಲಕ ಕಳುಹಿಸುವ ಮೂಲಕ ಅಥವಾ ನಿಮ್ಮ ಕೊನೆಯ ತಿಳಿದಿರುವ ವಿಳಾಸಕ್ಕೆ(ಅಂಚೆ ಕಚೇರಿ ವಿಳಾಸ ಅಥವಾ ಖಾಸಗಿ ನಿವಾಸ ಅಥವಾ ವ್ಯಾಪಾರ ನಿವಾಸ ಅಥವಾ ಇನ್ಯಾವುದೇ ಆಗಿರಲಿ) ತಲುಪಿಸುವ ಮೂಲಕ ನಿಮಗೆ ಸೇವೆ ಸಲ್ಲಿಸಬಹುದು. ನಾವು ನಿಮಗೆ ದಾಖಲೆಗಳನ್ನು ವೈಯಕ್ತಿಕವಾಗಿ ತಲುಪಿಸಿದರೆ ತಲುಪಿದ ದಿನಾಂಕದಂದು ಅಥವಾ ಅವುಗಳನ್ನು ಪೋಸ್ಟ್ ಮಾಡಿದ್ದರೆ ಪೋಸ್ಟ್ ಮಾಡಿದ ದಿನಾಂಕದ ಮರುದಿನ ನಿಮಗೆ ಸರಿಯಾದ ಸೇವೆ ಸಲ್ಲಿಸಿದ್ದೇವೆ ಎಂದು ಪರಿಗಣಿಸಲಾಗುತ್ತದೆ. ಈ ಎರಡು (2)

ಸೇವಾ ಮಾಧ್ಯಮಗಳ ಜೊತೆಗೆ, ಕಾನೂನು ಅನುಮತಿಸುವ ಯಾವುದೇ ಇತರ ವಿಧಾನದಲ್ಲಿ ನಾವು ನಿಮಗೆ ಸೇವೆ ಸಲ್ಲಿಸಬಹುದು.

5.29 ಇತರೆ

5.29.1 ವೆಚ್ಚಗಳ ವಸೂಲಾತಿ

ಈ ಒಪ್ಪಂದದ ನಿಯಮ ಮತ್ತು ಷರತ್ತುಗಳನ್ನು ನೀವು ಉಲ್ಲಂಘಿಸಿದ ಪರಿಣಾಮವಾಗಿ ಅಥವಾ ನಮ್ಮ ಯಾವುದೇ ಹಕ್ಕುಗಳ ಜಾರಿಯಿಂದ ನಮಗೆ ಉಂಟಾಗುವ ಯಾವುದೇ ವೆಚ್ಚಗಳು, ಶುಲ್ಕಗಳು ಅಥವಾ ವೆಚ್ಚಗಳನ್ನು (ಕಾನೂನು ವೆಚ್ಚಗಳು ಸೇರಿದಂತೆ) ಪೂರ್ಣ ನಷ್ಟಪರಿಹಾರದ ಆಧಾರದ ಮೇಲೆ ನಾವು ನಿಮ್ಮಿಂದ ವಸೂಲಿ ಮಾಡಬಹುದು.

5.29.2 ವಿದೇಶಿ ಕರೆನ್ಸಿಯನ್ನು ಒಳಗೊಂಡ ವಹಿವಾಟುಗಳು

ಯಾವುದೇ ಕಾರ್ಡ್ ವಹಿವಾಟಿನ ಕರೆನ್ಸಿಯು ನಿಮ್ಮ digiSavings ನಿರ್ವಹಿಸುವ ಕರೆನ್ಸಿಗಿಂತ ಭಿನ್ನವಾಗಿದ್ದರೆ, ಅಂತಹ ವಹಿವಾಟುಗಳನ್ನು ನಿಮ್ಮ ಖಾತೆಯ ಕರೆನ್ಸಿಗೆ ಅಥವಾ ನಾವು ನಿರ್ಧರಿಸಬಹುದಾದಂತಹ ವಿನಿಮಯ ದರದಲ್ಲಿ ಯಾವುದೇ ಇತರ ಕರೆನ್ಸಿಗೆ ಪರಿವರ್ತಿಸಲು ನಾವು ಅರ್ಹರಾಗಿದ್ದೇವೆ; ಮತ್ತು Debit card ವಹಿವಾಟಿನ ಮೊತ್ತಕ್ಕೆ ನಿಮ್ಮ digiSavings ಅನ್ನು ಡೆಬಿಟ್ ಮಾಡುತ್ತೇವೆ. ಅನ್ವಯವಾಗುವಂತೆ, ಈ ನಿಯಮ ಮತ್ತು ಷರತ್ತುಗಳ ಅಡಿಯಲ್ಲಿ ನೀವು ನಮಗೆ ಪಾವತಿಸಬೇಕಾದ ಎಲ್ಲಾ ಮೊತ್ತಗಳನ್ನು ನಿಮ್ಮ ಖಾತೆಗೆ ಡೆಬಿಟ್ ಮಾಡಬಹುದು ಮತ್ತು ಈ ಉದ್ದೇಶಕ್ಕಾಗಿ ಕ್ರೆಡಿಟ್ ಮತ್ತು ಶುಲ್ಕಗಳನ್ನು ನಿಮ್ಮ ಖಾತೆಯ ಕರೆನ್ಸಿಗೆ ನಾವು ನಿರ್ಧರಿಸಬಹುದಾದಂತಹ ವಿನಿಮಯ ದರದಲ್ಲಿ ಪರಿವರ್ತಿಸಬಹುದು.

5.29.3 ನಿಮ್ಮ ಸೂಚನೆಗಳು

ನೀವು ಎಲ್ಲಾ ವಿನಂತಿ ಅಥವಾ ಸೂಚನೆಗಳನ್ನುdigibank ಅಪ್ಲಿಕೇಶನ್ ಮೂಲಕ ಮಾಡಬೇಕು. ಇದು ಸಾಧ್ಯವಾಗದಿದ್ದಲ್ಲಿ, ಅವುಗಳನ್ನು ನಿಮ್ಮ ಹತ್ತಿರದ DBS ಬ್ಯಾಂಕ್ ಶಾಖೆಗೆ ಲಿಖಿತವಾಗಿ ಸಲ್ಲಿಸಬಹುದು. ಎಲೆಕ್ಟ್ರಾನಿಕ್ ಮೇಲ್ ಮೂಲಕ ನಿಮ್ಮಿಂದ ಯಾವುದೇ ಸೂಚನೆಯನ್ನು ಮತ್ತು ಟೆಲಿಫೋನ್ ವಿಷಯದಲ್ಲಿ, ನೀವು ನಿಜವಾಗಿ ಅಂತಹ ಸೂಚನೆಗಳನ್ನು ನೀಡದಿದ್ದರೂ ಸಹ ನೀವು ನೀಡಿರಬಹುದು ಎಂದು ನಾವು ನಂಬುವ ಸೂಚನೆಯನ್ನು ಸ್ವೀಕರಿಸಲು ನಾವು ಆಯ್ಕೆ ಮಾಡಬಹುದು.

5.29.4 ನಷ್ಟಪರಿಹಾರ

ಡೆಬಿಟ್ ಕಾರ್ಡ್ ಅಥವಾ ಎಲೆಕ್ಟ್ರಾನಿಕ್ ಸೇವೆಗಳನ್ನು ಲಭ್ಯಗೊಳಿಸಿರುವುದಕ್ಕಾಗಿ ಅಥವಾ ನಿಮ್ಮೊಂದಿಗೆ ಈ ಒಪ್ಪಂದಕ್ಕೆ ಪ್ರವೇಶಿಸಿದ ಕಾರಣಕ್ಕೆ ಅಥವಾ ಈ ಒಪ್ಪಂದದ ಅಡಿಯಲ್ಲಿ ನಮ್ಮ ಹಕ್ಕುಗಳನ್ನು ಜಾರಿಗೊಳಿಸಿದ ಕಾರಣಕ್ಕೆ ಅಥವಾ ಡೆಬಿಟ್ ಕಾರ್ಡ್ ಅಥವಾ ಎಲೆಕ್ಟ್ರಾನಿಕ್ ಸೇವೆಗಳಿಗೆ ಸಂಬಂಧಿಸಿದಂತೆ ನೀವು ನೀಡಬಹುದಾದ ಯಾವುದೇ ಸೂಚನೆಗಳಂತೆ ಕಾರ್ಯನಿರ್ವಹಿಸುವುದಕ್ಕಾಗಿ ಅಥವಾ ನಿಮ್ಮ ಕಡೆಯಿಂದ ಅಥವಾ ನಿಮ್ಮ ಯಾವುದೇ ಏಜೆಂಟ್ ಗಳು ಅಥವಾ ಪ್ರತಿನಿಧಿಗಳ ಕಡೆಯಿಂದ ಯಾವುದೇ ನಿರ್ಲಕ್ಷ್ಯ, ವಂಚನೆ ಮತ್ತು/ಅಥವಾ ದುಷ್ಕೃತ್ಯಕ್ಕಾಗಿ ಅಥವಾ ನೀವು ಈ ಒಪ್ಪಂದದ ಉಲ್ಲಂಘನೆ, Debit card ಮತ್ತು/ಅಥವಾ PIN ಅನ್ನು ಮೋಸ/ಅನಧಿಕೃತ/ನಕಲು/ತಪ್ಪಾಗಿ ಬಳಕೆ/ದುರುಪಯೋಗ ಮಾಡಿದ್ದಕ್ಕಾಗಿ ನಾವು ನೇರವಾಗಿ ಅಥವಾ ಪರೋಕ್ಷವಾಗಿ ತಾಳಿದ ಅಥವಾ ಅನುಭವಿಸಿದ  ಸಾಲಿಸಿಟರ್ ಮತ್ತು ಕ್ಲೈಂಟ್

ಶುಲ್ಕ ಮತ್ತು ವೆಚ್ಚಗಳು (ಕಾನೂನು ಅಥವಾ ಇತರ) ಸೇರಿದಂತೆ ಯಾವುದೇ ಹೊಣೆಗಾರಿಕೆ, ನಷ್ಟ, ಹಾನಿಗೆ ನೀವು ನಮಗೆ ಪರಿಹಾರವನ್ನು ನೀಡುತ್ತೀರಿ.

5.29.5 ನಿಯಮ ಮತ್ತು ಷರತ್ತುಗಳು

ಈ ಒಪ್ಪಂದದ ಜೊತೆಗೆ, Debit card ಮತ್ತು/ಅಥವಾ ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯು ನಮ್ಮ ಚಾಲ್ತಿಯಲ್ಲಿರುವ ನಿಯಮಗಳು ಮತ್ತು ಷರತ್ತುಗಳನ್ನು ನಿಯಂತ್ರಿಸುವ ಖಾತೆಗಳಿಗೆ ಒಳಪಟ್ಟಿರುತ್ತದೆ. ಈ ಒಪ್ಪಂದ ಮತ್ತು ನಿಯಂತ್ರಿಸುವ ಖಾತೆಗಳ ನಿಯಮ ಮತ್ತು ಷರತ್ತುಗಳನ್ನು ನಡುವೆ ಯಾವುದೇ ವಿವಾದ ಅಥವಾ ಭಿನ್ನಾಭಿಪ್ರಾಯವಿದ್ದರೆ, ಯಾವುದರ ನಿಯಮಗಳು ಜಾರಿಯಲ್ಲಿರುತ್ತವೆ ಎಂಬುದನ್ನು ನಿರ್ಧರಿಸುವುದು ಬ್ಯಾಂಕ್ ವಿವೇಚನೆಯಲ್ಲಿರುತ್ತದೆ.

5.29.6 ತೀವ್ರತೆ

ಒಪ್ಪಂದದ ಯಾವುದೇ ನಿಯಮವು ಕಾನೂನುಬಾಹಿರವಾಗಿದ್ದರೆ ಅಥವಾ ಯಾವುದೇ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಜಾರಿಗೊಳಿಸಲಾಗದಿದ್ದರೆ ಅಂತಹ ಕಾನೂನಿನಿಂದ ಅನುಮತಿಸಲಾದ ಮಟ್ಟಿಗೆ ಅದನ್ನು ಈ ಒಪ್ಪಂದದಿಂದ ಬೇರ್ಪಡಿಸಲಾಗುತ್ತದೆ ಮತ್ತು ಈ ಒಪ್ಪಂದದ ಇತರ ನಿಯಮಗಳನ್ನು ಮಾರ್ಪಡಿಸಲು ಸಾಧ್ಯವಿರುವಲ್ಲಿ ನಿಷ್ಪರಿಣಾಮಕಾರಿಯಾಗುತ್ತದೆ.

5.29.7 ಮನ್ನಾ ಇಲ್ಲ

ಈ ಒಪ್ಪಂದದ ಅಡಿಯಲ್ಲಿರುವ ಯಾವುದೇ ಹಕ್ಕು ಅಥವಾ ಪರಿಹಾರವನ್ನು ಚಲಾಯಿಸಲು ನಾವು ವಿಫಲವಾದರೆ ಅಥವಾ ನಮ್ಮ ಕಡೆಯಿಂದ ತಡವಾದರೆ ಈ ಒಪ್ಪಂದವು ಅದರ ಮನ್ನಾ ಆಗಿ ಕಾರ್ಯನಿರ್ವಹಿಸುತ್ತದೆ, ಯಾವುದೇ ಹಕ್ಕು ಅಥವಾ ಪರಿಹಾರದ ಏಕ ಅಥವಾ ಭಾಗಶಃ ಚಲಾವಣೆಯು ಯಾವುದೇ ಹೆಚ್ಚಿನ ಅಥವಾ ಇತರ ಚಲಾವಣೆಯನ್ನು ಅಥವಾ ಅದರ ಇತರ ಚಲಾವಣೆ ಅಥವಾ ಯಾವುದೇ ಇತರ ಹಕ್ಕು ಅಥವಾ ಪರಿಹಾರದ ಚಲಾವಣೆಯನ್ನು ತಡೆಯುವುದಿಲ್ಲ. ಈ ಒಪ್ಪಂದದಲ್ಲಿ ನಮ್ಮ ಹಕ್ಕುಗಳು ಮತ್ತು ಪರಿಹಾರಗಳು ಸಮಗ್ರವಾಗಿವೆ ಮತ್ತು ಕಾನೂನು ಒದಗಿಸುವ ಯಾವುದೇ ಇತರ ಹಕ್ಕುಗಳು ಅಥವಾ ಪರಿಹಾರಗಳನ್ನು ಇದರಿಂದ ಹೊರತುಪಡಿಸಿಲ್ಲ.

5.29.8 ಎಲೆಕ್ಟ್ರಾನಿಕ್ ವಹಿವಾಟುಗಳು/Debit Card ಅನ್ನು ನಿಯಂತ್ರಿಸುವ ನಿಯಮ ಮತ್ತು ಷರತ್ತುಗಳು

ನಿಮ್ಮ ಕೋರಿಕೆಯ ಮೇರೆಗೆ, ನಾವು ನಿಮಗೆ ಭೌತಿಕ ಡೆಬಿಟ್ ಕಾರ್ಡ್ ನೀಡಬಹುದು, ಅದನ್ನು ನಿಮ್ಮ ಹೊಣೆಯಲ್ಲಿ ಯಾವುದೇ ಮಾಧ್ಯಮದ ಮೂಲಕ ನಿಮಗೆ ಕಳುಹಿಸಬಹುದು. ಸದ್ಯಕ್ಕೆ, PIN ಅನ್ನು digibank ಆ್ಯಪ್‌ನಲ್ಲಿ ರಚಿಸಬಹುದು.

ಮೇಲೆ ತಿಳಿಸಿದ ಯಾವುದೇ ಘಟನೆ ಜರುಗಿದ ಸಂದರ್ಭದಲ್ಲಿ, ನಮ್ಮ ವಿವೇಚನೆಯ ಮೇರೆಗೆ, ಎಲೆಕ್ಟ್ರಾನಿಕ್ ಸೇವೆಗಳಿಗೆ ಚಾಲ್ತಿಯಲ್ಲಿರುವ ನಿಯಮ ಮತ್ತು ಷರತ್ತುಗಳ ಆಧಾರದ ಮೇಲೆ ಬದಲಿ PIN ಮತ್ತು/ಅಥವಾ Debit card ವಿತರಿಸಬಹುದು ಹಾಗೂ ಅದಕ್ಕಾಗಿ ಬದಲಾವಣೆಯ ಶುಲ್ಕವನ್ನು ವಿಧಿಸಬಹುದು. ಈ ಸಂದರ್ಭದಲ್ಲಿ PIN ಅನ್ನು digibank ಆ್ಯಪ್‌ನಿಂದಲೇ ಪಡೆಯಬಹುದು.

5.29.9 ಎಲೆಕ್ಟ್ರಾನಿಕ್ ಸೇವೆಗಳ ಬಳಕೆ

ನಾವು ಮತ್ತು/ಅಥವಾ ಭಾಗವಹಿಸುವವರು ಯಾವುದೇ ಸಮಯದಲ್ಲಿ ನಿಮಗೆ ಸೂಚನೆ ನೀಡದೆ

a. ಎಲೆಕ್ಟ್ರಾನಿಕ್ ಸೇವೆಗಳು, ವಹಿವಾಟಿನ ಮಿತಿಗಳು, ಕಾರ್ಯಾಚರಣೆ ಸಮಯಗಳು, ಎಲೆಕ್ಟ್ರಾನಿಕ್ ಸೇವೆಗಳ ಮೂಲಕ ಲಭ್ಯವಿರುವ ಸೌಲಭ್ಯಗಳು ಮತ್ತು ಸೇವೆಗಳ ಆವರ್ತನ ಮತ್ತು ಬಳಕೆಯ ವಿಧಾನವನ್ನು ನಿರ್ಧರಿಸಬಹುದು ಮತ್ತು ಬದಲಿಸಬಹುದು ಅಥವಾ
b. ಯಾವುದೇ ಭಾಗೀದಾರರನ್ನು ಸೇರಿಸಬಹುದು ಅಥವಾ ತೆಗೆದುಹಾಕಬಹುದು. ನಿಮ್ಮ ಅಧಿಕಾರ, ಪರಿಜ್ಞಾನ ಅಥವಾ ಒಪ್ಪಿಗೆಯೊಂದಿಗೆ ಅಥವಾ ಒಪ್ಪಿಗೆ ಇಲ್ಲದೆ ಯಾವುದೇ ವ್ಯಕ್ತಿಯಿಂದ ಎಲೆಕ್ಟ್ರಾನಿಕ್ ಸೇವೆಗಳ ಬಳಕೆ ಅಥವಾ ಉದ್ದೇಶಿತ ಬಳಕೆಯಿಂದ ಮಾಡಿದ ಎಲ್ಲಾ ವಹಿವಾಟುಗಳಿಗೆ ನೀವು ಜವಾಬ್ದಾರರಾಗಿರುತ್ತೀರಿ ಮತ್ತು ಅಂತಹ ಯಾವುದೇ ಬಳಕೆ ಅಥವಾ ಉದ್ದೇಶಿತ ಬಳಕೆಗೆ ಸಂಬಂಧಿಸಿದಂತೆ ನಮ್ಮ ವಿರುದ್ಧ ಹಕ್ಕು ಸಾಧಿಸಬಾರದು.

ನಾವು ಮತ್ತು/ಅಥವಾ ಭಾಗೀದಾರರು ಯಾವುದೇ ಸಮಯದಲ್ಲಿ, ನಿಮಗೆ ಸೂಚನೆ ನೀಡದೆ ಮತ್ತು ಯಾವುದೇ ಕಾರಣ ನೀಡದೆ, ಮತ್ತು ನೀವು ಅಥವಾ ಯಾವುದೇ ಮೂರನೇ ವ್ಯಕ್ತಿಯಿಂದ ಅನುಭವಿಸಿದ ಯಾವುದೇ ಅನಾನುಕೂಲತೆ, ನಷ್ಟ, ಹಾನಿ ಅಥವಾ ಅಪಾಯಕ್ಕೆ ಹೊಣೆಗಾರಿಕೆಯಿಲ್ಲದೆ:

a. ಯಾವುದೇ ಅಥವಾ ಎಲ್ಲಾ ಎಲೆಕ್ಟ್ರಾನಿಕ್ ಸೇವೆಗಳನ್ನು ಮಿತಿಗೊಳಿಸಬಹುದು, ಅಮಾನತುಗೊಳಿಸಬಹುದು ಅಥವಾ ಕೊನೆಗೊಳಿಸಬಹುದು; ಅಥವಾ
b. ಯಾವುದೇ ವಹಿವಾಟನ್ನು ಅನುಮತಿಸದೇ ಇರಬಹುದು ಅಥವಾ ನಮಗೆ ಸೂಕ್ತವೆನಿಸುವ ಷರತ್ತುಗಳಿಗೆ ಒಳಪಟ್ಟು ವ್ಯವಹಾರವನ್ನು ಅನುಮತಿಸಬಹುದು; ಅಥವಾ
c. ಎಲೆಕ್ಟ್ರಾನಿಕ್ ಸೇವೆಗಳನ್ನು ಬಳಸಲು ನಿಮ್ಮ ಅಥವಾ ಯಾವುದೇ ಬಳಕೆದಾರರ ಹಕ್ಕು ಮತ್ತು ಅಧಿಕಾರವನ್ನು ಹಿಂತೆಗೆದುಕೊಳ್ಳಬಹುದು ಅಥವಾ ಅಮಾನತುಗೊಳಿಸಬಹುದು; ಅಥವಾ
d. ಯಾವುದೇ Debit card ಮತ್ತು/ಅಥವಾ PIN ಅನ್ನು ತಡೆದಿಟ್ಟುಕೊಳ್ಳಬಹುದು ಅಥವಾ ತಿರಸ್ಕರಿಸಬಹುದು.

ಭಾಗವಹಿಸುವವರ ವಿರುದ್ಧ ಯಾವುದೇ ಕ್ಲೈಮ್ ಅಥವಾ ವಿವಾದಗಳು ನಿಮ್ಮ ಮತ್ತು ಭಾಗವಹಿಸುವವರ ನಡುವೆ ಇತ್ಯರ್ಥಗೊಳ್ಳಬೇಕು. ಈ ವಿಷಯದಲ್ಲಿ ನೀವು ನಮ್ಮ ವಿರುದ್ಧ ಹಕ್ಕು ಸಾಧಿಸುವಂತಿಲ್ಲ.

Visa ವರ್ಚುವಲ್ International Debit Card/digiSavings ವಿಷಯದಲ್ಲಿ, ಎಲೆಕ್ಟ್ರಾನಿಕ್ ಸೇವೆಗಳ ಮೂಲಕ ಡೆಪಾಸಿಟ್ ಮಾಡಿದ ಚೆಕ್‌ಗಳ ನಗದು ಮತ್ತು ಆದಾಯವನ್ನು (ನಿಮ್ಮ ಖಾತೆಯಿರುವ ಬ್ಯಾಂಕ್ ಚೆಕ್‌ಗಳು/ಹೌಸ್ ಚೆಕ್‌ಗಳು ಸೇರಿದಂತೆ) ನಮ್ಮಿಂದ ಸಂಗ್ರಹಿಸಿ ಪರಿಶೀಲಿಸುವವರೆಗೆ ವಿತ್‌ಡ್ರಾ ಮಾಡಲು ಸಾಧ್ಯವಿಲ್ಲ. ಡೆಪಾಸಿಟ್ ಮಾಡಿದ ಮೊತ್ತಕ್ಕೆ ಸಂಬಂಧಿಸಿದಂತೆ ನಿಮ್ಮ ವಿರುದ್ಧ ನಮ್ಮ ನಿರ್ಣಯ ಅಂತಿಮವಾಗಿರುತ್ತದೆ ಮತ್ತು ನೀವು ಅದಕ್ಕೆ ಬದ್ಧರಾಗಿರುತ್ತೀರಿ.

5.29.10 ಪಾವತಿಗಳು, ಶುಲ್ಕಗಳು,ಫೀಗಳು, ವೆಚ್ಚಗಳು ಮತ್ತು ತೆರಿಗೆಗಳು

ನಾವು ಕಾಲಕಾಲಕ್ಕೆ ಸೂಚಿಸಿದಂತೆ ಎಲೆಕ್ಟ್ರಾನಿಕ್ ಸೇವೆಗಳ ನಿಬಂಧನೆಗಾಗಿ ನೀವು ಅಂತಹ ಎಲೆಕ್ಟ್ರಾನಿಕ್ ಸೇವೆಗಳನ್ನು ಬಳಸುತ್ತೀರೊ ಇಲ್ಲವೋ, ಫೀ ಮತ್ತು ಶುಲ್ಕಗಳನ್ನು ಪಾವತಿಸುತ್ತೀರಿ. ಎಲೆಕ್ಟ್ರಾನಿಕ್ ಸೇವೆಗಳ ನಿಬಂಧನೆ ಮತ್ತು/ಅಥವಾ ಬಳಕೆಗೆ (ಅಧಿಕೃತ ಅಥವಾ ಅನಧಿಕೃತ) ಮತ್ತು ಎಲೆಕ್ಟ್ರಾನಿಕ್ ಸೇವೆಗಳ ನಿಬಂಧನೆ ಮತ್ತು/ಅಥವಾ ಬಳಕೆಯ ಪರಿಣಾಮವಾಗಿ ನಾವು ಅನುಭವಿಸಿದ ನಷ್ಟ ಹಾಗೂ ಯಾವುದೇ ಇತರ ಹೊಣೆಗಾರಿಕೆಗಳ ಎಲ್ಲಾ ಫೀ, ಶುಲ್ಕಗಳು, ವಿತ್‌ಡ್ರಾವಲ್‌ಗಳು ಮತ್ತು ಪಾವತಿಗಳಿಗೆ ನಾವು ನಿಮ್ಮ ಖಾತೆಯನ್ನು ಡೆಬಿಟ್ ಮಾಡುವ ಅಧಿಕಾರ

DBS Live more, Bank less

ಹೊಂದಿದ್ದೇವೆ. ಹಣದ ಪಾವತಿಗಾಗಿ ಯಾವುದೇ ವಿನಂತಿಯನ್ನು ಪೂರೈಸಲು ಅಥವಾ ಯಾವುದೇ ಹೊಣೆಗಾರಿಕೆಯನ್ನು ಪೂರೈಸಲು ಖಾತೆ ಸಾಕಷ್ಟು ಹಣವನ್ನು ಹೊಂದಿಲ್ಲದಿದ್ದರೆ, ಅಂತಹ ಪಾವತಿ ಅಥವಾ ಹೊಣೆಗಾರಿಕೆಯನ್ನು ಪೂರೈಸಲು ನಾವು ನಿಮಗೆ ಕ್ರೆಡಿಟ್ ನೀಡಬಹುದು (ಆದರೆ ಅದಕ್ಕೆ ಬದ್ಧವಾಗಿಲ್ಲ). ನಾವು ನಿರ್ಧರಿಸಿದಂತೆ ಅಂತಹ ದರಗಳು ಅಥವಾ ಮೊತ್ತಗಳಿಗೆ ಬಡ್ಡಿ ಮತ್ತು ಶುಲ್ಕಗಳನ್ನು ಪಾವತಿಸಲು ನೀವು ವಾಗ್ದಾನ ಮಾಡುತ್ತೀರಿ. ವಹಿವಾಟಿಗೆ ಸಂಬಂಧಿಸಿದಂತೆ ಅಥವಾ ಯಾವುದೇ ಖಾತೆಯನ್ನು ಡೆಬಿಟ್ ಮಾಡಲು ಅಥವಾ ಕ್ರೆಡಿಟ್ ಮಾಡಲು, ಒಂದು ಕರೆನ್ಸಿಯನ್ನು ಇನ್ನೊಂದಕ್ಕೆ ಪರಿವರ್ತಿಸುವ ಅಗತ್ಯವಿದ್ದರೆ, ನಾವು ಮತ್ತು/ಅಥವಾ ಭಾಗವಹಿಸುವವರು ನಿರ್ಧರಿಸಿದ ದರದಲ್ಲಿ ಅಂತಹ ಪರಿವರ್ತನೆಗಳನ್ನು ಮಾಡಲು ನಾವು ಅಧಿಕಾರ ಹೊಂದಿದ್ದೇವೆ. ಯಾವುದೇ ಪಾವತಿಯ ಮೇಲೆ GST ವಿಧಿಸಿದರೆ, ನೀವು ಪಾವತಿಸಬೇಕಾದ ಎಲ್ಲಾ ಮೊತ್ತಗಳಿಗೆ ಹೆಚ್ಚುವರಿಯಾಗಿ ಅಂತಹ GST ಅನ್ನು ಪಾವತಿಸುತ್ತೀರಿ ಮತ್ತು ಕಾನೂನಿನ ಪ್ರಕಾರ ನಾವು ಸಂಗ್ರಹಿಸಿ ಪಾವತಿಸಬೇಕಾದ ಅಂತಹ GST ಗಾಗಿ ನೀವು ಮಾಡಿದ ಪಾವತಿಗೆ ನಮಗೆ ಪರಿಹಾರ ನೀಡುತ್ತೀರಿ. ಈ ಒಪ್ಪಂದದಲ್ಲಿ ಅಥವಾ ಸಾಲ ಸೌಲಭ್ಯಗಳಿಗೆ ಸಂಬಂಧಿಸಿದ ಒಪ್ಪಂದದಲ್ಲಿ ಒದಗಿಸಿದ ರೀತಿಯಲ್ಲಿಯೇ ಪಾವತಿಸಬೇಕಾದ ಬಾಕಿ ಇರುವ ಬಡ್ಡಿಯನ್ನು ಒಳಗೊಂಡಂತೆ ಮತ್ತು/ಅಥವಾ ನಾವು ಕಾಲಕಾಲಕ್ಕೆ ಸೂಚಿಸುವಂತೆ ಯಾವುದೇ ಇತರ ಶುಲ್ಕಗಳನ್ನು ಒಳಗೊಂಡಂತೆ ನಾವು ಅಂತಹ GST ಗಾಗಿ ಖಾತೆಯಿಂದ ಡೆಬಿಟ್ ಮಾಡಬಹುದು. ಅಂತಹ ಡೆಬಿಟ್ ಮಾಡುವಿಕೆಯು ಖಾತೆಯು ಓವರ್‌ಡ್ರಾ ಆಗಲು ಕಾರಣವಾದರೂ ಈ ಡೆಬಿಟ್ ಅನ್ನು ಪ್ರಕ್ರಿಯೆಗೊಳಿಸಲಾಗುತ್ತದೆ.

5.29.11 ಹೊಣೆಗಾರಿಕೆ

ನಮ್ಮ ನಿರ್ಲಕ್ಷ್ಯ ಅಥವಾ ಉದ್ದೇಶಪೂರ್ವಕ ಡೀಫಾಲ್ಟ್‌ನಿಂದಾಗಿ ಆದ ನಷ್ಟವನ್ನು ಹೊರತುಪಡಿಸಿ ಎಲೆಕ್ಟ್ರಾನಿಕ್ ಸೇವೆಗಳ ಬಳಕೆಯಿಂದ ಮತ್ತು ಅದರ ಬಳಕೆಗೆ ಸಂಬಂಧಿಸಿದಂತೆ ನೀವು ಅಥವಾ ಯಾವುದೇ ಮೂರನೇ ವ್ಯಕ್ತಿಯಿಂದ ಉಂಟಾಗುವ ಯಾವುದೇ ನಷ್ಟಕ್ಕೆ ನಾವು ಜವಾಬ್ದಾರರಾಗಿರುವುದಿಲ್ಲ. ಈ ಕೆಳಗಿನ ಕಾರಣಗಳಿಂದ ನೀವು ಅಥವಾ ಯಾವುದೇ ಮೂರನೇ ವ್ಯಕ್ತಿಯಿಂದ ಉಂಟಾಗುವ ಯಾವುದೇ ಅನಾನುಕೂಲತೆ, ನಷ್ಟ, ಹಾನಿ ಅಥವಾ ಅಪಾಯಗಳಿಗೆ ನಾವು ಅಥವಾ ಭಾಗವಹಿಸುವವರು ಜವಾಬ್ದಾರರಾಗಿರುವುದಿಲ್ಲ:

a. ಎಲೆಕ್ಟ್ರಾನಿಕ್ ಸೇವೆಗಳಿಗೆ ಸಂಬಂಧಿಸಿದಂತೆ ನೀವು ಅಥವಾ ಬಳಕೆದಾರರು ನೀಡಿದ ಅಥವಾ ನೀಡಬೇಕೆಂದು ಉದ್ದೇಶಿಸಿದ ಯಾವುದೇ ಸೂಚನೆಯ ನಮ್ಮ ಅನುಸರಣೆಗಾಗಿ, ಅಂತಹ ಸೂಚನೆಯಲ್ಲಿ ಒಳಗೊಂಡಿರುವ ಮಾಹಿತಿಯ ಸಮಗ್ರತೆಯು ಪ್ರಸರಣದ ಸಮಯದಲ್ಲಿ ರಾಜಿಯಾಗಿರುವುದಕ್ಕೆ ಅಥವಾ ದುರ್ಬಲಗೊಂಡಿರುವುದಕ್ಕೆ, ಅಂತಹ ಸೂಚನೆಯನ್ನು ಸ್ವೀಕರಿಸುವ ಸೂಕ್ತ ವ್ಯಕ್ತಿಗೆ ಅಂತಹ ರಾಜಿ ಅಥವಾ ದುರ್ಬಲತೆ ಸ್ಪಷ್ಟವಾಗಿ ಕಾಣಿಸದ ಹೊರತು;
b. ನಮ್ಮ ಮತ್ತು/ಅಥವಾ ಭಾಗವಹಿಸುವವರ ಯಾವುದೇ ಕ್ರಿಯೆಯ ಪರಿಣಾಮವಾಗಿ ನೀವು ಯಾವುದೇ ಎಲೆಕ್ಟ್ರಾನಿಕ್ ಸೇವೆಯ ಬಳಕೆಯಿಂದ ವಂಚಿತರಾಗಿದ್ದರೆ; ಅಥವಾ
c. ಸಿಸ್ಟಮ್ ನಿರ್ವಹಣೆ ಅಥವಾ ಸ್ಥಗಿತ/ಯಾವುದೇ ನೆಟ್‌ವರ್ಕ್ ಲಭ್ಯತೆಯಿಲ್ಲದ ಕಾರಣ ಯಾವುದೇ ಎಲೆಕ್ಟ್ರಾನಿಕ್ ಸೇವೆ ಲಭ್ಯವಿಲ್ಲದ ಕಾರಣಕ್ಕೆ; ಅಥವಾ
d. ಈ ಒಪ್ಪಂದದ ಅಡಿಯಲ್ಲಿ ಇರುವ ಅಥವಾ ಇಲ್ಲದ ಯಾವುದೇ ಹೊಣೆಗಾರಿಕೆಗಳನ್ನು ನಾವು ಅಥವಾ ಯಾವುದೇ ಭಾಗೀದಾರರು ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ, ಅಂತಹ ವೈಫಲ್ಯವು  ಯಾವುದೇ ಯಂತ್ರ, ಡೇಟಾ ಪ್ರೊಸೆಸ್ಸಿಂಗ್ ಸಿಸ್ಟಮ್, ಟ್ರಾನ್ಸ್‌ಮಿಷನ್ ಲಿಂಕ್‌ಗೆ ಅಥವಾ ಯಾವುದೇ ಯಾವುದೇ ಎಲೆಕ್ಟ್ರಾನಿಕ್, ಯಾಂತ್ರಿಕ ವ್ಯವಸ್ಥೆ, ಡೇಟಾ ಪ್ರೊಸೆಸ್ಸಿಂಗ್

ಸಿಸ್ಟಮ್ ಅಥವಾ ದೂರಸಂಪರ್ಕ ದೋಷ ಅಥವಾ ವೈಫಲ್ಯ, ವಿದ್ಯುತ್ ಮತ್ತು ವಿದ್ಯುತ್ ವೈಫಲ್ಯ, ನೈಸರ್ಗಿಕ ಪ್ರಕ್ರಿಯೆ, ನಾಗರಿಕ ಅಡಚಣೆ, ಯುದ್ಧ ಅಥವಾ ಯುದ್ಧೋಚಿತ ಹಗೆತನ, ನಾಗರಿಕ ಗಲಭೆಗಳು, ಗಲಭೆಗಳು, ಅಡೆತಡೆಗಳು, ನಿರ್ಬಂಧಗಳು, ವಿಧ್ವಂಸಕತೆ, ಮುಷ್ಕರಗಳು, ಬೀಗಮುದ್ರೆಗಳು, ಬೆಂಕಿ, ಪ್ರವಾಹ, ವಸ್ತು ಅಥವಾ ಕಾರ್ಮಿಕರ ಕೊರತೆ, ಉಪ-ಗುತ್ತಿಗೆದಾರರಿಂದ ವಿತರಣೆಯಲ್ಲಿ ವಿಳಂಬ ಅಥವಾ ನಮ್ಮ ನಿಯಂತ್ರಣದ ಹೊರಗಿನ ಯಾವುದೇ ಘಟನೆಯಿಂದ ಉಂಟಾಗುವ ಅನಧಿಕೃತ ಮತ್ತು/ಅಥವಾ ಕಾನೂನುಬಾಹಿರ ಪ್ರವೇಶದಿಂದ ಉದ್ಭವಿಸಿದರೆ: ಅಥವಾ;

e. ಯಾವುದೇ ಉಪಕರಣಗಳು ಅಥವಾ ಸಾಫ್ಟ್‌ವೇರ್ ಪೂರೈಕೆದಾರರು, ಯಾವುದೇ ಸೇವಾ ಪೂರೈಕೆದಾರರು, ಯಾವುದೇ ನೆಟ್‌ವರ್ಕ್ ಪೂರೈಕೆದಾರರು (ದೂರಸಂಪರ್ಕ ಪೂರೈಕೆದಾರರು, ಇಂಟರ್‌ನೆಟ್ ಬ್ರೌಸರ್ ಪೂರೈಕೆದಾರರು ಮತ್ತು ಇಂಟರ್‌ನೆಟ್ ಆ್ಯಕ್ಸೆಸ್ ಪೂರೈಕೆದಾರರು ಸೇರಿದಂತೆ ಆದರೆ ಇವರಿಗೆ ಸೀಮಿತವಾಗಿಲ್ಲದಂತೆ), ಯಾವುದೇ ಭಾಗವಹಿಸುವವರು, ಅಥವಾ ಮೇಲಿನ ಯಾವುದೇ ಏಜೆಂಟ್ ಅಥವಾ ಉಪಗುತ್ತಿಗೆದಾರರು.
f. ಡೆಬಿಟ್ ಕಾರ್ಡ್ ನೀಡಿದ ದೇಶವನ್ನು ಬಿಟ್ಟು ಬೇರೆ ದೇಶದಲ್ಲಿ ATM ಸೇವೆಗಳ ಲಭ್ಯತೆ ಇಲ್ಲದಿರುವುದು. ಇದು ಅಂತಹ ದೇಶದಲ್ಲಿ ಜಾರಿಯಲ್ಲಿರುವ ಸ್ಥಳೀಯ ನಿಯಮಗಳಿಂದ ನಿಯಂತ್ರಿಸಲ್ಪಡುತ್ತದೆ.
g. ಯಾವುದೇ ಎಲೆಕ್ಟ್ರಾನಿಕ್ ಸೇವೆಯಿಂದ ಡೇಟಾ ಡೌನ್‌ಲೋಡ್ ಮಾಡಿಕೊಳ್ಳುವುದು ನಿಮ್ಮ ಹೊಣೆಯಾಗಿರುತ್ತದೆ, ಯಾವುದೇ ರೀತಿಯಲ್ಲಿ ಡೌನ್‌ಲೋಡ್ ಮಾಡಿದ ಯಾವುದೇ ಡೇಟಾದ ಸಮಗ್ರತೆ ಅಥವಾ ಬಳಕೆಗೆ ನಾವು ಜವಾಬ್ದಾರರಾಗಿರುವುದಿಲ್ಲ.
h. ಎಲೆಕ್ಟ್ರಾನಿಕ್ ಸೇವೆಗಳ ನಿಬಂಧನೆ ಮತ್ತು/ಅಥವಾ ಬಳಕೆಯಿಂದ ಯಾವುದೇ ರೀತಿಯಲ್ಲಿ ಉದ್ಭವಿಸುವ ಯಾವುದೇ ನೇರ, ಪರೋಕ್ಷ, ವಿಶೇಷ ಅಥವಾ ಪರಿಣಾಮವಾಗಿ, ಆರ್ಥಿಕ ಅಥವಾ ಇತರ ಹಾನಿಗಳಿಗೆ ನಾವು ಅಥವಾ ಯಾವುದೇ ಭಾಗವಹಿಸುವವರು ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.

5.29.12 ವಹಿವಾಟುಗಳ ದಾಖಲೆಗಳು

ಲೆಕ್ಕಾಚಾರ ಮತ್ತು/ಅಥವಾ ಪ್ರದರ್ಶಿಸುವಲ್ಲಿ ಉಂಟಾದ ದೋಷಗಳನ್ನು ಹೊರತುಪಡಿಸಿ ನಮ್ಮ ಮತ್ತು ಭಾಗವಹಿಸುವವರ ವಹಿವಾಟಿನ ದಾಖಲೆಗಳು ನಿಮ್ಮ ವಿರುದ್ಧ ನಿರ್ಣಾಯಕವಾಗಿರುತ್ತವೆ ಮತ್ತು ನೀವು ಅದಕ್ಕೆ ಬದ್ಧರಾಗಿರುತ್ತೀರಿ.

5.29.13 ನಮೂದುಗಳನ್ನು ರಿವರ್ಸ್ ಮಾಡುವುದು

ನಿಮ್ಮ ಎಲೆಕ್ಟ್ರಾನಿಕ್ ಸೇವೆಗಳ ಬಳಕೆ ಅಥವಾ ಉದ್ದೇಶಿತ ಬಳಕೆಯ ಪರಿಣಾಮವಾಗಿ ನಾವು ಯಾವುದೇ ಪಾವತಿಯನ್ನು ಮಾಡಿದ್ದರೆ:

a. ಮತ್ತು ಪರಿಣಾಮವಾಗಿ ಖಾತೆ ಡೆಬಿಟ್ ಆಗಿದ್ದರೆ, ಆದರೆ ತಪ್ಪಾಗಿ ಡೆಬಿಟ್ ಅನ್ನು ರಿವರ್ಸ್ ಮಾಡಿದ್ದರೆ ಅಥವಾ ಖಾತೆ ಡೆಬಿಟ್ ಆಗಿಯೇ ಇರದಿದ್ದರೆ; ಅಥವಾ
b. ಖಾತೆಯಲ್ಲಿ ಯಾವುದೇ ಪಾವತಿ ಸೂಚನೆಯನ್ನು ನೀಡಿದ ನಂತರ ಆದರೆ ಅಂತಹ ಪಾವತಿ ಸೂಚನೆಯನ್ನು ಮನ್ನಣೆಗೊಳಿಸುವ ಮೊದಲು,

ನಂತರ ನಾವು ಪಾವತಿಸಿದ ಮೊತ್ತಕ್ಕೆ ಖಾತೆಯಿಂದ ಡೆಬಿಟ್ ಮಾಡುವ ಮೂಲಕ ಖಾತೆಯನ್ನು ಸರಿಪಡಿಸಲು ನಾವು ಅರ್ಹರಾಗಿದ್ದೇವೆ.

5.29.14 ನಿಮ್ಮ ಸೂಚನೆಗಳು

DBS Live more, Bank less

ಎಲ್ಲಾ ವಿನಂತಿಗಳು ಅಥವಾ ಸೂಚನೆಗಳನ್ನು ಡಿಜಿಬ್ಯಾಂಕ್ ಅಪ್ಲಿಕೇಶನ್ ಮೂಲಕ ಸಲ್ಲಿಸಬಹುದು. ಎಲೆಕ್ಟ್ರಾನಿಕ್ ಮೇಲ್ ಮೂಲಕ ನಿಮ್ಮಿಂದ ಯಾವುದೇ ಸೂಚನೆಯನ್ನು ಮತ್ತು ಟೆಲಿಫೋನ್ ವಿಷಯದಲ್ಲಿ, ನೀವು ನಿಜವಾಗಿ ಅಂತಹ ಸೂಚನೆಗಳನ್ನು ನೀಡದಿದ್ದರೂ ಸಹ ನೀವು ನೀಡಿರಬಹುದು ಎಂದು ನಾವು ನಂಬುವ ಸೂಚನೆಯನ್ನು ಸ್ವೀಕರಿಸಲು ಆಯ್ಕೆ ಮಾಡಬಹುದು. ಯಾವುದೇ ಲಿಖಿತವಲ್ಲದ ಸೂಚನೆಗಳನ್ನು ನಿಮ್ಮ ಹೊಣೆಯಲ್ಲಿ ಸ್ವೀಕರಿಸಲಾಗುತ್ತದೆ ಹಾಗೂ ನೀವು ಅನುಭವಿಸಬಹುದಾದ ಯಾವುದೇ ನಷ್ಟ ಅಥವಾ ಹಾನಿಗೆ ನಾವು ಜವಾಬ್ದಾರರಾಗಿರುವುದಿಲ್ಲ.

5.29.15 ಚಾಲ್ತಿಯಲ್ಲಿರುವ ಈ ನಿಯಮ ಮತ್ತು ಷರತ್ತುಗಳ ನಿಬಂಧನೆಗಳು

ಈ ನಿಯಮ ಮತ್ತು ಷರತ್ತುಗಳ ನಿಬಂಧನೆಗಳು ಯಾವುದೇ ಖಾತೆ(ಗಳು) ಅಥವಾ ಎಲೆಕ್ಟ್ರಾನಿಕ್ ಸೇವೆಗಳಿಗೆ ಸಂಬಂಧಿಸಿದಂತೆ ನೀವು ನಮ್ಮೊಂದಿಗೆ ಹೊಂದಿರಬಹುದಾದ ಯಾವುದೇ ಒಪ್ಪಂದ, ನಮ್ಮ ಮತ್ತು ನಿಮ್ಮ ನಡುವಿನ ಯಾವುದೇ ಇತರ ಒಪ್ಪಂದ(ಗಳು) ಅಥವಾ ಅಂತಹ ಯಾವುದೇ ಒಪ್ಪಂದ(ಗಳ) ಅಡಿಯಲ್ಲಿ ಉದ್ಭವಿಸುವ ನಮ್ಮ ಯಾವುದೇ ಹಕ್ಕುಗಳು ಈ ನಿಬಂಧನೆಗಳಿಗೆ ಪೂರಕವಾಗಿರುತ್ತವೆ ಹಾಗೂ ಅವುಗಳನ್ನು ಬದಲಿಸುವುದಿಲ್ಲ. ಈ ನಿಯಮ ಮತ್ತು ಷರತ್ತುಗಳ ನಿಬಂಧನೆಗಳು ಮತ್ತು ಈ ನಿಯಮಗಳು ಮತ್ತು ಷರತ್ತುಗಳ ಅಡಿಯಲ್ಲಿ ಒಳಗೊಂಡಿರುವ ವಿಷಯದ ಕುರಿತು ಅಂತಹ ಯಾವುದೇ ಇತರ ಒಪ್ಪಂದದ ನಿಬಂಧನೆಗಳಲ್ಲಿ ತಕರಾರಿದ್ದರೆ, ಈ ನಿಯಮ ಮತ್ತು ಷರತ್ತುಗಳ ನಿಬಂಧನೆಗಳನ್ನು ಪರಿಗಣಿಸಲಾಗುತ್ತದೆ.

5.29.16 ಹೆಚ್ಚುವರಿ ಪ್ರಯೋಜನಗಳು, ಸೇವೆಗಳು ಅಥವಾ ಕಾರ್ಯಕ್ರಮಗಳು

ನಿಮ್ಮ Debit card ಬಳಕೆಗೆ ಸಂಬಂಧಿಸಿದಂತೆ ನಮ್ಮ ವಿವೇಚನೆಯ ಮೇರೆಗೆ, ಹೆಚ್ಚುವರಿ ಸೇವೆ, ಪ್ರಯೋಜನ ಅಥವಾ ಕಾರ್ಯಕ್ರಮಗಳನ್ನು ಒದಗಿಸಬಹುದು. ಅಂತಹ ಹೆಚ್ಚುವರಿ ಸೇವೆಗಳನ್ನು ಒದಗಿಸಿದರೆ, ಅದು ನಿಮ್ಮೊಂದಿಗೆ ನಮ್ಮನ್ನು ಕಾನೂನು ಸಂಬಂಧದ ಭಾಗವಾಗಿಸುವುದಿಲ್ಲ ಮತ್ತು ನಾವು ನಿಮಗೆ ಸೂಚನೆ ನೀಡದೆ ಯಾವುದೇ ಸಮಯದಲ್ಲಿ ಈ ಸೇವೆಗಳನ್ನು ಹಿಂಪಡೆಯಬಹುದು ಅಥವಾ ಬದಲಾಯಿಸಬಹುದು. ಈ ಹೆಚ್ಚುವರಿ ಸೇವೆಗಳ ಪ್ರಯೋಜನ ಅಥವಾ ಕಾರ್ಯಕ್ರಮಗಳು ತಮ್ಮದೇ ಆದ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರಬಹುದು.

5.29.17 ಹಕ್ಕುಗಳನ್ನು ಚಲಾಯಿಸಲು ವಿಳಂಬ ಅಥವಾ ವಿಫಲತೆ

ಈ ಒಪ್ಪಂದದ ಅಡಿಯಲ್ಲಿ ನಮ್ಮ ಹಕ್ಕು ಮತ್ತು/ಅಥವಾ ಪರಿಹಾರಗಳನ್ನು ಚಲಾಯಿಸಲು ನಮ್ಮಿಂದ ಯಾವುದೇ ವಿಳಂಬವಾದಲ್ಲಿ ಅಥವಾ ಅದರ ವೈಫಲ್ಯದಿಂದ ನಮ್ಮ ಯಾವುದೇ ಹಕ್ಕುಗಳು ಕಳೆದುಹೋಗುವುದಿಲ್ಲ. ಹಾಗೆ ಆಗಬೇಕಾದರೆ, ಅಂತಹ ಕಳೆಯುವಿಕೆಯನ್ನು ನಾವು ನಿಮಗೆ ನಿರ್ದಿಷ್ಟವಾಗಿ ಲಿಖಿತವಾಗಿ ತಿಳಿಸಿದರೆ ಮಾತ್ರ ನಮ್ಮ ಹಕ್ಕುಗಳನ್ನು ಮನ್ನಾ ಮಾಡಿದ್ದೇವೆ ಎಂದು ಪರಿಗಣಿಸಬಹುದು.

5.29.18 ಆಡಳಿತದಲ್ಲಿರುವ ಕಾನೂನು

ಈ ನಿಯಮ ಮತ್ತು ಷರತ್ತುಗಳು ಭಾರತೀಯ ಕಾನೂನಿಗೆ ಒಳಪಟ್ಟಿರುತ್ತವೆ ಮತ್ತು ನೀವು ಈ ಮೂಲಕ ಭಾರತದ ಮುಂಬೈ ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೆ ಸಲ್ಲಿಸುತ್ತೀರಿ.